ಸಂಸ್ಕಾರ ತರಂಗಿಣೀ

ಪುಷ್ಪ – 10

ದ್ವಿತೀಯ ಮುದ್ರಣ

ಧರ್ಮಸಂದೇಶ

ಸಂಸ್ಕೃತಿ – ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು

ಅಕ್ಷರ ಜೋಡಣೆ

ಶ್ರೀಮತಿ ಭಾರತೀ ಶರ್ಮಾ

ಅನುವಾದಕ ಲೇಖಕರು
ಮತ್ತು ಪ್ರಕಾಶಕರು

ವೇ॥ಬ್ರ॥ ಶ್ರೀ
ಎ.ಸಿ. ಶಕ್ತಿಧರ ಶರ್ಮಾ

ಸಂಚಾಲಕರು

ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಶಿವಕುಮಾರ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಕಿರಣ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವೇದವೇದಾಂಗ ಮಹಾ ಮಹೋಪಾಧ್ಯಾಯರು
ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು

ಸಲಹೆಗಾರರು

ವಿದ್ವಾನ್ ವೇ॥ಬ್ರ॥ ಶ್ರೀ ವೇಂಕಟೇಶ ಅವಧಾನಿಗಳು

ಪ್ರಧಾನ ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥ ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು

ಸಂಸ್ಕಾರ ತರಂಗಿಣೀ

ಪುಷ್ಪ – 10

ದ್ವಿತೀಯ ಮುದ್ರಣ

ಧರ್ಮಸಂದೇಶ

ಸಂಸ್ಕೃತಿ – ಆಚಾರ

ಧರ್ಮಶಾಸ್ತ್ರಗಳ

ವಿಶೇಷ ಸ್ವಾರಸ್ಯ ವಿಚಾರಗಳು

ಈ ಗ್ರಂಥರತ್ನದ ಪ್ರಾಯೋಜಕರು



ಶ್ರೀ ಸೋಮಶೇಖರ ಶ್ರೀಮತಿ ಸುಬ್ಬಲಕ್ಷ್ಮೀ ಶ್ರೀ ಎಸ್.ವೆಂಕಟರಾಮಯ್ಯ ಶ್ರೀಮತಿ ರಾಜಲಕ್ಷ್ಮೀ

ಋಷಿಗಳಿಂದ ರಚಿಸಲ್ಪಟ್ಟ, ಭಗವಂತನ ಅಭಿಪ್ರಾಯವೇ ಆದ ಶಾಸ್ತ್ರಗ್ರಂಥಗಳನ್ನು ಹಾಗೂ ಅವುಗಳಲ್ಲಿರುವ ಸತ್ಯಸಂಗತಿಗಳನ್ನು–ತತ್ವಗಳನ್ನು ತಿಳಿದು, ಅದರಂತೆ ಜೀವನವನ್ನು ರೂಪಿಸಿಕೊಂಡಾಗ ಮಾತ್ರವೇ ಯಶಸ್ಸು ನಮ್ಮದಾಗುತ್ತದೆ.

ಈ ನಿಟ್ಟಿನಲ್ಲಿ ಧರ್ಮದ ಬಗ್ಗೆ, ದಿನನಿತ್ಯದ ಆಚರಣೆಗಳ ಬಗ್ಗೆ ತಿಳಿದುಕೊಳ್ಳಲು ಅತ್ಯಂತ ಅನುಕೂಲವಾಗುವ ರೀತಿಯಲ್ಲಿ ಅನೇಕ ಧರ್ಮಶಾಸ್ತ್ರಗಳ–ಪುರಾಣಗಳ ಮೂಲ ವಾಕ್ಯಗಳೊಂದಿಗೆ ರಚನೆಯಾಗಿರುವ ಈ **"ಧರ್ಮ ಸಂದೇಶ"** ಎಂಬ ಶಾಸ್ತ್ರ ಗ್ರಂಥರತ್ನವನ್ನು,

"ಅನ್ನದಾನದಿಂದ ಮನುಷ್ಯನಿಗೆ ಕೆಲಗಂಟೆಗಳ ಕಾಲ ಮಾತ್ರ ತೃಪ್ತಿಯಾದರೆ, ಜ್ಞಾನದಾನದಿಂದ ಅನೇಕ ತಲೆಮಾರುಗಳವರೆಗೆ ಸಮಾಜವೇ ತೃಪ್ತಿಪಡುತ್ತದೆ" ಎಂಬ ಸತ್ಯವನ್ನು ತಿಳಿದುಕೊಂಡಿರುವ, **ಶ್ರೀ ಎಸ್. ವೆಂಕಟರಾಮಯ್ಯ, ಶ್ರೀಮತಿ ರಾಜಲಕ್ಷ್ಮೀ** ದಂಪತಿಗಳು, ತಮ್ಮ ಸಂಬಂಧಿಗಳಾದ **ಶ್ರೀ ಸೋಮಶೇಖರ, ಶ್ರೀಮತಿ ಸುಬ್ಬಲಕ್ಷ್ಮೀ** ದಂಪತಿಗಳ **ಐವತ್ತು ವರ್ಷಗಳ ಯಶಸ್ವೀ ದಾಂಪತ್ಯಜೀವನದ ಶುಭಸಾರ್ಥಕ** ಸಂದರ್ಭದಲ್ಲಿ ಈ ಗ್ರಂಥರತ್ನವನ್ನು ಸಮಾಜಕ್ಕೆ ಸಮರ್ಪಿಸುತ್ತಿದ್ದಾರೆ.

ಜ್ಞಾನಮಾರ್ಗದ ಈ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ **ಶ್ರೀ ವೆಂಕಟರಾಮಯ್ಯ ಶ್ರೀಮತಿ ರಾಜಲಕ್ಷ್ಮೀ** ದಂಪತಿಗಳಿಗೆ ಹಾಗೂ ಇವರ

ಸುಪುತ್ರರಾದ **ಶ್ರೀಯುತ ರಾಜೇಶ್ ಶ್ರೀಮತಿ ಸ್ನೇಹಲತಾ** ದಂಪತಿಗಳಿಗೆ ಮತ್ತೂ ಅವರ ಕುಟುಂಬ–ಪರಿವಾರದ ಎಲ್ಲರಿಗೂ ಸಹಾ, ಜ್ಞಾನಮಾರ್ಗದ ಜಿಜ್ಞಾಸುಗಳ ಆಶೀರ್ವಾದವೂ, ಸತ್ಪುರುಷರ ಕೃಪೆಯೂ ಹಾಗೂ ದಕ್ಷಿಣಾಮೂರ್ತಿಯಾದ ಆ ಪರಮೇಶ್ವರನ ಸಂಪೂರ್ಣ ಅನುಗ್ರಹವು ಪ್ರಾಪ್ತಿಯಾಗಲೆಂದು ನಾವು ಈ ಸಂದರ್ಭದಲ್ಲಿ ಅಂತರಂಗದಿಂದ ಆಶಿಸುತ್ತಿದ್ದೇವೆ.

ವೇದಬ್ರಹ್ಮ ಶ್ರೀ ಎ. ಸಿ. ಶಕ್ತಿಧರ ಶರ್ಮರು
ಸಂಪಾದಕರು–ಅನುವಾದಕರು ಮತ್ತು ಪ್ರಕಾಶಕರು
ಶ್ರೀ ಚೈತನ್ಯ ಗುರುನಾಥ ಪ್ರಕಾಶನ.

ವಿಷಯಾನುಕ್ರಮಣಿಕೆ

೧ ಗ್ರಂಥನಾಮ – 1

೨ ವಿಷಯಸೂಚಿ – 1-8

೩ ಗುರುವಂದನೆ – 9

೪ ಸಂಪಾದಕೀಯ – 10

೫ ನಮ್ಮ ಪ್ರಕಟಣೆಗಳು – 11-12

೬ ಪುಸ್ತಕಗಳು ದೊರೆಯುವ ಸ್ಥಳಗಳು – 13

೭ ಹಿರಿಯರ ನುಡಿ – **ವೇ॥ಬ್ರ॥ ಶ್ರೀ ಮಾರ್ಕಂಡೇಯ ಆವಧಾನಿಗಳು, ಮತ್ತೂರು** 14-16

೮ ಚಿಂತನ – **ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮರು** 17-20

೯ ಸಂಸ್ಕೃತಿ – ಆಚಾರ – ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು –

1. ಶಾಸ್ತ್ರೀಯವಿವಾಹದ ಹಂತಗಳು – ಒಂದುವಿಮರ್ಶೆ –
2. ಅವಧೂತಮಹಾತ್ಮರ ಅಮೃತವಾಣಿ –
3. ಕರ್ಮಾಚರಣೆಯ ವಿಷಯದಲ್ಲಿ ಭಗವದ್ಗೀತೆಯ ಆದೇಶ ಏನು ?–
4. ಉದಕಶಾಂತಿ ಪಾರಾಯಣ ಅನಿವಾರ್ಯವೇ ? –
5. ಬ್ರಹ್ಮಚಾರಿಗಳಿಗೆ ಗೋಪೀಚಂದನ ಧಾರಣೆ ಕಡ್ಡಾಯವೇ ? –
6. ಬ್ರಹ್ಮಚಾರಿಗೆ ಉಪನಯನದಲ್ಲಿ ಕೊಟ್ಟ ಕೃಷ್ಣಾಜಿನ, ಮೇಖಲೆ ಹಾಗೂ ದಂಡಗಳನ್ನು ಅರಳೀಮರದಲ್ಲಿ ಇಡುವುದು ಸರಿಯೇ ? –
7. ಉಪನಯನದಲ್ಲಿ, ವಟುವು ಭಿಕ್ಷೆಬೇಡುವ ಕ್ರಿಯೆಯಲ್ಲಿ ಶಾಸ್ತ್ರೀಯತೆ ಏನಿದೆ ? –
8. ಊಟದಲ್ಲಿ ಯಾವರೀತಿ ಬಡಿಸಬೇಕೆಂಬ ಹಾಗೂ ಆಗ ಅನುಸರಿಸಬೇಕಾದ ನಡವಳಿಕೆಯ ವಿಚಾರ –

21 - 41

9. ಮಹಾತ್ಮರ ಮೂಲ ವಿಚಿತ್ರವಾದದ್ದು (ಸುಭಾಷಿತ) –
10. ತೀರ್ಥಯಾತ್ರೆಯ ಕ್ರಮ (ಅಧ್ಯಾತ್ಮ ರಾಮಾಯಣ) –
11. ರುದ್ರಾಧ್ಯಾಯದ ಮಹಿಮೆ (ಪದ್ಮಪುರಾಣ) –

42 - 44

12. ಮಹಿಳೆಯರ ಶ್ರೇಷ್ಠತೆ, ಪ್ರಭಾವ (ಸುಭಾಷಿತ) –
13. ಮಹಿಳೆಯರು ಯಾವಾಗ ತಾವೇ ಗಂಡನನ್ನು ಹುಡುಕಿಕೊಳ್ಳಬಹುದು (ಮಹಾಭಾರತ) –
14. ಭಕ್ತಿಗೆ ತಕ್ಕಂತೆ ವರ (ಸುಭಾಷಿತ ರತ್ನಮಾಲಿಕಾ) –
15. ಯಾವುದರಲ್ಲಿ ತೃಪ್ತಿ ಇರಬೇಕು–ಇರಬಾರದು (ಸಮಯೋಚಿತ ಪದ್ಯಮಾಲಿಕಾ) –
16. ಮೋಕ್ಷವು ಮನೆಯಲ್ಲೇ ಸಿಗುತ್ತದೆ! (ಗರುಡಪುರಾಣ) –
17. ಸ್ನೇಹ ಮುರಿಯಲು ಕಾರಣಗಳು (ಸುಭಾಷಿತರತ್ನ ಭಂಡಾರ) – 44 - 46

18. ಕಾರ್ತೀಕಮಾಸದಲ್ಲಿ ತುಳಸೀಎಲೆ ಪೂಜೆಯ ವಿಶೇಷತೆ (ಬ್ರಹ್ಮವೈವರ್ತಪುರಾಣ) –
19. ಗಂಗಾಸ್ನಾನದ ಫಲ (ಬ್ರಹ್ಮವೈವರ್ತಪುರಾಣ) –
20. ಪಾನಕವನ್ನು(ಸಿಹಿನೀರು) ಕೊಡುವುದರ ಫಲ (ಬ್ರಹ್ಮವೈವರ್ತಪುರಾಣ) –
21. ನರಕಗಳ ಸಂಖ್ಯೆ (ಗರುಡಪುರಾಣ) –
22. ಉಪಾಕರ್ಮವನ್ನು ಯಾವಾಗ ಮಾಡಬೇಕು ? (ವಸಿಷ್ಠ / ಬೃಹಸ್ಪತಿ / ಧರ್ಮಸಿಂಧು / ಧರ್ಮಸಿಂಧು ಸಾರ / ಕಪರ್ದಿಕಾರಿಕಾ) –
23. ಯಾವಯಾವ ಸಂದರ್ಭಗಳಲ್ಲಿ ತಾಯಿಯ ಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು ? (ಆಪಸ್ತಂಬ ಗೃಹ್ಯವ್ಯಾಖ್ಯಾನ–ಪಟಲ 8) –
24. ಯಾವ ಸಂದರ್ಭಗಳಲ್ಲಿ ನಾವು ಮಾಡಬೇಕಾದ ಶ್ರಾದ್ಧವನ್ನು ಬೇರೆಯವರ ಹತ್ತಿರ ಮಾಡಿಸಬಹುದು (ಧರ್ಮಸಿಂಧು) –
25. ಯಾವಾಗ ಗೌರವವು ಕಡಿಮೆಯಾಗುತ್ತದೆ ? (ಸುಭಾಷಿತ ರತ್ನಾವಳಿ) –
26. ಶ್ರಾದ್ಧಮಾಡುವುದರಿಂದ ಯಾರಯಾರ ತೃಪ್ತಿಯಾಗುತ್ತದೆ ? (ಗರುಡಪುರಾಣ) – 47 - 52

27. ಹೆಂಗಸರು ಏನು ಮಾಡದಿದ್ದರೆ ದೋಷವಿಲ್ಲ ? (ಭವಿಷ್ಯಪುರಾಣ) –
28. ಮನುಷ್ಯನ ವಿನಾಶಕಾಲಗಳು ಯಾವಾಗ ? (ಭಾಗವತ) –
29. ಕಲಿಯುಗದ ಲಕ್ಷಣ (ಜೈಮಿನೀಭಾರತ) –
30. ಗಂಡಸರು ಮತ್ತು ಹೆಂಗಸರು ಏನನ್ನು ಮಾಡಬಾರದು ? (ಸುಭಾಷಿತ ರತ್ನಾವಳಿ) – 52 - 55
31. ತೀರ್ಥಯಾತ್ರೆಯನ್ನು ಹೇಗೆ ಮಾಡಬೇಕು ? (ಪದ್ಮಪುರಾಣ) –
32. ಎಲ್ಲಾ ಕಾಲಕ್ಕೂ, ಎಲ್ಲಾ ಮನುಷ್ಯರಿಗೂ ಅನ್ವಯಿಸುವ ಸಾಮಾನ್ಯಧರ್ಮ ನಿಯಮಗಳು (ಮನು) –
33. ಮೌನವನ್ನು ಯಾವಾಗ ಮಾಡಬೇಕು ? (ಆಚಾರ ನಿರ್ಣಯ) –
34. ಒಳ್ಳೆಯ ಸಹವಾಸದಿಂದಾಗುವ ಲಾಭವೇನು ? (ಆಚಾರ ನಿರ್ಣಯ) –
35. ಮುಟ್ಟಿನ ಕಾಲ ಎಂದರೇನು ? (ಗರುಡಪುರಾಣ –6) –
36. ಗಂಡು–ಹೆಣ್ಣು–ನಪುಂಸಕ–ಅವಳಿ, ಈ ರೀತಿ ಗರ್ಭದಲ್ಲಿ ಹುಟ್ಟಲು ಇರುವ ಲೆಕ್ಕಾಚಾರವೇನು ? (ಗರುಡಪುರಾಣ) –
37. ಗರ್ಭದಲ್ಲಿ, ಭ್ರೂಣದ ಬೆಳವಣಿಗೆಯ ಹಂತಗಳು ಹೇಗೆ ನಡೆಯುತ್ತವೆ ? (ಗರುಡಪುರಾಣ–6) –
38. ಪುಣ್ಯಾಹದಲ್ಲಿ ಎಷ್ಟು ಕಲಶಗಳನ್ನು ಇಡಬೇಕು ? (ಕಪರ್ದಿಕಾರಿಕಾ) – 55 - 60
39. ದಿನವೂ ಸ್ನಾನ ಮಾಡಬೇಕೆನ್ನುವ ಮತ್ತೂ ಯಾವ ರೀತಿಯ ಬಟ್ಟೆಯನ್ನು ಧರಿಸಬೇಕೆನ್ನುವ ವಿಚಾರ (ಮಾರ್ಕಂಡೇಯ ಋಷಿ) –
40. ಜುಟ್ಟು(ಶಿಖೆ) ಮತ್ತು ಜನಿವಾರ(ಉಪವೀತ)ಗಳ ಅವಶ್ಯಕತೆ (ಮಾರ್ಕಂಡೇಯ ಋಷಿ) –
41. ಆಚಮನಕ್ಕಿರುವ ಆದ್ಯತೆ (ಮಾರ್ಕಂಡೇಯ ಋಷಿ) –
42. ಪವಿತ್ರ ಧಾರಣೆಯ ಅವಶ್ಯಕತೆ (ಮಾರ್ಕಂಡೇಯ ಋಷಿ) –

43. ಯಾವ ಯಾವ ಸಂದರ್ಭಗಳಲ್ಲಿ, ಹೆಂಡತಿಯು ಗಂಡನ ಯಾವ ಪಕ್ಕದಲ್ಲಿ ಕೂರಬೇಕು ? (ಕಪರ್ದಿಕಾರಿಕಾ) –
44. ವಿವಾಹದ ಯಾವ ಯಾವ ಸಂದರ್ಭಗಳಲ್ಲಿ, ವರನು ಯಾವ ದಿಕ್ಕಿಗೆ ಇರಬೇಕು ? (ಕಪರ್ದಿಕಾರಿಕಾ) –
45. ಜಾತಾಶೌಚ ಮೃತಾಶೌಚಗಳ ವಿಚಾರ (ಗರುಡಪುರಾಣ) –
46. ಸೂತಕದಲ್ಲಿ ಮಾಡಬಾರದ ಕೆಲಸಗಳು (ಗರುಡಪುರಾಣ) –
47. ಸೂತಕವಿಲ್ಲದವರುಗಳು (ಪರಾಶರಸ್ಮೃತಿ) –
48. ತಂದೆಯ ಸಮಾನರು(ಮನುಸ್ಮೃತಿ) –
49. ತಂದೆಯಲ್ಲಿರುವ ಲಕ್ಷಣಗಳೇ ಮಕ್ಕಳಲ್ಲಿಯೂ ಇರುವಿಕೆಯು (ಸುಭಾಷಿತ) –
50. ಒಳ್ಳೆಯ ಕರ್ಮಗಳಿಂದಲೂ, ಕೆಟ್ಟಫಲ ಬರುವ ಬಗೆ (ಆಚಾರ ನಿರ್ಣಯ) – 60 - 64
51. ಯಾವುದನ್ನು ಯಾವುದರಿಂದ ರಕ್ಷಿಸಬೇಕು ? (ಆಚಾರ ನಿರ್ಣಯ) –
52. ಮಾರ್ಗದಲ್ಲಿ, ಯಾರಿಗೆ ಮೊದಲು ದಾರಿ ಬಿಡಬೇಕು ? (ಚಾಣಕ್ಯನೀತಿ) –
53. ಕಲಿಯುಗದ ಕಡೆಯ ಹಂತದಲ್ಲಿನ ಜೀವನಶೈಲಿ (ಪರಾಶರಸ್ಮೃತಿ) –
54. ಬ್ರಾಹ್ಮಣ್ಯದ ಲಕ್ಷಣ (ಆಚಾರ ನಿರ್ಣಯ) –
55. ಆತ್ಮಹತ್ಯಾ ದೋಷವಿಲ್ಲದವರು (ಪರಾಶರಸ್ಮೃತಿ) –
56. ಧರ್ಮದ ಲಕ್ಷಣ (ಮನುಸ್ಮೃತಿ) –
57. ಸಂಧ್ಯಾವಂದನೆಯನ್ನು ಯಾವಾಗ ಬಿಟ್ಟರೆ, ದೋಷವಿಲ್ಲ ? (ಪರಾಶರಸ್ಮೃತಿ) –
58. ಯಾವಯಾವ ಆಸನಗಳಿಂದ ಎಂತಹ ಲಾಭ ? (ಆಚಾರ ನಿರ್ಣಯ) –
59. ಮೈಲಿಗೆಯ(ಅಸ್ಪೃಶ್ಯತ್ವದ) ದೋಷವಿಲ್ಲದ ಸನ್ನಿವೇಶಗಳು (ಪರಾಶರಸ್ಮೃತಿ) – 65 - 68

60. ಹೂವು, ಪತ್ರೆಗಳು ಅಶುಚಿಯಾಗುವುದು ಹೇಗೆ ? (ಆಚಾರ ನಿರ್ಣಯ) –
61. ದೀಪವನ್ನು ಹಚ್ಚುವುದರ ಫಲವೇನು ? (ಆಚಾರ ನಿರ್ಣಯ) –
62. ಯಾರು ಯಾರು ಒಂದೇ ಆಸನದಲ್ಲಿ ಕೂರಬಹುದು ? (ಆಚಾರ ನಿರ್ಣಯ) –
63. ಭಗವಂತನ ಆದೇಶ (ಭಾಗವತ) –
64. ಸ್ತ್ರೀಯರ ಸಾಮರ್ಥ್ಯ (ಸುಭಾಷಿತ) –
65. ಗಾಯತ್ರೀಮಂತ್ರದ ಶಕ್ತಿ ಮಹತ್ವ (ಬ್ರಹ್ಮವೈವರ್ತಪುರಾಣ) –
66. ಬ್ರಾಹ್ಮಣರು ಯಾವಾಗ ತಮ್ಮ ಶಕ್ತಿ, ತೇಜಸ್ಸನ್ನು ಕಳೆದುಕೊಳ್ಳುತ್ತಾರೆ ? (ಬ್ರಹ್ಮವೈವರ್ತಪುರಾಣ) – 68 - 71
67. ಯಶಸ್ಸು – ಸುಖ ಲಭಿಸುವ ಬಗೆ (ಮನುಸ್ಮೃತಿ) –
68. ಊಟದಲ್ಲಿ ಪಂಕ್ತಿ(ಸಾಲು) ಬೇರೆ ಮಾಡುವ ರೀತಿ (ಆಚಾರ ನಿರ್ಣಯ) –
69. ಮಂಗಳಕರವಾದ 8 ವಸ್ತುಗಳು (ಸುಭಾಷಿತ) –
70. ಜ್ಞಾನಿಗಳ ದೃಷ್ಟಿಯಲ್ಲಿ ಪ್ರಪಂಚ ಹೀಗಿರುತ್ತದೆ (ಸುಭಾಷಿತ) –
71. ವೇದಗಳ ಹೆಚ್ಚುಗಾರಿಕೆ (ಜಾಬಾಲಸ್ಮೃತಿ) –
72. ಸ್ಮೃತಿ(ಧರ್ಮಶಾಸ್ತ್ರ) ಗಳನ್ನು ಬರೆದವರು ಯಾರು ? (ಯಾಜ್ಞವಲ್ಕ್ಯಸ್ಮೃತಿ) – 71 - 75
73. ಯಾವ ರೀತಿ ದಾನಮಾಡಬೇಕು ? (ಪರಾಶರಸ್ಮೃತಿ) –
74. ಅತಿಥಿ ಎಂದರೆ ಯಾರು ? (ಪರಾಶರಸ್ಮೃತಿ) –
75. ಯಾವ ಸಂದರ್ಭಗಳಲ್ಲಿ, ಸೂತಕದ(ಮೈಲಿಗೆ) – ಆಚರಣೆ ಇಲ್ಲ? (ಪರಾಶರಸ್ಮೃತಿ) –
76. ಎಲ್ಲರಿಗಿಂತ ಮೊದಲೇ, ಊಟ ಮಾಡಬಹುದಾದವರು ಯಾರು?(ಪರಾಶರಸ್ಮೃತಿ) –
77. ಬ್ರಾಹ್ಮಣರು ಕೃಷಿಯನ್ನು ಮಾಡಬಹುದೇ ? (ಪರಾಶರಸ್ಮೃತಿ) –

78. ಹೂವು, ಗಂಧ, ತುಳಸಿಗಳನ್ನು ಎಲ್ಲಿ ಧರಿಸಬಾರದು ? (ಆಚಾರ ನಿರ್ಣಯ) –

79. ಯಾವ ಯಾವ ವಸ್ತುಗಳನ್ನು ಭೂಮಿಯಲ್ಲಿ ಇಡಬಾರದು ? (ಆಚಾರ ನಿರ್ಣಯ) –

80. ಯಾವ ಯಾವ ಸಂದರ್ಭಗಳಲ್ಲಿ, ಯಾವ ರೀತಿಯ ನಮಸ್ಕಾರಗಳನ್ನು ಮಾಡಬೇಕು ? (ಆಚಾರ ನಿರ್ಣಯ) –

81. ಯಾವಾಗ, ಗೊತ್ತಿದ್ದರೂ ಉತ್ತರಿಸಬಾರದು ? (ಮನುಸ್ಮೃತಿ) –

82. ಜನ್ಮ ಜನ್ಮಾಂತರಕ್ಕೂ ಬೇಡವಾದದ್ದು (ಅಪರಾಧ ಕ್ಷಮಾಪಣ ಸ್ತೋತ್ರ) –

83. ಪ್ರಾಣಹೋಗುವ ಕಡೇ ಕ್ಷಣದ ಅನುಭವ (ಗರುಡಪುರಾಣ) –

84. ಸತ್ತಮೇಲೆ, ಪಿಂಡ–ತರ್ಪಣಗಳನ್ನು ಕೊಡದಿದ್ದರೆ ಏನಾಗುತ್ತದೆ? (ಗರುಡಪುರಾಣ) –

85. ವಿವಿಧ ರೀತಿಯ ಜನ್ಮಗಳಿಗೆ ಕಾರಣಗಳು (ಬ್ರಹ್ಮವೈವರ್ತಪುರಾಣ) –

86. ಅರಳೀ ಗಿಡವನ್ನು ನೆಡಿಸುವುದು ಏಕೆ ? (ಬ್ರಹ್ಮವೈವರ್ತಪುರಾಣ) –

87. ಪುಣ್ಯದಿವಸಗಳಲ್ಲಿ, ದಾನವನ್ನು ಏಕೆ ಮಾಡಬೇಕು ? (ಬ್ರಹ್ಮವೈವರ್ತಪುರಾಣ) –

88. ಮಾಡಿದ ಕರ್ಮಫಲವನ್ನು ಅನುಭವಿಸುವಿಕೆಯ ರೀತಿ (ಬ್ರಹ್ಮವೈವರ್ತಪುರಾಣ) –

89. ಅನ್ನದಾನದ ಮಹಿಮೆ (ಯಮ, ಬ್ರಹ್ಮವೈವರ್ತಪುರಾಣ) –

90. ಮಾಘಮಾಸದಲ್ಲಿ, ತೀರ್ಥಸ್ನಾನ ಮತ್ತು ಎಳ್ಳಿನ ವಿಶೇಷತೆ (ಭವಿಷ್ಯಪುರಾಣ) –

91. ಮರಗಳನ್ನು ಬೆಳೆಸುವುದರ ವಿಶೇಷತೆ ಏನು ? (ಭವಿಷ್ಯಪುರಾಣ) –

92. ಭಾನುವಾರದಂದು, ಮಾಡಬಾರದ ಕೆಲಸಗಳು (ಸೌರಪುರಾಣ, ಸೂರ್ಯಾಷ್ಟಕ) –

76 - 83

93. ಶಿಕ್ಷೆಯ ವಿಚಾರ (ಮನುಸ್ಮೃತಿ) –
94. ದಾನ ಮಾಡುವ ರೀತಿ (ಅತ್ರಿ ಸಂಹಿತಾ) –
95. ಪಾಪವನ್ನು ಕಳೆದುಕೊಳ್ಳುವ ವಿಧಾನ (ಮನುಸ್ಮೃತಿ) –
96. ಯಾವ ಯಾವ ಸಮಯಗಳಲ್ಲಿ, ಧರ್ಮವನ್ನು ಎರಡನೆಯ ಆದ್ಯತೆಯಾಗಿ ಪರಿಗಣಿಸಬಹುದು ? (ಪರಾಶರಸ್ಮೃತಿ) –
97. ಯಾರು, ನಿಜವಾದ ಸತ್ಪಾತ್ರರು(ಯೋಗ್ಯರು) ? (ಯಾಜ್ಞವಲ್ಕ್ಯಸ್ಮೃತಿ) –
98. ಎಂತಹ ಕೆಲಸಗಳನ್ನು ಮಾಡಬಾರದು ? (ಯಾಜ್ಞವಲ್ಕ್ಯಸ್ಮೃತಿ) –
99. ಮನುಷ್ಯನಿಗೆ ಯಾವುದು ಅತೀ ಅವಶ್ಯಕವಾದದ್ದು ? (ಗರುಡಪುರಾಣ–16) – 84
100. ವ್ರತ ಉಪವಾಸ – ಪೂಜೆ – ಹೋಮ ವೇದಪಠನ ಭಜನೆ – ದೇಹದಂಡನೆ, ಇವುಗಳಿಂದ ಮೋಕ್ಷವು ಸಿಗುತ್ತದೆಯೇ ? (ಗರುಡಪುರಾಣ–16) – 94
101. ಹಾಗಾದರೆ, ಮೋಕ್ಷವು ಹೇಗೆ ದೊರೆಯುತ್ತದೆ (ಗರುಡಪುರಾಣ–16) –
102. ಹಾಗಾದರೆ, ಅಂತಹ ಜ್ಞಾನವು ಯಾರಿಂದ–ಹೇಗೆ ಸಿಗುತ್ತದೆ ? (ಗರುಡಪುರಾಣ–16) –
103. ದುಃಖ ರಹಿತ ಜೀವನವನ್ನು ಹೇಗೆ ನಡೆಸುವುದು ? (ಎಲ್ಲಾ ಶಾಸ್ತ್ರಗಳ ತಾತ್ಪರ್ಯ) –

॥ ಓಂ ಶ್ರೀಃ ॥

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬ: ಸ ಮೇ ಮುನಿ: ॥
ಸಂತ: ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರ ಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾ ಪೀಠಮ್, ಶೃಂಗೇರಿ

॥ ವಾತ್ಸಲ್ಯ ನಿಧಿ ಅವಧೂತ ಶ್ರೀ ವೇಂಕಟಾಚಲ ಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ ತೂ ಹೆ ಮಾಲಿಕ್, ಜೋಲೀ ಮೇರಿ ಭರ್‌ದಿ ॥

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ದೂ : 9686497982, 08175225445

ಅಕ್ಷರಜೋಡಣೆ : ವೇ॥ಬ್ರ॥ಶ್ರೀ ಸಿ. ಶ್ರೀನಿವಾಸ ಶಾಸ್ತ್ರೀ, ಶೃಂಗೇರಿ.
ಮತ್ತು ಶ್ರೀಮತಿ ಭಾರತೀ ಶರ್ಮಾ.
ವೇ॥ಬ್ರ॥ ಶ್ರೀ ಶಕ್ತಿಧರ ಶರ್ಮಾ

ವರ್ಷ : ಅಕ್ಟೋಬರ್ 2015 (ಮನ್ಮಥ ಸಂವತ್ಸರ, ಅಶ್ವಯುಜ ಮಾಸ)

ಪ್ರತಿಗಳು : 1000

ಪುಟಗಳು : 96 + 4 = 100

ಪುಸ್ತಕದ ಅಳತೆ : ಡೆಮ್ಮಿ 1/8

ಪೇಪರ್ : 70 ಜಿ.ಎಸ್.ಎಂ. ಮ್ಯಾಪ್ಲಿತೊ

ಹಕ್ಕುಗಳು : ಸಂಪೂರ್ಣ ಲೇಖಕರದ್ದು©

ಮೌಲ್ಯ : **ಅಮೂಲ್ಯ**

ಪ್ರೋತ್ಸಾಹಯುತ ಕಾಣಿಕೆ :

ಮುದ್ರಕರು : **ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್**, ಬೆಂಗಳೂರು
ಇಮೇಲ್ : omkaroffset@gmail.com
ಫೋನ್: 080 2670 9026 / 2670 8186

ಪ್ರಧಾನ ಮಾರ್ಗದರ್ಶಕರು : **ವೇದವೇದಾಂಗ ವಿದ್ವಾನ್ ವೇ॥ ಬ್ರ॥ ಶ್ರೀ॥ ಅಶ್ವತ್ಥನಾರಾಯಣ ಅವಧಾನಿಗಳು,** ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಮೀನಾಕ್ಷೀಸುಂದರ ಘನಪಾಠಿಗಳು, ಶ್ರೀಮಠ, ಶೃಂಗೇರಿ

ವೇ॥ ಬ್ರ॥ ಶ್ರೀ॥ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.

ವೇ॥ ಬ್ರ॥ ಶ್ರೀ॥ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಸಂಚಾಲಕರು : ವೇ॥ಬ್ರ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಸಲಹೆಗಾರರು : ವೇ॥ಬ್ರ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1 **ಅನುಷ್ಠಾನ ತರಂಗಿಣೀ**
(ನಿತ್ಯ ಪೂಜಾವಿಧಿ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)

2. **ಸಂಸ್ಕಾರ ತರಂಗಿಣೀ ಪುಷ್ಪ–1** (ಪುಂಸವನ ಮತ್ತು ಸೀಮಂತೋನ್ನಯನ)

3. **ಸಂಸ್ಕಾರ ತರಂಗಿಣೀ ಪುಷ್ಪ–2** (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

4. **ಸಂಸ್ಕಾರ ತರಂಗಿಣೀ ಪುಷ್ಪ–3** (ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

5. **ಸಂಸ್ಕಾರ ತರಂಗಿಣೀ ಪುಷ್ಪ–4** (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭಗವದ್ಗೀತೆಯಲ್ಲಿ ಕರ್ಮ ಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)

6. **ಸಂಸ್ಕಾರ ತರಂಗಿಣೀ ಸರಣಿಯ ಪುಷ್ಪ–5**
ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
(ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)

7. **ವೇದನಾದ ಸಂಗಮ DVD–1** (ಪ್ರಪ್ರಥಮ ಬಾರಿಗೆ ಧ್ವನಿಸುರುಳಿಯಲ್ಲಿ (DVD) ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)

8. **ಸಂಸ್ಕಾರ ತರಂಗಿಣೀ ಪುಷ್ಪ–6**
(ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})

9. **ಸಂಸ್ಕಾರ ತರಂಗಿಣೀ ಪುಷ್ಪ–7**
(ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ, ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರ ತರಂಗಿಣೀ ಪುಷ್ಪ–1, 2 ದ್ವಿತೀಯ ಮುದ್ರಣ**
(ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)

11. ಸಂಸ್ಕಾರ ತರಂಗಿಣೀ ಪುಷ್ಪ–3 ದ್ವಿತೀಯ ಮುದ್ರಣ
(ಚೂಡಾಕರ್ಮ, ಅಕ್ಷರಾರಂಭ ಮತ್ತು ಉಪನಯನ)

12.ಸಂಸ್ಕಾರ ತರಂಗಿಣೀ ಪುಷ್ಪ – 8 (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)

13.ವೇದನಾದ ಸಂಗಮ DVD 2 (ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)

14.ಸಂಸ್ಕಾರ ತರಂಗಿಣೀ ಪುಷ್ಪ – 9 (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ ಹಾಗೂ ಆಚಾರ – ಧರ್ಮಶಾಸ್ತ್ರಗಳ ವಿಶೇಷ ವಿಚಾರಗಳು)

15.ಸಂಸ್ಕಾರ ತರಂಗಿಣೀ ಪುಷ್ಪ – 10 (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

16.ಸಂಸ್ಕಾರ ತರಂಗಿಣೀ ಪುಷ್ಪ – 11 (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ)

17.ಸಂಸ್ಕಾರ ತರಂಗಿಣೀ ಪುಷ್ಪ – 10 – ದ್ವಿತೀಯ ಮುದ್ರಣ (ಧರ್ಮಸಂದೇಶ – ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)

ಮುಂದಿನ ಪ್ರಕಟಣೆಗಳು

1. **ಸಂಸ್ಕಾರ ತರಂಗಿಣೀ ಪುಷ್ಪ – 12** (ಭಾರದ್ವಾಜೀಯ / ಆಪಸ್ತಂಬೀಯ ಅಪರಸೂತ್ರ – ಗೋಪಾಲಮುನಿಗಳ ಮತ್ತು ಕಪರ್ದಿಸ್ವಾಮಿಗಳ ವ್ಯಾಖ್ಯಾನ ಹಾಗೂ ವೈದ್ಯನಾಥೀಯ ಸ್ಮೃತಿಮುಕ್ತಾಫಲ ಹಾಗೂ ಯಲ್ಲಾಜೀಯ ಅನುಧರ್ಮಶಾಸ್ತ್ರ)
2. **ಸಂಸ್ಕಾರ ತರಂಗಿಣೀ ಪುಷ್ಪ – 4 – ದ್ವಿತೀಯ ಮುದ್ರಣ** (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)
3. **ಸಂಸ್ಕಾರ ತರಂಗಿಣೀ ಪುಷ್ಪ – 13** (ಭಾರದ್ವಾಜೀಯ / ಆಪಸ್ತಂಬೀಯ ಅಪರ (ಪಿತೃಮೇಧ) ಸೂತ್ರ ಮತ್ತು ಕಾರಿಕೆ ಹಾಗೂ ಪ್ರಯೋಗ)
4. **ಸಂಸ್ಕಾರ ತರಂಗಿಣೀ ಪುಷ್ಪ – 14** (ಶ್ರಾದ್ಧ ಪ್ರಕರಣ)
5. **ಸಂಸ್ಕಾರ ತರಂಗಿಣೀ ಪುಷ್ಪ – 15**
(ಷೋಡಶ ಸಂಸ್ಕಾರ ಮಂತ್ರಗಳಿಗೆ ಸಾಯಣರ ಮತ್ತು ಹರದತ್ತರ ಭಾಷ್ಯಾರ್ಥ)

ಪ್ರತಿಗಳು ದೊರೆಯುವ ಸ್ಥಳಗಳು :

1. ವೇ॥ ಬ್ರ॥ ಶ್ರೀ ಎ.ಸಿ. **ಶಕ್ತಿಧರ ಶರ್ಮಾ,** ಶಿವಮೊಗ್ಗ ಮೊ. : 9686497982
   Karnataka Bank A/c. No. : 7322500102385001
   ಸವಳಂಗ ರಸ್ತೆ ಶಾಖೆ, ಶಿವಮೊಗ್ಗ
   IFSC Code : KARB0000732
2. **ಶ್ರೀಮಠ ಪುಸ್ತಕಾಲಯ,** ಶಾರದಾಪೀಠಮ್, ಶೃಂಗೇರಿ
3. **ಉಡುಪಿ ಸ್ಟೋರ್ಸ್,** ಗಾಂಧಿನಗರ, ಶಿವಮೊಗ್ಗ
4. **ರಾಜಾರಾಮ್ ಬುಕ್ ಹೌಸ್,** ಶಿವಮೊಗ್ಗ
5. **ಸಪ್ನಾ ಬುಕ್ ಹೌಸ್,** ಮೈಸೂರು
6. **ಕರ್ನಾಟಕ ಪುಸ್ತಕ ಪ್ರದರ್ಶನ,** ಸಹ್ಯಾದ್ರಿ ಥಿಯೇಟರ್ ಪಕ್ಕ, ಹಾಸನ
7. **ಪ್ರಚೇತಾ ಬುಕ್ ಹೌಸ್,** ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು
8. **ವೇದಾಂತ ಬುಕ್ ಹೌಸ್,** ಉಮಾ ಟಾಕೀಸ್ ಹತ್ತಿರ, ಬೆಂಗಳೂರು
9. **ಸಪ್ನಾ ಬುಕ್ ಹೌಸ್,** ಗಾಂಧಿನಗರ, ಬೆಂಗಳೂರು
10. **ಶೃಂಗೇರಿ ಶಂಕರ ಮಠ,** ಉಮಾ ಟಾಕೀಸ್ ಹತ್ತಿರ, ಬೆಂಗಳೂರು
11. **ನ್ಯೂ ವೇದಾಂತ ಬುಕ್‌ಹೌಸ್,** ಈಸ್ಟ್‌ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು
12. **ಬುಕ್ ಹೌಸ್,** ಸರ್ಕಾರಿ ಬಸ್‌ನಿಲ್ದಾಣ, ಚಿತ್ರದುರ್ಗ
13. **ಸಪ್ನ ಬುಕ್ ಹೌಸ್,** ಮಂಗಳೂರು

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮ ಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು ? – ಋಷಿ ವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ . ಸೂತ್ರಕಾರರ ವಾಕ್ಯ ಬೇಕೇ , ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ . ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ. ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ..., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ..., ಪ್ರಯೋಗ – ಅದರ ತಿಳಿ ಕನ್ನಡ ಅರ್ಥ . ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ .

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತಗೀತೆ, ಗುರುಗೀತೆ, ಯತಿ ಆರಾಧನಾಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಎಂಟು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ನಾಲ್ಕು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವ್ರಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – ೭ ಕಾಂಡಗಳಿಂದ ೧೦೨ ಸಂಹಿತಾ ಅನುವಾಕ – ಅವ್ರಗಳಿಗೆ ಕ್ರಮಪಾಠ – ೧೦೦ ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ – ಶರ್ಮರ ಮಡದಿಯಾದ ಚಿ.ಸೌ. ಭಾರತಿಯವರ ಭಾವ ಪ್ರಧಾನವಾದ ಉತ್ತಮ ಶಾರೀರದಿಂದ ೧೫೦ ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –`ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ `ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿಖರವಾಗಿ ತಿಳಿಸುವ 'ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾಸಹಸ್ರನಾಮ' , 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀಸೂಕ್ತ, ನಾರಾಯಣಸೂಕ್ತ, ದುರ್ಗಾಸೂಕ್ತಗಳಿರುವ ಧ್ವನಿಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠಶಾಲೆಯವರು, ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ ೨೦೦೪ರಲ್ಲಿ ಶ್ರೀಯುತ ಶರ್ಮರು **'ವೇದಭೂಷಣ'** ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ ೨೦೧೨ರಲ್ಲಿ ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ ೨೦೧೩ರಲ್ಲಿ ಕೋಟರಿ ಸಂಸ್ಥೆಯಿಂದಲೂ ಸನ್ಮಾನಕ್ಕೆ ಭಾಜನರಾಗಿರುತ್ತಾರೆ

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ-ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, ೩೨ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ. ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ. ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ.

ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶಮ್–

ತಾ–೫–೧–೨೦೧೩

ಸುಪ್ರೀತ ,

ಕ. ನಾ. ಮಾರ್ಕಂಡೇಯ ಅವಧಾನಿ.

ಮತ್ತೂರು ಸಂಸ್ಕೃತ ಗ್ರಾಮ, ಶಿವಮೊಗ್ಗ .

ಚಿಂತನ .....

ಈ ಎಲ್ಲ ವಿಚಾರಗಳಿಗೂ ಆಧಾರ – ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ!.

ಆದರೆ, ಅವರೆಂದಿಗೂ(ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇಇಲ್ಲ!!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು(ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು **'ಇದೇ ನಮ್ಮ ಸಂಪ್ರದಾಯ – ಆಚಾರ'** ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ

ನಡವಳಿಕೆಗೇ ಸಂಪ್ರದಾಯ – ಆಚಾರ ಎಂದು ಹೆಸರೇ ಹೊರತು, ನಾವು ನೀವು ಮಾಡುವಂತಹ, ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ ಸಂಪ್ರದಾಯ ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರ ಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೈಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ಅವರೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು–ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥ ಮತ್ತೂ

ಶ್ರುತಿಃಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ **ತತ್ಕಾಲದಲ್ಲಿ ಯಾವುದೇ ಶಾಸ್ತ್ರದ(ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ** ೩ ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರಾದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. ೨ ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬೆಳಸಿಕೊಳ್ಳಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ,

ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. **ಸರ್ವಸ್ಯ ಲೋಚನಂ ಶಾಸ್ತ್ರಂ** – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣು ಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ(ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ, **ಧರ್ಮಸಂದೇಶ** ಎಂಬ ಈ ೧೦ನೇ ಪುಷ್ಪದ ಮೊದಲ ಮುದ್ರಣದ ೧,೦೦೦ ಪ್ರತಿಗಳು ಕೇವಲ ೫ ತಿಂಗಳಲ್ಲಿ ಮುಗಿದು ಈಗ ದ್ವಿತೀಯ ಮುದ್ರಣವಾಗುತ್ತಿರುವುದು ಈ ಗ್ರಂಥದಲ್ಲಿರುವ ವಿಷಯಗಳ ಔನ್ನತ್ಯವನ್ನು ಹಾಗೂ ಓದುಗರು ನಮ್ಮ ಮೇಲೆ ಇಟ್ಟಿರುವ ವಿಶೇಷ ಅಭಿಮಾನವನ್ನೂ ತೋರಿಸುತ್ತದೆ. ಈ ಎಲ್ಲಾ ಯಶಸ್ಸಿಗೆ ಮೂಲ ಕಾರಣರಾದ ಮತ್ತು ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ ವಿದ್ವಾಂಸರಾದ ಶ್ರೀಮಾನ್ ಕಿರಣ ಅವಧಾನಿಗಳಿಗೆ ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಹಾಗೆಯೇ ಜ್ಞಾನಮಾರ್ಗದ ಈ ಕೆಲಸಕ್ಕೆ ಅಭಿಮಾನಿ ಓದುಗರ ಪ್ರೋತ್ಸಾಹ ಹೀಗೆಯೇ ಮುಂದುವರೆಯುತ್ತಿರಲಿ ಎಂದು ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ.

ಸಂಸ್ಕೃತಿ – ಆಚಾರ

ಧರ್ಮಶಾಸ್ತ್ರಗಳ ವಿಶೇಷ

ಸ್ವಾರಸ್ಯ ವಿಚಾರಗಳು

ಸಂಸ್ಕೃತಿ – ಆಚಾರ ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು

1. ಶಾಸ್ತ್ರೀಯವಿವಾಹದ ಹಂತಗಳು – ಒಂದು ವಿಮರ್ಶೆ

೧. ವ್ರತೋಪಕ್ರಮ, ವ್ರತೋತ್ಸರ್ಜನಗಳನ್ನು ವಿವಾಹದ ಹಿಂದಿನ ದಿನವೇ ಮಾಡಿಕೊಳ್ಳಬೇಕೆಂಬ ನಿಯಮವಿಲ್ಲ, ವಿವಾಹಕ್ಕೆ ಮೊದಲು, ಯಾವಾಗ ಬೇಕಾದರೂ ಮಾಡಿಕೊಳ್ಳಬಹುದು ಎಂಬುದು ಗೃಹ್ಯಸೂತ್ರಗಳನ್ನು ತಿಳಿದವರಿಗೆ ಗೊತ್ತಿರುತ್ತದೆ.

೨. ಹಾಗೂ ವೇದವೇ ಗೊತ್ತಿಲ್ಲ, ಅಧ್ಯಯನ ಇಲ್ಲವೇ ಇಲ್ಲ, ಎಂಬ ಇಂದಿನ ಬಹುಪಾಲು ಯುವಕರಿಗೂ ಅಧ್ಯಯನಕ್ಕೇ ಸಂಬಂಧಿಸಿದ ಈ ಕರ್ಮಗಳು ಅಗತ್ಯವೇ? ಎಂಬುದು ಚರ್ಚಾರ್ಹ ವಿಷಯವಾಗಿದೆ.

೩. ಉಪನಯನದಲ್ಲಿ ೧ನೇ – ಸಮಾವರ್ತನೆಯಲ್ಲಿ ೨ನೇ – ವಿವಾಹ ಪ್ರಧಾನಹೋಮ ಸಂಕಲ್ಪವಾದಮೇಲೆ ೩ನೇ ಯಜ್ಞೋಪವೀತ (ಜನಿವಾರ) ಎಂಬುದು ಶಾಸ್ತ್ರದ ನಿರ್ದೇಶನ. (ಅಣ್ಣ ಮತ್ತು ತಂದೆ ಇರುವ ಗೃಹಸ್ಥರಿಗೆ ಎರಡೇ)

೪. ಸಮಾವರ್ತನೆಯಲ್ಲಿ, ವರನಿಗೆ ಬೇಕಾದ, ಪೇಟ–ಛತ್ರಿ–ಕೋಲು–ಚಪ್ಪಲಿ–ವಸ್ತ್ರ–ಕಾಡಿಗೆ ಇವುಗಳನ್ನೆಲ್ಲಾ ವರನ ತಂದೆತಾಯಿಗಳೇ ಹೊಂದಿಸಿ ಕೊಳ್ಳಬೇಕೇ ಹೊರತು, ಹೆಣ್ಣಿನ ಕಡೆಯವರಲ್ಲ!!. ಏಕೆಂದರೆ ಈ ಕರ್ಮವು, ಸಂಪೂರ್ಣವಾಗಿ ವರನ ಮಂತ್ರೋಕ್ತ ಮತ್ತು ಸೂತ್ರೋಕ್ತ ಕರ್ತವ್ಯವಾಗಿರುತ್ತದೆಯೇ ಹೊರತು ವಿವಾಹದ ಅಂಗವಲ್ಲದ್ದಾಗಿರುವುದರಿಂದ!!.

೫. ಮಧುಪರ್ಕವೆಂಬ ಕರ್ಮವು, ಮಂತ್ರೋಕ್ತವಾದ, ಸೂತ್ರೋಕ್ತ ಕರ್ಮವೇ ಹೊರತು, ವರನಿಗೆ ಬೆಳ್ಳಿ–ಚಿನ್ನ–ವಾಚು–ಬೂಟು–ಸರ ಮುಂತಾದವುಗಳನ್ನು ಕೊಡುವ ಫ್ಯಾಶನ್ ಅಲ್ಲ. ಹಾಗೂ ಮದುವೆಯ ದಿನವೇ ಮಾಡುವ ವಿಷಯವೂ ಅಲ್ಲ. ಸ್ನಾತಕನಾದ(ಸಮಾವರ್ತನೆಯಾದ) ವ್ಯಕ್ತಿ ಯಾವಾಗ ಮೊದಲಬಾರಿ ಮನೆಗೆ ಬರುತ್ತಾನೋ(ಯಾರ ಮನೆಗೇ ಆಗಲೀ) ಆಗ ಅವನಿಗೆ ತೋರಿಸುವ ಮಂತ್ರೋಕ್ತವಾದ ಗೌರವದ ಒಂದುಕ್ರಮ.

೬. ಕಾಶೀಯಾತ್ರೆ ಎಂಬುದೂ ಕೂಡ, ವರನ ವೈಯುಕ್ತಿಕವೇ ಹೊರತು ಹೆಣ್ಣಿನವರಿಗೆ ಸಂಬಂಧಿಸಿಲ್ಲ. ಹಾಗಾಗಿ ಕಾಶೀಯಾತ್ರೆ ಸಾಮಾನುಗಳನ್ನೂ ಹೆಣ್ಣಿನವರಿಗೇ ಹೊರೆಸುವುದು ಸಭ್ಯತೆಯ ನಡವಳಿಕೆಗಳಲ್ಲ.

೭. ಇಂದು ಜರಗುತ್ತಿರುವ ಬಹುತೇಕ ವಿವಾಹಗಳು ಶಾಸ್ತ್ರೀಯದೃಷ್ಟಿಯಲ್ಲಿ ವಿವಾಹಗಳೇ ಅಲ್ಲ. ಹಾಗಾಗಿ ಆ ಹುಡುಗ–ಹುಡುಗಿ, ಗಂಡಹೆಂಡತಿಯರಾಗಿರುವುದೇ ಇಲ್ಲ!, ಹಾಗಾಗಿಯೇ ಹನಿಮೂನಿಗೆ ಹೋಗುವಾಗ, 'ನೀನಿಲ್ಲದೆ ನಾನಿಲ್ಲ!' ಎನ್ನುವ ಸಂಗಾತಿಗಳು, ಅಲ್ಲಿಂದ ವಾಪಸ್ಸು ಬರುವಾಗ ' ಒಂದು ನೀನಿರಬೇಕು, ಇಲ್ಲ ನಾನಿರಬೇಕು!' ಎಂದು ಡಿವೋರ್ಸ್ ಪೇಪರ್ ಹಿಡಿಯುವ ಸಂಗತಿ ಸರ್ವೇಸಾಮಾನ್ಯವಾಗಿದೆ. ಇದಕ್ಕೆಲ್ಲ ನಾವು ಶಾಸ್ತ್ರೀಯ ವಿಚಾರಗಳಲ್ಲಿ ನಡೆದುಕೊಳ್ಳುತ್ತಿರುವ ಧೋರಣೆಯೇ ಅಥವಾ ಉದಾಸೀನವೇ ನಿಜವಾದ ಒಳಕಾರಣವಾಗಿದೆ.

೮. ಶಾಸ್ತ್ರೀಯವಿವಾಹದ ಹಂತಗಳು –

* ನಿರೀಕ್ಷೆ * ಪ್ರವರ * ಸಂಕಲ್ಪ, ಕನ್ಯಾದಾನ * ಮಾಂಗಲ್ಯ ಧಾರಣೆ
* ಅಕ್ಷತಾರೋಪಣೆ * ಪಾಣಿಗ್ರಹಣ(ಕೈಹಿಡಿಯುವಿಕೆ) * ಸಪ್ತಪದೀ

* ಪ್ರಧಾನಹೋಮ * ಲಾಜಾಹೋಮ * ಅಗ್ನಿಧಾರಣೆ * ಪ್ರವಿಶ್ಯಹೋಮ (ವಧೂ, ವರನ ಮನೆಗೆ ಬರುವಿಕೆ) * ಧ್ರುವ–ಅರುಂಧತೀ–ಕೃತ್ತಿಕಾದಿ ನಕ್ಷತ್ರಗಳು, ಸಪ್ತಋಷಿಗಳ ದರ್ಶನ * ಗಂಧರ್ವಸಮಿತ್ತಿನೊಂದಿಗೆ ಬ್ರಹ್ಮಚರ್ಯ.

ಅದೇ ದಿನ ಸಂಜೆ ಅಥವಾ ಮರುದಿನ ಸಂಜೆ –

* ಆಗ್ನೇಯ ಸ್ಥಾಲೀಪಾಕ * ಸಾಯಮೌಪಾಸನ * ಇಲ್ಲಿಂದ ಮುಂದೆ ಒಟ್ಟು ೪ ರಾತ್ರಿಗಳು ಬ್ರಹ್ಮಚರ್ಯ ಹಾಗೂ ಆ ದಿನಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ೌಪಾಸನ * ಆ ೪ ನೇ ದಿನ ಮಧ್ಯರಾತ್ರಿಯಲ್ಲಿ, ಗಂಧರ್ವಸಮಿತ್ತಿನ ವಿಸರ್ಜನೆ – ಶೇಷಹೋಮ * ಗರ್ಭಾಧಾನ(ಪ್ರಸ್ಥ).

೯. ಖಂಡಿತವಾಗಿಯೂ, ವರಪೂಜೆ/ರಿಸಪ್ಷನ್ ಹೆಸರಿನಲ್ಲಿ ನಡೆಯುವ ಆ ಅಟಾಟೋಪಗಳನ್ನು – ಆಹಾರಗಳ ಚೆಲ್ಲಾಟವನ್ನು, ಬುದ್ಧಿವಂತ ಮನುಷ್ಯರಾದ ನಾವು ಬುದ್ದುಗಳಾಗಿ, ವಿವೇಚನೆಯೇ ಇಲ್ಲದೆ, ಪ್ರಾಣಿಗಳಿಗಿಂತ ಕಡೆ ಎಂಬಂತೆ ಮಾಡುತ್ತಿದ್ದೇವೆ, ಇದು ಬೇಕಾ ? ಇದರಲ್ಲಿ ಯಾವ ಶಾಸ್ತ್ರವೂ ಇಲ್ಲ.

೧೦. ಶ್ರೀರಾಮನು, 'ಜನನೀ ಮತ್ತು ಜನ್ಮಭೂಮಿ' ಇವೆರಡೂ ವಿಷಯು ಪ್ರತಿಮನುಷ್ಯನಿಗೂ ಕರ್ತವ್ಯದ ವಿಷಯವಾಗಿದೆ. ಜನನೀ ಎಂದರೆ ತನ್ನ ತಾಯಿ ಮತ್ತು ಕುಟುಂಬ ಹಾಗೂ ಜನ್ಮಭೂಮಿ ಎಂದರೆ ಸಮಾಜ. ಇವೆರಡೆರ ಅಭಿವೃದ್ಧಿ / ರಕ್ಷಣೆ / ಪಾಲನೆ, ಪ್ರತಿಯೊಬ್ಬನ ಕರ್ತವ್ಯ ಎಂದು ಉಪದೇಶಿಸಿದ್ದಾನೆ. ಆದರೆ ಇಂದು ಸಮಾಜದಲ್ಲಿ ಇವೆರಡನ್ನೂ ಮೆರೆತಿದ್ದೇವೆ, ಹಾಗಾಗಿ ಬೌದ್ಧಿಕ ಅಧೋಗತಿಗೆ ತಲಪುತ್ತಿದ್ದೇವೆ. ಒಂದು ತುತ್ತಿಗೂ ಪರದಾಡುವ ಸಾವಿರಾರು ಮಂದಿ ಇರುವಾಗ, ಅನ್ನವನ್ನೇ ಕಾಣದೇ ನಮ್ಮಲ್ಲಿಗೆ ಬಂದಿದ್ದಾರೆ ಎನ್ನುವರೀತಿ, ನಾಲ್ಕು ಇಂಚು ನಾಲಿಗೆಯ ಕ್ಷಣಿಕ ತೃಪ್ತಿಗಾಗಿ, ಆಹಾರಗಳ ವೈವಿಧ್ಯತೆ / ಚೆಲ್ಲುವಿಕೆ / ಗುಣಮಟ್ಟ? / ಆಡಂಬರ / ದುಬಾರಿಬೆಲೆ, ಇವುಗಳು ಬೇಕೇ?? – ಅನಿವಾರ್ಯವೇ??.

೧೧. ಬಂದವರೊಂದಿಗೆ, ಳ ಒಳ್ಳೆಯಮಾತು ಹಾಗೂ ಸರಳನಡವಳಿಕೆಗಳಿಂದ ನಮ್ಮ ಪ್ರತಿಷ್ಠೆ, ಗೌರವಗಳನ್ನು ಹೆಚ್ಚಿಸಿಕೊಳ್ಳಬೇಕೇ ಹೊರತು ಆಡಂಬರಗಳಿಂದ ಅಲ್ಲ. ವಿವಾಹ ಸಂಸ್ಕಾರದ ಹೆಸರಿನಲ್ಲಿ ನಮ್ಮನಮ್ಮ ಅತಿರೇಕಗಳನ್ನು ಪ್ರದರ್ಶಿಸುವುದು ಬೇಡ. ಅದಕ್ಕೆ ಬಳಸುವ ಲಕ್ಷಾಂತರ ಹಣವನ್ನು ನಿಮ್ಮ ಭವಿಷ್ಯಕ್ಕೋ – ನಿಮ್ಮ ಹೆಂಡತಿ ಅಥವ ಮಗಳ/ಮಗನ ಅಥವಾ ಅಳಿಯನ ಹೆಸರಿಗೋ ಬರೆದಿಡಿ. ಅದುಬಿಟ್ಟು ಆ ದುಬಾರಿ ಛತ್ರಕ್ಕೆ, ಎಸೆಯುವ ಅಲಂಕಾರಕ್ಕೆ, ರೋಗವನ್ನು ಉಡುಗೊರೆಯಾಗಿ ಕೊಡುವ ಆ ದುಬಾರಿ ಆಹಾರಕ್ಕೆ ದಯಮಾಡಿ ವಿನಿಯೋಗಿಸಬೇಡಿರಿ.

೧೨. ವಿವಾಹದಲ್ಲಿ, ಲಗ್ನವನ್ನು ಒಂದೊಂದುರೀತಿಯಲ್ಲಿ(ಉದಾ – ನಿರೀಕ್ಷೆ(ಜೀರಿಗೆಬೆಲ್ಲ), ಕನ್ಯಾದಾನ, ಮಾಂಗಲ್ಯಧಾರಣೆ, ಸಪ್ತಪದೀ..) ಇಡುವವರಿದ್ದಾರೆ. ಆದರೆ ಶಾಸ್ತ್ರೀಯವಾಗಿ ಸಪ್ತಪದೀ/ಪ್ರಧಾನಹೋಮಕ್ಕೆ ಇಡುವುದೇ ಸರಿ. ಏಕೆಂದರೆ ನಿರೀಕ್ಷೆ ಮಾಡಿದ ತಕ್ಷಣವಾಗಲೀ, ಕನ್ಯಾದಾನವನ್ನು ಸ್ವೀಕರಿಸಿದ ತಕ್ಷಣಕ್ಕಾಗಲೀ ಅವರು ಗಂಡ–ಹೆಂಡತಿಯರಾಗುವುದಿಲ್ಲ.

೧೩. ಅಲ್ಲದೇ ದಾನಪ್ರಕರಣದಲ್ಲಿ – ದಾನವನ್ನು ಕೊಡುವಾಗ ಶುದ್ಧಮನಸ್ಸಿನಿಂದ, ಆ ದಾನವನ್ನು ತೆಗೆದುಕೊಳ್ಳಲು ಯೋಗ್ಯರಾದವರಿಗೆ ಕೊಡು ಎನ್ನುತ್ತದೆಯೇ ಹೊರತು, ಯಾವುದೇ ದಾನವನ್ನು ಮಾಡುವಾಗಲೂ ಸಹ ಅದಕ್ಕೆ ಲಗ್ನ, ಮುಹೂರ್ತವನ್ನು ನೋಡುವ ಅಗತ್ಯವನ್ನು ಹೇಳುವುದಿಲ್ಲ. ಹೀಗಿರುವಾಗ ದಾನದ ರೂಪದಲ್ಲಿ ತೆಗೆದುಕೊಂಡ(ಸ್ವೀಕರಿಸಿದ) ಲಕ್ಷ್ಮೀಸ್ವರೂಪಳಾದ ಆ ಕನ್ಯೆಯನ್ನು ತನ್ನ ಹೆಂಡತಿಯನ್ನಾಗಿ ಪರಿವರ್ತನೆ ಮಾಡಿಕೊಳ್ಳುವ ಮಂತ್ರೋಕ್ತ ಕ್ರಿಯೆಗಳಾದ ಪಾಣಿಗ್ರಹಣ – ಸಪ್ತಪದೀ – ಪ್ರಧಾನಹೋಮ ಇವುಗಳು ಆದಾಗಮಾತ್ರ ಇವರಿಬ್ಬರ ಸಂಬಂಧ **'ಪತಿಪತ್ನೀ'** ಎನಿಸಿಕೊಳ್ಳುತ್ತದೆ. ಇಂತಹ ಸಂಬಂಧವನ್ನು ಮಂತ್ರೋಕ್ತವಾಗಿ ಪಡೆಯುವ ಸಮಯವು ಒಳ್ಳೆಯದಾಗಿರಬೇಕು. ಹಾಗಾಗಿ ಈ ಕ್ರಿಯೆಗಳಿಗೇ ಲಗ್ನವನ್ನು ಇಡಬೇಕು.

೧೪. ಹಾಗೆಯೇ ಕನ್ಯಾದಾನವನ್ನು ಮಾಡುವಾಗ, ತಂದೆತಾಯಿಗಳು ಮಾತ್ರ ವಧುವಿನ ಕೈಯನ್ನು ವರನ ಕೈಯಲ್ಲಿಇಟ್ಟು, ತುಳಸಿಯೊಂದಿಗೆ ನೀರನ್ನು ವಿಧಿವತ್ತಾಗಿ

ಹಾಕಬೇಕು ಅಷ್ಟೇ. ಅದುಬಿಟ್ಟು ನಾವುಗಳು ಈಗ ಕೆಲವೆಡೆ ನೋಡುತ್ತಿರುವ ಹಾಗೆ ಮದುವೆಗೆ ಬಂದಿರುವ ಎಲ್ಲಾ ಹೆಂಗಸರೂ, ವಧುವಿನ ತಂದೆ ಹಿಡಿದಿರುವ ವಧುವಿನ ಕೈಗೆ ನೀರನ್ನು ಹಾಕುವುದು ಅತ್ಯಂತ ಅವಿವೇಕದ ನಡೆಯಾಗಿದೆ. ಏಕೆಂದರೆ **'ದಾನಕೊಡುವ ವಸ್ತು/ವ್ಯಕ್ತಿ'**, ದಾನಕೊಡುವವನ ಸ್ವಂತದ್ದಾಗಿರಬೇಕು ಹಾಗೂ ನ್ಯಾಯಯುತ ಸಂಪಾದನೆಯಾಗಿರಬೇಕು. ಅಲ್ಲದೇ ಒಂದುವಸ್ತುವನ್ನು **'ಒಬ್ಬರು – ಒಂದುಸಲ – ಒಬ್ಬರಿಗೆ'** ಮಾತ್ರ ದಾನಕೊಡಬಹುದೇ ಹೊರತು, ಈ ವಧುವಿನ ತಂದೆತಾಯಿಗಳಿಗೆ ಸಂಬಂಧಪಟ್ಟ ಆ ವಧುವನ್ನು **'ಊರಿನ ಹೆಂಗಸರೆಲ್ಲಾ'** ದಾನಕೊಡುವುದು ಎಂದರೆ ಅರ್ಥ ಏನಾಗುತ್ತದೆ ಎಂದು ಎಲ್ಲರೂ ಊಹಿಸಬಹುದು!!.

ಅಲ್ಲದೇ **'ದಾನ'** ಎಂಬುದು, ವಿಧಿಗೊಳಪಟ್ಟ ಒಂದು ಆಚರಣೆ, ಅದನ್ನು ಅದರ ಕ್ರಮದಲ್ಲೇ ಮಾಡಬೇಕು. ಬಂದಂತಹ ಬಂಧುಗಳು–ಹೆಂಗಸರು, ಆ ವಧುವರರಿಗೆ 'ಮಾನಸಿಕವಾಗೇ ಆಶೀರ್ವಾದ–ಹಾರೈಕೆಗಳನ್ನು ಮಾಡಬಹುದು, ಇಲ್ಲವಾದರೆ ಅಕ್ಷತೆಯನ್ನು ಕೊಟ್ಟು(ಎರಚದೇ...) ಹಾರೈಸಬೇಕೇ ಹೊರತು, ಬೇರೇ ಗಂಡಸಿಗೆ ಪ್ರಾಪ್ತವಾಗಿರುವ, ತನ್ನದಲ್ಲದ ಆ ಲಕ್ಷ್ಮೀಸ್ವರೂಪಳಾದ ಕನ್ಯೆಯನ್ನು, ನೆರೆದಿರುವ ಎಲ್ಲಾ ಹೆಂಗಸರೂ, ಮಡಿ–ಕರ್ಮದಬದ್ಧತೆ–ಹಿನ್ನೆಲೆ, ಇವೇನನ್ನೂ ಗಮನಿಸದೇ ಮಾಡುವ ನಡವಳಿಕೆ ಬಹಳ ದೋಷದ್ದಾಗಿರುತ್ತದೆ.

೧೫. ಅಲ್ಲದೇ ಈಗ ಎಲ್ಲರೂ(ತಿಳಿದವರೂ ಸಹ) ಯಾವುದೇ ಸಂಸ್ಕಾರಗಳಿಗೆ ಲಗ್ನವನ್ನು ಮಾತ್ರ ನೋಡುತ್ತಾರೆಯೇ ವಿನಃ ಮುಹೂರ್ತವನ್ನು ಗಮನಿಸುವುದೇ ಇಲ್ಲದಿರುವುದು ಸೋಜಿಗವೇ ಸರಿ!. ದಿನಕ್ಕೆ ೧೨ ಲಗ್ನಗಳೂ, ೩೦ ಮುಹೂರ್ತಗಳೂ ಇರುತ್ತವೆ. ಸುಲಗ್ನ ಮತ್ತು ಸುಮುಹೂರ್ತ ಇವೆರಡೂ ಜ್ಯೋತಿಷ್ಯದ ಪ್ರಕಾರ ಅಗತ್ಯವೇ.

೧೬. ನಾಲ್ಕು ಆಶ್ರಮಗಳಲ್ಲೇ ಅತೀ ಜವಾಬ್ದಾರಿ ಇರುವ ಗೃಹಸ್ಥಾಶ್ರಮವನ್ನು ಹೊಂದುವ, ಅದ್ಭುತ ಅರ್ಥಗಳುಳ್ಳ ಮಂತ್ರಗಳಿಂದ ಸಂಸ್ಕಾರಗೊಳ್ಳಬೇಕಾದ ವಿವಾಹವೆಂಬ ಇಡೀ ಪ್ರಕ್ರಿಯೆಯೇ ಭೇದವೇ ಇಲ್ಲದೆ, ಸಮಾಜದ ಎಲ್ಲಾ ವರ್ಗಗಳಲ್ಲೂ ಸಂಪೂರ್ಣ ಕಲುಷಿತವಾಗಿದೆ ಎಂಬುದು ದೌರ್ಭಾಗ್ಯ.

ಸಂಸ್ಕಾರಕ್ಕೆ, ಅದರ ವಿಧಿವಿಧಾನಗಳಿಗೆ ಪೂರಕವಾಗಿ ಉಳಿದ ವ್ಯವಸ್ಥೆಗಳು (ಉದಾ – ಅಡುಗೆ – ಅಲಂಕಾರ – ಫೋಟೋ – ಉಡುಗೊರೆ – ಬಂಧುಗಳ ನಡವಳಿಕೆ...) ಕಾರ್ಯನಿರ್ವಹಿಸಬೇಕು. ಆದರೆ ಇಂದಿನ ವಿವಾಹಗಳು, ಮೇಲೆ ತಿಳಿಸಿದ ಉಳಿದ ವ್ಯವಸ್ಥೆಗಳ ಅತಿವಿಜೃಂಭಣೆ ಹಾಗೂ ಶಾಸ್ತ್ರದ ಬಗ್ಗೆ ಅಷ್ಟೇ ಅಸಡ್ಡೆ ಮತ್ತೂ ಶಾಸ್ತ್ರಕ್ಕಿಂತ ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಪ್ರತಿಷ್ಠೆ, ಅಸಹ್ಯ ಮೇಲಾಟಗಳಿಂದ ಈ ಸಂಸ್ಕಾರದ ಎಲ್ಲಾ ಗಂಭೀರತೆ – ಬದ್ಧತೆಗಳನ್ನು ನುಚ್ಚುನೂರಾಗಿಸಿದ್ದೇವೆ, ಅತಿಬುದ್ಧಿವಂತ ನಾಗರಿಕಶ್ರೇಷ್ಠರಾದ ನಾವುಗಳು. ಈ ವಿಷಯದಲ್ಲಿ ನಿಮ್ಮ ಮನಸ್ಸು ಏನನ್ನುತ್ತದೆ ? ಒಂದು ನಿಮಿಷ ಏಕಾಂತದಲ್ಲಿ ಮನಸ್ಸನ್ನು ಸಹಜವಾಗಿ ಕೇಳಿಕೊಳ್ಳಿ!, ಇಂತಹ ರೀತಿಯಲ್ಲಿ ನಿಮ್ಮ / ನಿಮ್ಮ ಮನೆಯ ವಿವಾಹ ಆಗಬೇಕೇ!!!???.

2. ಅವಧೂತಮಹಾತ್ಮರ ಅಮೃತವಾಣಿ

೧. ಕಡಿಮೆ ಲಗೇಜಿನಿಂದ ಸುಖಕರ ಪ್ರಯಾಣ – ಲೆಸ್ ಲಗೇಜ್ ಈಸ್ ವೋರ್‌ಕಂಫರ್ಟ್ ಟು ಟ್ರಾವೆಲ್ ಎ ಪ್ಲೆಜರ್ ಜರ್ನಿ..... ದಿನಚರಿಯಲ್ಲಿ ವಿಷಯಗಳನ್ನು ಮಿತಿಮೀರಿ ತುಂಬಿಕೊಂಡರೆ, ಜೀವನದ ಪ್ರಯಾಣ ಭಾರವಾಗಿ ಹಿಂಸೆ ತರುತ್ತದೆ.

೨. ತಪ್ಪು = ಮನಸ್ಸು ಸಂಕುಚಿತ, ಸರಿ = ಮನಸ್ಸು ವಿಶಾಲ.

೩. ಯಾವುದು ಏನೇ ಆದರೂ ನೀನು ಆರೋಪ ಹೊರಿಸಬೇಡ.

೪. ಇನ್ನೊಂದು ಮನಸ್ಸನ್ನು ನೋಯಿಸಬೇಡ.

೫. ಇನ್ನೊಂದು ವಿಷಯಕ್ಕೆ ಹೋಗಬೇಡ – ಅದು ಮೈಲಿಗೆ.

೬. ಮನಸ್ಸೇ ಎಲ್ಲದಕ್ಕೂ ಕಾರಣ ಹಾಗಾಗಿ ಮನಸ್ಸನ್ನು ಶುಭ್ರವಾಗಿಟ್ಟುಕೋ.

೭. ಯಾರೇನೇ ಅಂದರೂ ನಿನ್ನ ಮನಸ್ಸನ್ನು ಕೆಡಿಸಿಕೊಳ್ಳಬೇಡ, ಕರ್ತವ್ಯ ನಿರ್ವಹಿಸು, ನಿರತನಾಗು.

೮. ಬುದ್ಧಿಯು, ನೀನು ಮಾಡಿದ ಕರ್ಮವನ್ನು ಅನುಸರಿಸಿ ಬರುತ್ತದೆ. ಆದ್ದರಿಂದ ಒಳ್ಳೆಯ ಮನಸ್ಸಿನಿಂದ ಕೆಲಸಮಾಡು.

೯. ನಿನ್ನ ತಪ್ಪುಗಳನ್ನು ನೀನು ತಿಳಿದರೆ, ಜೀವನದಲ್ಲಿ ನೀ ಅರ್ಧ ಗೆದ್ದಂತೆ ಹಾಗಾಗಿ ನಿತ್ಯವೂ ನಿನ್ನನ್ನು ನೀನು ವಿಮರ್ಶಿಸಿಕೋ.

೧೦. ಆಡಬೇಡ, ನಡೆಸು. ನಾನು ಪ್ರಪಂಚದ ಎಲ್ಲಾ ಕಡೆ ಇದ್ದೇನೆ, ಎಲ್ಲವನ್ನೂ ನೋಡುತ್ತಿರುತ್ತೇನೆ, ನಾನೇ ಸರ್ವಸ್ವ.

೧೧. ಪ್ರತಿಯೊಬ್ಬರ ನುಡಿಯಲ್ಲೂ ಸತ್ಯವಿದೆ — ಆ ಸತ್ಯವನ್ನು ಹುಡುಕು.

೧೨. ವರ್ತಮಾನದಲ್ಲೇ ಇರು – ಇಂದಿನದೇ ಗೊತ್ತಿಲ್ಲ, ನಾಳೆಯ ಬಗ್ಗೆ ಚಿಂತೆ ಏಕೆ ? !

೧೩. ನಿನ್ನೆ [ಭೂತ] ನಾಳೆ [ಭವಿಷ್ಯ] ಗಳಲ್ಲಿ ಕಾಲ ಕಳೆದು, ಇಂದಿನದನ್ನು [ವರ್ತಮಾನ] ವ್ಯರ್ಥಮಾಡಿಕೊಳ್ಳಬೇಡ.

೧೪. ವಸ್ತ್ರ ಸನ್ಯಾಸಕ್ಕಿಂತ ವಿಷಯ ಸನ್ಯಾಸವೇ ದೊಡ್ಡದು ಮತ್ತು ಇದನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು, ಆಗ ಅವರು ಯಾವ ಆಶ್ರಮದಲ್ಲಿದ್ದರೂ ಅವರೇ ನಿಜವಾದ ಸನ್ಯಾಸಿ, ಯೋಗಿ.

೧೫. ನಿನ್ನ ಇಚ್ಛೆಯಂತೆ ಪರಿಸ್ಥಿತಿಯು ನಡೆದರೆ ನೀನು ಮೈಮರೆಯುತ್ತೀಯ. ನಿನ್ನ ವಿರುದ್ಧವಾಗಿ ನಡೆದಾಗ ಮಾತ್ರ ಎಚ್ಚರದಿಂದ ಇರುತ್ತೀಯ – ಇವೇ ಸಂಕಲ್ಪ ಮತ್ತು ವಿಕಲ್ಪಗಳು.

೧೬. ನೀನು ಯಾವುದನ್ನೂ ಸಂಕಲ್ಪಿಸಬೇಡ, ಏಕೆಂದರೆ ನಾನು ನಿರ್ದೇಶಕ, ನೀನು ಕೇವಲ ಪಾತ್ರಧಾರಿ. ಯಾವ ದೃಶ್ಯ ಹೇಗಿರಬೇಕೆಂದು ನಿರ್ಧರಿಸುವವನು ನಾನು!.

೧೭. ಗಾಳಿಯಂತೆ, ನೀನು ಜೀವನದ ಎಲ್ಲ ವಿಭಾಗಗಳಲ್ಲೂ ಪ್ರವೇಶವನ್ನು ಪಡೆ, ಆದರೆ ಅಂಟಿಕೊಳ್ಳಬೇಡ.

೧೮. ಅವನು ಕೊಟ್ಟದ್ದನ್ನು ಸ್ವೀಕರಿಸು, ನೀನು ಬಯಸಬೇಡ.

೧೯. ಮನಸ್ಸನ್ನು ಓಡಿಸಬೇಡ, ಒಂದುಕಡೆ ನಿಲ್ಲಿಸಿಕೋ.

೨೦. ಮೌನವನ್ನು ಅಭ್ಯಾಸ ಮಾಡು, ಅದೇ ಸಾಧನೆಯ ಮೊದಲ ಮೆಟ್ಟಿಲು.

೨೧. ಕೊಡುವವನಿಗಿಂತ ತೆಗೆದುಕೊಳ್ಳುವವನೇ ದೊಡ್ಡವನು.

೨೨. ಗುರುವಿಗಿಂತ ಶಿಷ್ಯನೇ ದೊಡ್ಡವನು, ಏಕೆಂದರೆ ಶಿಷ್ಯನಿಲ್ಲದಿದ್ದರೆ ಗುರುವೆಲ್ಲಿ ? — ಗುರು ಹೆಚ್ಚೋ ಶಿಷ್ಯ ಹೆಚ್ಚೋ ? ನಿರ್ಮಲವಾದ ಭಾವವೇ ದೊಡ್ಡದು.

೨೩. ಗುರು ಸ್ಪಂದಿಸುವುದು ಆಂತರ್ಯದ ಧ್ವನಿಗೆ ಮಾತ್ರ.

೨೪. 'ಶಬ್ದ' ವೆಂಬುದು ಬ್ರಹ್ಮಸ್ವರೂಪ, ಎಚ್ಚರ ! ನೀನು ಆಡುವ ಮಾತನ್ನು ಅದು ಸದಾ ಅಣಕಿಸುತ್ತದೆ.

೨೫. ಪಾದರಕ್ಷೆ ಅಲ್ಲ, ಪದರಕ್ಷೆ. ನೀನಾಡುವ ಮಾತುಗಳಲ್ಲಿ ಹಿಡಿತವಿರಲಿ.

೨೬. ಪಾದಪೂಜೆ ಅಲ್ಲ, ಪದಪೂಜೆ. ನಿನ್ನ ಮಾತುಗಳು ಪೂಜಿಸುವಂತಿರಲಿ.

೨೭. ಬಾಳೇಹಣ್ಣನ್ನು ನೈವೇದ್ಯ ಮಾಡುವುದಲ್ಲ, ಬಾಳನ್ನು ಹಣ್ಣಾಗಿಸಿ ಅವನಿಗೆ (ದೇವರಿಗೆ) ಸಮರ್ಪಿಸುವುದರ ಕಡೆಗೆ ಗಮನವಿಡು.

೨೮. ಹಣ್ಣು–ಕಾಯಿ ಮಾಡಿಸುವುದಲ್ಲ — ಕಾಯವನ್ನು [ದೇಹ] ಹಣ್ಣಾಗಿಸುವುದರತ್ತ ದೃಷ್ಟಿ ಇರಲಿ.

೨೯. ಮನುಷ್ಯನು ಕೇವಲ ಬದುಕಬಾರದು, ಬಾಳಬೇಕು. ಏಕೆಂದರೆ ಎಲ್ಲ ಜೀವಿಗಳೂ ಬದುಕತ್ತವೆ, ಅದರಲ್ಲೇನು ವಿಶೇಷ ?

೩೦. ಮನುಷ್ಯನ ದೇಹ ಸಂಬಂಧಿತ ಹಿರಿತನಕ್ಕೆ ಬೆಲೆಯಿಲ್ಲ. ನಡವಳಿಕೆಯ ಹಿರಿತನವೇ ದೊಡ್ಡದು, ಏಕೆಂದರೆ ಹುಟ್ಟಿದ ಎಲ್ಲಾ ಪ್ರಾಣಿಗಳ ದೇಹಕ್ಕೂ ವಯಸ್ಸಾಗುತ್ತದೆ.

೩೧. ತಂದೆ–ತಾಯಿಗಳು ಮೊದಲು ತಮ್ಮ ತಮ್ಮ ಮಕ್ಕಳ ದೃಷ್ಟಿಯಲ್ಲಿ ಸರಿ ಎನಿಸಿಕೊಳ್ಳಿ, ಅದೇ ನಿಜವಾದ ಸರ್ಟಿಫಿಕೇಟ್.

೩೨. ಬೀಜವನ್ನು ಬಿತ್ತುವಾಗ ಯೋಚಿಸಿ ಯಾವ ಹಣ್ಣು ಬೇಕೆಂದು, ಫಲ ಬಂದಾಗ ಪಶ್ಚಾತ್ತಾಪ ಪಟ್ಟರೆ ಉಪಯೋಗವಿಲ್ಲ, ಅದೇ ರೀತಿ ಮಕ್ಕಳನ್ನು ಬೆಳೆಸುವ ಸಮಯದಲ್ಲಿ ನಿಗಾ ವಹಿಸಿ, ಅದು ಬಿಟ್ಟು ಮಕ್ಕಳು ದೊಡ್ಡವರಾದ ಮೇಲೆ ತಿದ್ದುವುದು ಉಪಯೋಗಕ್ಕೆ ಬಾರದು. ಹುಣಿಸೆ ಬೀಜವನ್ನು ಬಿತ್ತಿ ಮಾವಿನ ಹಣ್ಣನ್ನು ಬಯಸಬೇಡಿ.

೩೩. ತಂದೆ, ತಾಯಿಯರ ಸ್ಥಾನ ಅತ್ಯುನ್ನತ, ಅದಕ್ಕೆ ಬೆಲೆ ಕೊಡದವನಿಗೆ ಎಲ್ಲಿಯೂ ಬೆಲೆಸಿಗದು. ಅವರಿಗೆ, ನಿತ್ಯವೂ ನಮಿಸಬೇಕು. ಅವರ ಧರ್ಮಯುಕ್ತವಾದ ಯಾವ ಮಾತನ್ನೂ ಮೀರಬಾರದು.

೩೪. ಕಲ್ಪನೆಗಳಿಂದ ದೂರವಿರಿ.

೩೫. ನಿನ್ನ ಭಾವನೆಗಳನ್ನು ಗೌಪ್ಯವಾಗಿಡು.

೩೬. ಗುರುವಿನ 'ವಾಕ್ಯ' ಪ್ರಮಾಣವೇ ಹೊರತು 'ದೇಹ' ಪ್ರಮಾಣವಲ್ಲ.

೩೭. ವಿಷಯಗಳನ್ನು ಬೆರಸಬಾರದು.

೩೮. ಸದಾ ಕಲಿಯುತ್ತಲೇ, ವಿದ್ಯಾರ್ಥಿಯಾಗೇ ಇರು.

೩೯. ಪ್ರಪಂಚದಲ್ಲಿ ಕೆಟ್ಟದ್ಯಾವುದೂ ಇಲ್ಲ, ಎಲ್ಲವನ್ನೂ ಒಳ್ಳೆಯದಾಗಿ ಕಾಣು.

೪೦. ವಿಷಯಗಳು ತಪ್ಪಲ್ಲ, ಭಾವನೆಗಳು ತಪ್ಪಾಗಬಹುದು.

೪೧. ಶೇಖರಿಸು, ಸಂಗ್ರಹಿಸಬೇಡ. ಸಂಗ್ರಹಿಸು, ಶೇಖರಿಸಬೇಡ.

೪೨. ಪ್ರತಿಯೊಬ್ಬನಲ್ಲೂ ದೇವರನ್ನು ಕಾಣು.

೪೩. ಬದುಕು, ಬದುಕಲು ಬಿಡು.

೪೪. ಬಿ ಎವರ್ ರೆಡಿ , ಬಟ್ ನಾಟ್ ಪ್ರಿಪೇರ್ಡ್ – ಮನಸ್ಸನ್ನು ಯಾವಾಗಲೂ ಸಿದ್ಧವಾಗಿಡು, ಬೇರೆ ಏನನ್ನೂ ಮೊದಲೇ ಸಿದ್ಧಪಡಿಸಬೇಡ.

೪೫. ಗುಲಾಬಿಗಿಡದಲ್ಲಿ ಮುಳ್ಳು ಎನಬೇಡ, ಮುಳ್ಳಿನಗಿಡದಲ್ಲೂ ಗುಲಾಬಿ ಹೂ ಎನ್ನು – ಎಲ್ಲದರಲ್ಲೂ ಒಳ್ಳೆಯದನ್ನೇ ಗುರುತಿಸು.

೪೬. ಜೀವನ ಎಂದರೆ – ನೀರಾದರೆ ದೋಸೆ, ಗಟ್ಟಿಯಾದರೆ ಇಡ್ಲಿ, ಬಂದಂತೆ ಸ್ವೀಕರಿಸು.

೪೭. ಸಹಿಸುವುದನ್ನು ಮತ್ತು ಕಾಯುವುದನ್ನು ಕಲಿ.

೪೮. ಅಪಕೀರ್ತಿ – ನಿಮಿಷ, ಕೀರ್ತಿ – ವರ್ಷ ವರ್ಷ.

೪೯. ಸರಳತೆಯನ್ನು ಇಷ್ಟಪಡು, ಅಳವಡಿಸಿಕೋ.

೫೦. ಎಲ್ಲಿ, ಶಿಸ್ತು– ನಿಯಮ – ಬದ್ಧತೆ – ನಿರಂತರತೆ ಇರುತ್ತದೋ ಅಲ್ಲಿ ಬೆಳವಣಿಗೆ ಯಶಸ್ಸು ಇರುತ್ತದೆ.

3. ಕರ್ಮಾಚರಣೆಯ ವಿಚಾರದಲ್ಲಿ ಭಗವದ್ಗೀತೆಯ ಆದೇಶ ಏನು ?

೧. ಯಃ ಶಾಸ್ತ್ರವಿಧಿ ಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಂ ॥
ಅ–೧೬ . ಶ್ಲೋ–೨೩ ॥

ಯಾವ ಪುರುಷನು ಶಾಸ್ತ್ರವಿಧಿಯನ್ನು ತ್ಯಜಿಸಿ ತನ್ನ ಇಚ್ಛೆಯಿಂದ ಮನಬಂದಂತೆ ಆಚರಣೆ ಮಾಡುತ್ತಾನೋ ಅವನು ಸಿದ್ಧಿಯನ್ನು ಪಡೆಯುವುದಿಲ್ಲ, ಪರಮಗತಿಯನ್ನೂ ಹಾಗೂ ಸುಖವನ್ನೂ ಹೊಂದುವುದಿಲ್ಲ.

೨. ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥
ಅ–೧೬ . ಶ್ಲೋ–೨೪ ॥

ಆದ್ದರಿಂದ ಈ ಕರ್ತವ್ಯ ಮತ್ತು ಅಕರ್ತವ್ಯಗಳ ವ್ಯವಸ್ಥೆಯಲ್ಲಿ ಶಾಸ್ತ್ರವೇ ಪ್ರಮಾಣವಾಗಿರುತ್ತದೆ, ಅದನ್ನು ತಿಳಿದುಕೊಂಡು ಶಾಸ್ತ್ರವಿಧಿಯಿಂದ ನಿಯತಕರ್ಮವನ್ನೇ ಮಾಡಬೇಕು.

೩. ಅರ್ಜುನ ಉವಾಚ –

ಯೇ ಶಾಸ್ತ್ರವಿಧಿ ಮುತ್ಸೃಜ್ಯ ಯಜಂತೇ ಶ್ರದ್ಧಯಾನ್ವಿತಾಃ ।
ತೇಷಾಂ ನಿಷ್ಠಾ ತು ಕಾ ಕೃಷ್ಣ ಸತ್ತ್ವಮಾಹೋ ರಜಸ್ತಮಃ ॥
ಅ–೧೭ .ಶ್ಲೋ–೧ ॥

ಅರ್ಜುನನು ಹೇಳಿದನು –

ಹೇ ಕೃಷ್ಣ, ಯಾವ ಮನುಷ್ಯರು ಶಾಸ್ತ್ರವಿಧಿಯನ್ನು ತ್ಯಾಗಮಾಡಿ ಆದರೆ ಶ್ರದ್ಧೆಯಿಂದ ಯುಕ್ತರಾಗಿ ದೇವತೆಗಳ ಪೂಜೆಯನ್ನು ಮಾಡುತ್ತರೋ ಅವರುಗಳ ಸ್ಥಿತಿಯು ಎಂತಹುದು?

೪. ಶ್ರೀ ಭಗವಾನುವಾಚ –

ತ್ರಿವಿಧಾ ಭವತಿ ಶ್ರದ್ಧಾ ದೇಹಿನಾಂ ಸಾ ಸ್ವಭಾವಜಾ ।
ಸಾತ್ವಿಕೀ ರಾಜಸೀ ಚೈವ ತಾಮಸೀ ಚೇತಿ ತಾಂ ಶೃಣು ॥
ಅ–೧೭ . ಶ್ಲೋ–೨ ॥

ಭಗವಂತನು ಹೇಳಿದನು –

ಶಾಸ್ತ್ರೀಯ ಸಂಸ್ಕಾರಗಳಿಂದ ರಹಿತವಾದ ಆದರೆ ಕೇವಲ ಸ್ವಭಾವದಿಂದ ಉತ್ಪನ್ನವಾದ ಮನುಷ್ಯರ ಆ ಶ್ರದ್ಧೆಯು ಸಾತ್ವಿಕ, ರಾಜಸ ಹಾಗೂ ತಾಮಸ ಹೀಗೆ ಮೂರು ಪ್ರಕಾರದ್ದಾಗಿಯೇ ಇರುತ್ತದೆ.

೫. ಅಶಾಸ್ತ್ರ ವಿಹಿತಂ ಘೋರಂ ತಪ್ಯಂತೇ ಯೇ ತಪೋ ಜನಾ: ।
ದಂಭಾಹಂಕಾರಸಂಯುಕ್ತಾ: ಕಾಮರಾಗಬಲಾನ್ವಿತಾ: ॥
ಅ–೧೭ . ಶ್ಲೋ–೫ ॥

ಯಾವ ಮನುಷ್ಯರು ಶಾಸ್ತ್ರವಿಧಿಯಿಂದ ರಹಿತವಾಗಿ ಕೇವಲ ಮನ:ಕಲ್ಪಿತವಾದ ವಿವಿಧ ರೀತಿಯ ಪೂಜೆ, ತಪಸ್ಸನ್ನು ಆಚರಿಸುತ್ತಾರೋ ಹಾಗೂ ದಂಭ ಮತ್ತು ಅಹಂಕಾರದಿಂದ ಕೂಡಿದವರಾಗಿ, ಕಾಮನೆ–ಆಸಕ್ತಿ ಮತ್ತು ಬಲದ ಅಭಿಮಾನದಿಂದಲೂ ಕೂಡಿದವರಾಗಿರುತ್ತಾರೋ,

೬. ಕರ್ಶಯಂತ: ಶರೀರಸ್ಥಂ ಭೂತಗ್ರಾಮಮಚೇತಸ: ।
ಮಾಂ ಚೈವಾಂತ: ಶರೀರಸ್ಥಂ ತಾನ್ವಿದ್ಧ್ಯಾಸುರನಿಶ್ಚಯಾನ್ ॥
ಅ –೧೭ . ಶ್ಲೋ–೬ ॥

ಹಾಗೂ ಯಾರು ಶರೀರ ರೂಪದಿಂದ ಸ್ಥಿತವಾದ ಪ್ರಾಣಿ ಸಮುದಾಯವನ್ನು ಮತ್ತು ಅಂತ:ಕರಣದಲ್ಲಿ ಸ್ಥಿತ ಪರಮಾತ್ಮನಾದ ನನ್ನನ್ನು ಕೂಡ ಕೃಶ ಗೊಳಿಸುವವರಾಗಿದ್ದಾರೋ ಅಂತಹ ಆ ಅಜ್ಞಾನಿಗಳನ್ನು ನೀನು ಆಸುರೀ ಸ್ವಭಾವದವರೆಂದು ತಿಳಿ ಹಾಗೂ ಅವರ ಯಾವ ಆರಾಧನೆಗಳಿಗೂ ಫಲವಿಲ್ಲ .

೭. ಅಫಲಾಕಾಂಕ್ಷಿಭಿರ್ಯಜ್ಞೋ ವಿಧಿದೃಷ್ಟೋ ಯ ಇಜ್ಯತೇ ।
ಯಷ್ಟವ್ಯಮೇವೇತಿ ಮನ: ಸಮಾಧಾಯ ಸ ಸಾತ್ವಿಕ: ॥
ಅ–೧೭ . ಶ್ಲೋ–೧೧ ॥

ಶಾಸ್ತ್ರವಿಧಿಯಿಂದ ಹೇಳಲ್ಪಟ್ಟ ಯಾವ ಯಜ್ಞವೂ ಪ್ರತಿಯೊಬ್ಬರೂ ಮಾಡಲೇಬೇಕಾದ ಕರ್ತವ್ಯವಾಗಿದೆ. ಫಲವನ್ನು ಬಯಸದೇ ಮಾಡಲ್ಪಡುವ ಕರ್ಮವು ಸಾತ್ವಿಕವಾಗಿರುತ್ತದೆ.

೮. ಅಭಿಸಂಧಾಯ ತು ಫಲಂ ದಂಭಾರ್ಥಮಪಿ ಚೈವ ಯತ್ ।
ಇಜ್ಯತೇ ಭರತಶ್ರೇಷ್ಠ ತಂ ಯಜ್ಞ ವಿದ್ಧಿ ರಾಜಸಮ್ ॥
ಅ–೧೭ . ಶ್ಲೋ–೧೨ ॥

ಕೇವಲ ದಂಭಾಚರಣೆಗಾಗಿಯೇ ಅಥವಾ ಫಲವನ್ನು ಕೂಡ ದೃಷ್ಟಿಯಲ್ಲಿ ಇಟ್ಟುಕೊಂಡು ಯಾವ ಪೂಜಾದಿ ಯಜ್ಞಗಳು ಮಾಡಲಾಗುತ್ತದೆಯೋ ಅವುಗಳನ್ನು ರಾಜಸೀ ಆರಾಧನೆಗಳೆಂದು ತಿಳಿಯಬೇಕು.

೯. ವಿಧಿಹೀನಮಸೃಷ್ಟಾನ್ನಂ ಮಂತ್ರಹೀನಮದಕ್ಷಿಣಂ ।
ಶ್ರದ್ಧಾವಿರಹಿತಂ ಯಜ್ಞಂ ತಾಮಸಂ ಪರಿಚಕ್ಷತೇ ॥
ಅ–೧೭ . ಶ್ಲೋ–೧೩ ॥

ಶಾಸ್ತ್ರವಿಧಿಯಿಲ್ಲದೆ, ಅನ್ನದಾನ ರಹಿತವಾದ, ಮಂತ್ರಗಳಿಲ್ಲದ, ದಕ್ಷಿಣೆಯಿಲ್ಲದ, ಶ್ರದ್ಧೆಯಿಲ್ಲದೆ ಮಾಡಲ್ಪಡುವ ಯಜ್ಞಾದಿ ಆರಾಧನೆಗಳು ತಾಮಸ ರೀತಿಯದ್ದು ಹಾಗೂ ಯಾವುದೇ ಫಲವಿಲ್ಲದ್ದು.

೧೦. ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ ॥
ಅ–೧೭ . ಶ್ಲೋ–೨೮ ॥

ಶ್ರದ್ಧೆಯಿಲ್ಲದೆ ಮಾಡುವ ಹವನವು, ಕೊಡಲಾದ ದಾನ, ಆಚರಿಸಿದ ತಪವು, ಮತ್ತೂ ಮಾಡಲ್ಪಟ್ಟ ಯಾವುದಾದರೂ ಶುಭಕರ್ಮಗಳಿವೆಯೋ ಅವೆಲ್ಲವೂ **ಅಸತ್ತು** ಎಂದು ಹೇಳಲಾಗುತ್ತದೆ, ಆದ್ದರಿಂದ ಅದು ಈ ಲೋಕದಲ್ಲಾಗಲೀ, ಸತ್ತ ನಂತರವೇ ಆಗಲೀ ಯಾವುದೇ ರೀತಿಯಲ್ಲಿಯೂ ಲಾಭದಾಯಕವಲ್ಲ.

ಈ ರೀತಿಯಾಗಿ ಕರ್ಮ, ಮತ್ತು ಧರ್ಮಗಳ ಸ್ವರೂಪವು ಅತ್ಯಂತ ವಿಶಾಲವೂ, ಸೂಕ್ಷ್ಮವೂ ಆಗಿರುತ್ತದೆ. ಹಾಗಾಗಿ ಇದನ್ನು ಆಚರಿಸುವಾಗ ಶಾಸ್ತ್ರಕ್ಕನುಗುಣವಾಗಿಯೇ, ಯಥಾ ಕಾಲದಲ್ಲಿಯೇ, ಯಥಾ ರೀತಿಯಲ್ಲಿಯೇ ಆಚರಿಸಬೇಕೇ ವಿನ: ಬೇರೆ ಮಾರ್ಗವೇ ಇಲ್ಲ. ಹಾಗೊಂದು ವೇಳೆ ನಮಗೆ ತೋಚಿದಂತಹ ರೀತಿಗಳಲ್ಲಿ ಆಚರಿಸಿದರೆ, ಕರ್ಮದ ಅಶಾಸ್ತ್ರೀಯ ಆಚರಣೆಗಾಗಿ ದೋಷದ ಪಾಪ ಫಲವು ಸಂಗ್ರಹವಾಗುತ್ತದೆಯೇ ಹೊರತು, ಬೇರೇನೂ ಲಾಭವಿಲ್ಲ.

4. ಉದಕಶಾಂತಿ ಪಾರಾಯಣ ಅನಿವಾರ್ಯವೇ ?

ಆಪಸ್ತಂಬ ಮಹರ್ಷಿಗಳ ಸೂತ್ರವನ್ನು ಅನುಸರಿಸುವವರು, ಯಾವುದೇ ಸಂಸ್ಕಾರ ಕರ್ಮಗಳಲ್ಲಿ ಉದಕಶಾಂತಿಯನ್ನು ಆಚರಿಸಲೇಬೇಕೆಂಬ ಅನಿವಾರ್ಯತೆಯು ಇಲ್ಲ । ಏಕೆಂದರೆ, ಮಹರ್ಷಿಗಳು ತಮ್ಮ ಗೃಹ್ಯಸೂತ್ರದಲ್ಲಿ ಉದಕಶಾಂತಿಯ ಪ್ರಸ್ತಾಪವನ್ನು ಮಾಡಿಲ್ಲವಾದ್ದರಿಂದ । ಬೋಧಾಯನ ಋಷಿಗಳು ತಮ್ಮ ಗೃಹ್ಯಸೂತ್ರದಲ್ಲಿ ಉದಕಶಾಂತಿಯ ಕ್ರಮವನ್ನು ಉಲ್ಲೇಖಿಸಿದ್ದಾರೆ । ಆದರೆ ಉದಕಶಾಂತಿಯಲ್ಲಿ ಬರುವ ವಿಷಯ, ಯಜುರ್ವೇದದ ಆಯ್ದ ಮಂತ್ರಭಾಗಗಳ ಪಾರಾಯಣ, ಹಾಗಾಗಿ ಮಂತ್ರಪಾರಾಯಣವೆಂಬುದು ಎಲ್ಲಾ ಕರ್ಮಗಳಲ್ಲೂ ಪ್ರಸ್ತುತವೇ, ಆ ವಿಷಯದಲ್ಲಿ ಸಂದೇಹವಿಲ್ಲ । ಆದರೂ ಆಪಸ್ತಂಬ ಸೂತ್ರವನ್ನು ಅನುಸರಿಸುವವರು ತಾವು ಮಾಡುವ ಯಾವುದೇ ಸಂಸ್ಕಾರಕರ್ಮಗಳಲ್ಲಿ ಉದಕಶಾಂತಿಯನ್ನು (ಅದೇ ಕ್ರಮದಲ್ಲಿ) ಮಾಡದಿದ್ದರೂ ಆ ಉದ್ದೇಶಿತ ಸಂಸ್ಕಾರಕರ್ಮವು ದೋಷವಾಗಲೀ, ಭ್ರಷ್ಟವಾದದ್ದಾಗಲೀ ಆಗುವುದಿಲ್ಲವೆಂಬುದು ಅತ್ಯಂತ ಸ್ಪಷ್ಟ ॥

5. ಬ್ರಹ್ಮಚಾರಿಗಳಿಗೆ ಗೋಪೀಚಂದನ ಧಾರಣೆ ಕಡ್ಡಾಯವೇ ?

ಕಪರ್ದಿಮುನಿಗಳ ಉಪನಯನ ಪ್ರಕರಣದ ಕಾರಿಕೆಯಲ್ಲಾಗಲೀ, ಅದಕ್ಕಿಂತ ಪ್ರಮುಖವಾಗಿ ಆಪಸ್ತಂಬಗೃಹ್ಯಸೂತ್ರದ ಉಪನಯನದ ಪ್ರಕರಣದಲ್ಲಿಯಾಗಲೀ ಹಾಗೂ ಬ್ರಹ್ಮಚರ್ಯದಲ್ಲಿ ಉಪಯೋಗಿಸಿದ ವಸ್ತುಗಳನ್ನು ಬಿಡುವ ಸಂಸ್ಕಾರವಾದ ಸಮಾವರ್ತನೆಯಲ್ಲೂ ಇದರ ಉಲ್ಲೇಖವಿಲ್ಲ. ಹಾಗಾಗಿ ಉಪನಯನದ ಸಮಯದಲ್ಲಿ ಗೋಪೀಚಂದನದ ದಾನವಾಗಲೀ ಮತ್ತು ಬ್ರಹ್ಮಚಾರಿಗಳು ಅದನ್ನೇ ಹಣೆಯಲ್ಲಿ ಧರಿಸಬೇಕೆಂಬ ಕಡ್ಡಾಯ ನಿಯಮದ ವಿಚಾರಕ್ಕಾಗಲೀ ಯಾವುದೇ ದೃಢತೆಯು ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲ ಹಿನ್ನಲೆಯಲ್ಲಿ ಭಸ್ಮಧಾರಣೆ ಮಾಡುವ ಸಂಪ್ರದಾಯದ ಮನೆಯ ಬ್ರಹ್ಮಚಾರಿಗಳೂ ಸಹ ಉಪನಯನದ ದಿನದಿಂದಲೂ

ಭಸ್ಮಧಾರಣೆಯನ್ನು ಮಾಡುವುದು ಶ್ರೇಯಸ್ಕರವೇ ಹೊರತು ಅಶಾಸ್ತ್ರೀಯವಲ್ಲ. ಹಾಗೆಂಯೇ ಉಪನಯನದ ಸಮಯದಲ್ಲಿ ಗೋಪೀಚಂದನವನ್ನು ದಾನಕೊಡಿಸುವುದರಲ್ಲೂ ಯಾವ ಶಾಸ್ತ್ರೀಯತೆಯನ್ನು ಆಚರಿಸಿದಂತಾಗಲೀ ಆಗುವುದಿಲ್ಲ. ಅಥವಾ ಗೋಪೀಚಂದನವನ್ನು ದಾನ ಕೊಡಿಸದಿದ್ದರೂ, ಧರಿಸದಿದ್ದರೂ ಯಾವ ಶಾಸ್ತ್ರೀಯ ಲೋಪವೂ ಇರುವುದಿಲ್ಲ. ಏಕೆಂದರೆ ಉಪನಯನವೆಂಬ ಸಂಸ್ಕಾರಕ್ಕೆ ಗೃಹ್ಯಸೂತ್ರವೇ ಆಧಾರಗ್ರಂಥ. ಆಪಸ್ತಂಬ ಗೃಹ್ಯಸೂತ್ರವನ್ನು ಅನುಸರಿಸುವವರು, ಅದರಲ್ಲಿ ಉಪನಯನಕ್ಕೆ ಸಂಬಂಧಿಸಿದ ಸೂತ್ರಗಳಲ್ಲಿ ಇರುವ ವಿಷಯವನ್ನು ಅನುಸರಿಸುವುದೇ ಸರಿಯಾದ ಕ್ರಮ.

6. ಉಪನಯನದಲ್ಲಿ ವಟುವಿಗೆ ಕೊಟ್ಟ, ಕೃಷ್ಣಾಜಿನ –ಮೇಖಲೆ ಹಾಗೂ ದಂಡಗಳನ್ನು ಅರಳೀ ಮರದಲ್ಲಿ ಇಡುವುದು ಸರಿಯೇ ?

ವಟುವು ಗ್ರಹಣ ಮಾಡುವ ದಂಡದ (ಕೋಲು) ವಿಷಯದಲ್ಲಿಯೂ ಬಹಳ ತಪ್ಪಾದ ನಡವಳಿಕೆಗಳನ್ನು ಅನುಸರಿಸುತ್ತಿರುವುದನ್ನು ನಾವುಗಳು ಕಾಣುತ್ತಿದ್ದೇವೆ. ಅದೇನೆಂದರೆ, ಮೇಖಲೆ(ನೊಜೆಹುಲ್ಲಿನ ಉಡುದಾರ) – ಕೃಷ್ಣಾಜಿನ – ದಂಡ – ಯಜ್ಞೋಪವೀತ – ಶಿಖೆ , ಇವಿಷ್ಟೂ ಬ್ರಹ್ಮಚರ್ಯಾಶ್ರಮದ ಗುರುತುಗಳು. ಸಾವಿತ್ರೀ(ಗಾಯತ್ರೀ) ಮಂತ್ರದ ಉಪದೇಶವಾದ ಕ್ಷಣದಿಂದ ಆ ವಟುವಿಗೆ ಅಧಿಕೃತವಾಗಿ, ಮಂತ್ರೋಕ್ತವಾಗಿ ಪ್ರಾಪ್ತವಾಗುವ ಇವಿಷ್ಟೂ ಸಹ ಆ ವಟುವು ಸಮಾವರ್ತನೆಯನ್ನು(ಸ್ನಾತಕ) ಮಾಡಿಕೊಳ್ಳುವವರೆಗೂ ಕಡ್ಡಾಯವಾಗಿ ಅವನ ಬಳಿಯೇ ಇರತಕ್ಕವುಗಳು. ಆದರೆ ಪ್ರತಿ ವರ್ಷದ ಉಪಾಕರ್ಮದಂದು ಹೊಸದಾದ ಇವಿಷ್ಟನ್ನೂ ಮಂತ್ರಪೂರ್ವಕವಾಗಿ ಸ್ವೀಕರಿಸಿ, ನಂತರ ತನ್ನ ಬಳಿಯಿರುವಂತಹ ಹಿಂದಿನವರ್ಷದ ಅವುಗಳನ್ನು ನೀರಿನಲ್ಲಿ ಬಿಡಬೇಕು (ಸಮಾವರ್ತನೆಯವರೆಗೂ ಹೀಗೆಯೇ). ಈ ಕ್ರಮ ಶಾಸ್ತ್ರೀಯವಾದದ್ದು,

ಗೃಹ್ಯಸೂತ್ರದಲ್ಲಿರುವುದು. ಆದರೆ ನಾವು ಮಾಡುತ್ತಿರುವುದೇನು? ಯಜ್ಞೋಪವೀತವನ್ನು ಬಿಟ್ಟು, ಉಳಿದೆಲ್ಲವನ್ನೂ ಉಪನಯನವಾದ ಸ್ವಲ್ಪ ಸಮಯದಲ್ಲಿಯೇ ತೆಗೆದುಬಿಡುತ್ತೇವೆ. ಅದರಲ್ಲಿಯೂ ದಂಡವನ್ನು ಅರಳಿಮರದಲ್ಲಿ ಇಟ್ಟುಬರುತ್ತೇವೆ ಹಾಗೆ ಇಟ್ಟುಬರುವುದೇ ಶಾಸ್ತ್ರವೆಂದು ತಿಳಿದಿದ್ದೇವೆ !. ಆದರೆ ಆ ಬ್ರಹಚಾರಿಯು ದಂಡವನ್ನು ಹೇಗೆ ಉಪಯೋಗಿಸಬೇಕೆಂದರೆ – ಮನೆಯಲ್ಲಿರುವ ದೇವರ ಕೋಣೆಯಲ್ಲಿ ಅದನ್ನು ಇಟ್ಟಿರಬೇಕು, ಸಂಧ್ಯಾವಂದನೆಯಾದ ನಂತರ ಆ ದಂಡವನ್ನು ಹಿಡಿದುಕೊಂಡು ದೇವರಿಗೆ, ನಂತರ ತಂದೆತಾಯಿಯರಿಗೆ ೪ ಅಥವ ೮ ನಮಸ್ಕಾರಗಳನ್ನು(ದಂಡನಮಸ್ಕಾರ) ಮಾಡಿ, ನಂತರ ದಂಡವನ್ನು ಹಿಡಿದುಕೊಂಡು, ಎರಡೇ ಮನೆಗಳಲ್ಲಾಗಲೀ ಹೋಗಿ ಭಿಕ್ಷೆ ಬೇಡಿ, ವಾಪಸ್ಸುಬಂದು, ಸಂಗ್ರಹವಾದ ಪದಾರ್ಥವನ್ನು ತಾಯಿಗೆ ಕೊಟ್ಟು, ದಂಡವನ್ನು ಪುನ: ದೇವರಕೋಣೆಯಲ್ಲಿ ಇಡಬೇಕು, ಇದು ಸರಿಯಾದ ವಿಧಾನ.

ಹೀಗೆಯೂ ಒಮ್ಮೆ ಯೋಚಿಸೋಣ – ಭಿಕ್ಷೆ ಬೇಡುವುದನ್ನು ಬಿಡಿ (ಇಂದಿನ ಮಕ್ಕಳಿಗೆ, ಪೋಷಕರಿಗೆ ಅದು ಕಲ್ಪನೆಗೂ ಮೀರಿದ ಅಪಮಾನ!!), ನಮಸ್ಕಾರವನ್ನಾದರೂ ಮಾಡಬಹುದು(ಈ ಕ್ರಿಯೆಯು, ಮಗ ಹಾಗೂ ತಂದೆತಾಯಿಯರಿಗೆ ಅದೆಂತಹ ಅಮೂಲ್ಯವಾದ ಬೆಸುಗೆಯನ್ನು ತರುತ್ತದೆ ಗೊತ್ತೇ??!!) ಅಲ್ಲದೇ ಇದಾವುದನ್ನೂ ಮಾಡದೆಯೂ ಸಹ ದಂಡವನ್ನು ಅದರ ಪಾಡಿಗೆ ಅದನ್ನು ದೇವರ ಕೋಣೆಯಲ್ಲಿ ಇಡುವುದಕ್ಕಾದರೂ ಇರುವ ತೊಂದರೆ ಏನು? ತಾಂತ್ರಿಕ ದೃಷ್ಟಿಯಿಂದ ನೋಡಿದರೂ ಯಾವ ಕಷ್ಟವೂ ಇಲ್ಲ, ಏಕೆಂದರೆ ಅದಕ್ಕೆ ಬೇಕಾದ ಜಾಗ ಕೇವಲ ೨ ಇಂಚುಗಳು ಮಾತ್ರ !! ಹೀಗೆ ಮಾಡುವುದನ್ನು ಬಿಟ್ಟು, ಅರಳೀಮರಕ್ಕೆ ಇಡುವುದೆಂದರೇನು ? ಆ ಮರಕ್ಕೂ ಈ ದಂಡಕ್ಕೂ ಯಾವುದೇ ಸಂಬಂಧವಿಲ್ಲವೆಂಬುದನ್ನೂ ಪ್ರತಿಯೊಬ್ಬರೂ ತಿಳಿಯಬೇಕು. ಮಾತ್ರವಲ್ಲದೇ, ಇಡುವುದರಿಂದಲೇ ದೋಷವೆಂಬುದನ್ನೂ ನಾವು ತಿಳಿಯಬೇಕಾಗಿದೆ. ಏಕೆಂದರೆ, ಬ್ರಹ್ಮಚರ್ಯಾಶ್ರಮದ ಗುರುತುಗಳಾದ, ಮುಂತ್ರೋಕ್ತವಾಗಿ

ಸ್ವೀಕರಿಸಲ್ಪಟ್ಟಂತಹ ಇವುಗಳನ್ನು ನಮಗೆ ತೋಚಿದ ಕಡೆ ಇಡುವುದಕ್ಕಾಗಲೀ ತ್ಯಾಗ ಮಾಡುವುದಕ್ಕಾಗಲೀ (ಬಿಟ್ಟು ಬಿಡುವುದಕಾಗಲೀ) ಅವಕಾಶವಿಲ್ಲ. ಅವುಗಳನ್ನು ಸ್ನಾತಕದವರೆಗೂ ಇಟ್ಟುಕೊಳ್ಳುವುದಕ್ಕಾಗಿಯೇ ಕೊಡುವುದಾದಾಗ, ಬಿಡುವ ಪ್ರಶ್ನೆ ಎಲ್ಲಿಂದ ಬರುತ್ತದೆ ?? ಹೀಗಿದ್ದೂ ಅವುಗಳನ್ನು ಬಿಟ್ಟರೆ, ಅದನ್ನು ದೊಡ್ಡ ದೋಷವೆಂದೇ ಶಾಸ್ತ್ರಗಳು ಪರಿಗಣಿಸುತ್ತವೆ ಅಲ್ಲದೇ ಈ ರೀತಿಯ ನಡವಳಿಕೆಗಳು ನಮ್ಮ ಜೀವನದಲ್ಲಿ ಬರುವ ಅನೇಕ ತೊಂದರೆ, ಹಿಂಸೆಗಳಿಗೆ ಆಂತರಿಕ ಕಾರಣಗಳಾಗಿರುತ್ತವೆ ಎಂಬುದನ್ನೂ ನಾವುಗಳು ಮರೆಯಬಾರದು.

7. ಉಪನಯನದಲ್ಲಿ, ವಟುವು ಭಿಕ್ಷೆಬೇಡುವ ರೀತಿಯಲ್ಲಿ ಶಾಸ್ತ್ರೀಯತೆ ಏನಿದೆ ?

ಖಾಲಿಪಾತ್ರೆಯನ್ನು ಹಿಡಿದು ಮೊದಲು ವಟುವು ತಾಯಿಯಲ್ಲಿ ಭಿಕ್ಷೆ ಕೇಳಬೇಕು, ತಾಯಿಯು ಅಕ್ಕಿಯನ್ನು ಭಿಕ್ಷೆಯಾಗಿ ಕೊಡಬೇಕು, ಹೀಗೆ ಅತ್ತೆ, ಅಕ್ಕ, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರ ಹತ್ತಿರ ಭಿಕ್ಷೆ ಕೇಳಿ ತೆಗೆದುಕೊಳ್ಳಬೇಕು. ಭಿಕ್ಷೆಯನ್ನು ಪ್ರತಿಯೊಬ್ಬರಲ್ಲಿಯೂ ೩ ಬಾರಿ ಕೇಳಬೇಕು. ಈ ರೀತಿಯ ಕ್ರಮವನ್ನು ನಾವುಗಳು ನೋಡುತ್ತಿದ್ದೇವೆ, ಮಾಡುತ್ತಿದ್ದೇವೆಯಷ್ಟೆ!!.

ಆದರೆ ಈ ಕ್ರಮವು ಯಾವುದೇ ದೃಷ್ಟಿಕೋನದಿಂದ ವಿವೇಚಿಸಿದರೂ ಸರಿಯೆಂದು ತೋರುವುದಿಲ್ಲವೆಂಬುದಂತೂ ವಾಸ್ತವ. ಹೇಗೆಂದು ಈಗ ನಾವು ನೋಡೋಣ – ಬ್ರಹ್ಮಚಾರಿಯ ಆಶ್ರಮ ಕರ್ತವ್ಯಗಳಲ್ಲಿ, ಪ್ರತಿದಿನವೂ ನಾಲ್ಕಾರು ಮನೆಗಳಲ್ಲಿ ಭಿಕ್ಷೆಯನ್ನು ಬೇಡುವುದೂ ಒಂದು ಕರ್ತವ್ಯ. ಹೀಗೆ ದೊರೆತಂತಹ ಆಹಾರವನ್ನು ತನ್ನ ಆಶ್ರಯದಾತರಿಗೆ ಕೊಟ್ಟು, ಪುನ: ಅವರು ಕೊಟ್ಟಷ್ಟು ಆಹಾರವನ್ನು ಮಾತ್ರ ಸೇವಿಸಿ, ತನ್ನ ಮಿಕ್ಕ ಕರ್ತವ್ಯಗಳನ್ನು ಮಾಡುತ್ತಲಿರುವುದು ಇವನ ದಿನಚರಿ. ಅದುಬಿಟ್ಟು, ಉಪನಯನವಾದ ತಕ್ಷಣವೇ ಅಲ್ಲಿದ್ದ ಅಷ್ಟೂ ಹೆಂಗಸರೇ ಸ್ವತ: ಇವನ ಬಳಿಬಂದು,! ಇವನ ಮನೆಯ ಅಕ್ಕಿಯನ್ನೇ ನಮ್ಮ ಮನೆಯ, ನಾವೇ ತಂದಿರುವ ಅಕ್ಕಿಯೆಂದು ಭಾವಿಸಿಕೊಂಡು,! ಒಂದೇ ದಿನವೇ ಸಂಖ್ಯೆಯ ಮಿತಿಯೇ

ಇಲ್ಲದಂತೆ, ಬಂದವರೆಲ್ಲಾ ಭಿಕ್ಷೆಯನ್ನು ಕೊಡುವುದೆಂದರೆ, ಪಾಪ ಆ ವಟು ಕೆಲವೇ ಗಂಟೆಗಳ ಹಿಂದಷ್ಟೇ ಹೇಳಿಸಿಕೊಂಡಿರುವ ಗೋತ್ರಪ್ರವರವನ್ನೇ ಹೇಳಿ ನಮಸ್ಕರಿಸಬೇಕು ಎಂಬ ಆಗ್ರಹದೊಂದಿಗೆ, ಅದರಲ್ಲಿಯೂ ಒಂದು ಪ್ರತಿಷ್ಠೆ, ಗತ್ತು, ತೋರಿಕೆಯ ರೀತಿ ಬೇರೆ! (ಯಾವ ವಸ್ತುವನ್ನೇ ಆಗಲಿ ಇನ್ನೊಬ್ಬರಿಗೆ ಕೊಡುವಾಗ ಆ ವಸ್ತು ನಮ್ಮದಾಗಿರಬೇಕು ಮತ್ತು ವಿನಯ ಭಾವವಿರಬೇಕು ಎಂಬುದು ಶಾಸ್ತ್ರಗಳ ಆದೇಶ) ಹಾಗಾಗಿ ಈ ಯಾವ ನಡವಳಿಕೆಗಳೂ, ಭಿಕ್ಷೆಯನ್ನು ಯಾಚಿಸುವ ರೀತಿಯನ್ನಾಗಲೀ ಮತ್ತು ಭಿಕ್ಷೆಯನ್ನು ಕೊಟ್ಟಂತಹ ರೀತಿಯನ್ನಾಗಲೀ ಸಮರ್ಥಿಸುವುದಿಲ್ಲ.

ಇಷ್ಟಕ್ಕೂ ಸೂತ್ರಕಾರರು ಈ ರೀತಿ ಹೇಳಿಯೇ ಇಲ್ಲ, ಅವರು ಹೇಳಿರುವುದು – ಭಿಕ್ಷಾಟನೆ ಎಂಬುದು ಬ್ರಹ್ಮಚಾರಿಯ ನಿತ್ಯಕರ್ತವ್ಯಗಳಲ್ಲಿ ಒಂದಾದ್ದರಿಂದ, ಪ್ರತಿದಿನವೂ ನಿಯಮಿತವಾಗಿ ಕೆಲವೇ ಮನೆಗಳಲ್ಲಿ ತಾನೇ ಸ್ವತಃ ಹೋಗಿ ಬೇಡಬೇಕು, ಇದರಿಂದಾಗಿ ಅವನಿಗೆ ಅನ್ನದ ಬೆಲೆ, ಕಷ್ಟದ ಪರಿಚಯ ಆಗಬೇಕು, ಈ ನಡವಳಿಕೆ ಅವನ ಮುಂದಿನ ಜೀವನಕ್ಕೆ ಅನೇಕ ರೀತಿಯಲ್ಲಿ ಪಾಠವಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಕರ್ಮಭಾಗದ ಪಿತೃಗಳು (ಋಷಿಗಳು) ಈ ನಿಯಮವನ್ನು ವಿಧಿಸಿದ್ದಾರೆಯೇ ಹೊರತು, ನಿತ್ಯವೂ ಮಾಡಲಾಗುವುದಿಲ್ಲವಲ್ಲಾ, ಹಾಗಾಗಿ ಒಂದೇದಿನ ಅದರಲ್ಲಿಯೂ ಉಪನಯನವಾದ ದಿನವೇ ಸಿಕ್ಕಿದಷ್ಟು ಭಿಕ್ಷೆ ಹಾಕಿಸಿಬಿಡೋಣ ಎಂದು ಅವರೆಲ್ಲಿಯೂ ಆದೇಶಿಸಿಲ್ಲ, ಹಾಗೆ ಮಾಡುವುದಾಗಿದ್ದರೆ, ಸಂಧ್ಯಾವಂದನೆಯನ್ನೂ ಮೊದಲ ದಿನ ಮಾತ್ರ ಮಾಡಿ, ನಂತರ ಬಿಡಿ ಎಂದೂ ಹೇಳುತ್ತಿದ್ದರು!! ಹಾಗಾಗಿ ಈಗ ನಾವು ಸರ್ವತ್ರ ಉಪನಯನದಲ್ಲಿ ಆಚರಿಸುತ್ತಿರುವ **–ಭಿಕ್ಷೆ–** ಎಂಬ ಕೆಲಸವು ಆ ಹೆಸರಿಗೇ ವಿರುದ್ಧವಾದ ಆಚರಣೆಯಾಗಿದೆಯಲ್ಲದೇ, ಸಮಯದ ವ್ಯರ್ಥದ ಜೊತೆಗೇ ವಟುವಿನ ವಿಪರೀತ ಆಯಾಸಕ್ಕೂ ಕಾರಣವಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ, ಸತ್ವರಹಿತವಾದ ಈ ನಡವಳಿಕೆಯನ್ನು ಸರಿಪಡಿಸಿ ಕೊಳ್ಳಬೇಕಿರುವುದು ಅವಶ್ಯಕವಾಗಿದೆ.

8. ಊಟದಲ್ಲಿ ಯಾವರೀತಿ ಬಡಿಸಬೇಕೆಂಬ ಹಾಗೂ ಆಗ ಅನುಸರಿಸಬೇಕಾದ ನಡವಳಿಕೆಯ ವಿಚಾರ

ಪುರಾಣಾದಿಗಳಲ್ಲಿಯೇ ಆಗಲೀ ಅಥವಾ ಯಾವುದೇ ಶಾಸ್ತ್ರೀಯ ಗ್ರಂಥಗಳಲ್ಲಿಯೇ ಆಗಲೀ ಊಟದಲ್ಲಿ ಎಲೆ ಅಥವ ಯಾವುದೇ ಭೋಜನ ಪಾತ್ರೆಯಲ್ಲಿ ಬಡಿಸುವ ಆಹಾರಗಳ ಬಗ್ಗೆಯಾಗಲೀ ಹಾಗೂ ಅವುಗಳ ನಿರ್ದಿಷ್ಟ ಜಾಗಗಳ ಕುರಿತಾಗಲೀ ಯಾವುದೇ ಅಧಿಕೃತ ಉಲ್ಲೇಖಗಳಾಗಲೀ ಇಲ್ಲಾ.

ಆದರೆ ಗರುಡ ಪುರಾಣದಲ್ಲಿ – ಊಟದ ಪಾತ್ರೆಯು ಭೂಸ್ಪರ್ಶವಾಗಿಯೇ ಇರಬೇಕು ಇಲ್ಲದಿದ್ದರೆ ವಾಯುವಿನಲ್ಲಿರುವ, ಅನೇಕ ಕೆಟ್ಟ ಆಲೋಚನೆಗಳಿಗೆ ಕಾರಣವಾಗಬಲ್ಲಂತಹ ಅನೇಕ ಜೀವಿಗಳು ಆಹಾರಕ್ಕೆ ಸೇರಿ, ಆಹಾರವನ್ನು ಸತ್ವ ರಹಿತವಾಗಿ ಮಾಡುತ್ತವೆ ಎಂತಲೂ, ಮತ್ತು ಭಗವದ್ಗೀತೆ, ಶರೀರಶಾಸ್ತ್ರ ಹಾಗೂ ಯೋಗಶಾಸ್ತ್ರ ಗ್ರಂಥಗಳಲ್ಲಿ – ಆಹಾರ ಪದಾರ್ಥಗಳಲ್ಲಿರುವ ಸಾತ್ವಿಕ, ರಾಜಸಿಕ, ತಾಮಸಿಕ ಗುಣಗಳ ಆಧಾರದ ಮೇಲೆ ಅವುಗಳ ನಿರಂತರ ಬಳಸುವಿಕೆಯಲ್ಲಿ ನಿಯಮ ಮಾಡಿದ್ದಾರೆ. ಹಾಗೆಯೇ ಆಹಾರವನ್ನು ತಯಾರಿಸುವ ಸಮಯದಲ್ಲಿ ಮಾಡುವ ಕುಟ್ಟುವುದು, ಪುಡಿಮಾಡುವುದು, ಕತ್ತರಿಸುವುದು ಮುಂತಾದ ದೋಷಯುಕ್ತ ಕ್ರಿಯೆಗಳಿಂದ ಉಂಟಾಗುವ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ವೈಶ್ವದೇವವನ್ನು ಶಾಸ್ತ್ರಗ್ರಂಥಗಳು ಆದೇಶಿಸಿವೆಯೇ ಹೊರತು ಉಪ್ಪನ್ನು ಇಲ್ಲಿಯೇ ಹಾಕಬೇಕು– ಉಪ್ಪಿನಕಾಯಿಯನ್ನು ಇಲ್ಲೇ ಹಾಕಬೇಕು– ಪಲ್ಯಗಳನ್ನು ಇಲ್ಲೇ ಹಾಕಬೇಕು !!!!! ಈ ರೀತಿಯ ಯಾವ ವಿಷಯಗಳ ಬಗ್ಗೆಯೂ ಖಂಡಿತವಾಗಿ ಹೇಳಿಲ್ಲ, ಅವುಗಳ ಅವಶ್ಯಕತೆಯೂ ಇಲ್ಲವೇ ಇಲ್ಲ! ಏಕೆಂದರೆ ಅದರಲ್ಲಿ ಯಾವ ಧರ್ಮವೂ ಇಲ್ಲ.

ಆದರೆ ಇಂದು ಸಮಾಜದಲ್ಲಿ ಏನಾಗಿದೆ ?? ಋಷಿವರ್ಯರು, ಯೋಗಿಗಳು ವೈಜ್ಞಾನಿಕವಾಗಿ, ಧರ್ಮಯುಕ್ತವಾಗಿ, ಅಲೌಕಿಕ ಜ್ಞಾನ ವಿಶೇಷದಿಂದ, ಮನುಷ್ಯರ ಸಕಲ ಕಲ್ಯಾಣಕ್ಕಾಗಿ ಯೋಗ್ಯವಾದ ಆಹಾರ ಜೀವನಶೈಲಿಯನ್ನು ಮತ್ತು ಆಹಾರ ತಯಾರಿಸುವ ವಿಧಾನವನ್ನು ಮತ್ತು ತಯಾರಿಸುವವರ ಮನ:ಸ್ಥಿತಿಯು ಹೇಗಿರಬೇಕೆಂಬುದನ್ನು ಹಾಗೂ ಊಟ ಮಾಡುವ ಸಮಯದಲ್ಲಿನ ನಡವಳಿಕೆಗಳನ್ನು, ಊಟ ಮಾಡುವ ಸಮಯವನ್ನು ಅಲ್ಲದೇ ಕೆಟ್ಟ ವಸ್ತುಗಳಿಂದ, ಕೆಟ್ಟ ಮನಸ್ಥಿತಿಯಿಂದ, ತಯಾರಾದ ಆಹಾರದ ಸೇವನೆಯಿಂದ ಮನಸ್ಸಿನ ಮೇಲೆ ಆಗುವ ಪರಿಣಾಮಗಳ, ಮನಸ್ಸು ಯೋಚನೆ ಮಾಡುವ ಶೈಲಿಯ ಬಗ್ಗೆ ಉಪದೇಶಿಸಿದ್ದರೆ, ಜನರು ಅಂದರೆ ನಾವುಗಳು ಮಾತ್ರ ಈ ನಿಯಮಗಳ ಬಗ್ಗೆ ಸ್ವಲ್ಪವೂ ಚಿಂತನೆ ನಡೆಸದೇ ಆಲೋಚಿಸದೇ, ಯಾವ ಪುಣ್ಯ ಪುರುಷಾರ್ಥವೂ ಇಲ್ಲದ ಬಡಿಸುವ ಜಾಗದ!! ವಿಚಾರದಲ್ಲಿ ಮಹಾನ್ ಹೋರಾಟವನ್ನು, ಮಹಾನ್ ನಿಷ್ಠೆಯನ್ನು, ದೊಡ್ಡದಾದ ಒಗ್ಗಟ್ಟನ್ನು ಆಯೋಜಿಸುತ್ತೇವೆ, ಇದು ಎಂತಹ ವಿಪರ್ಯಾಸ ಓದುಗರೇ ?

ಹಾಗಾಗಿ ಊಟ ಮಾಡುವ ಪಾತ್ರೆಯ ವಿಸ್ತೀರ್ಣದ ಆಧಾರದಲ್ಲಿ ಮತ್ತು ಊಟ ಮಾಡುವವರಿಗೆ ಅನುಕೂಲವಾಗುವ ರೀತಿಯಲ್ಲಿ ಯಾವುದೇ ಆಹಾರ ಪದಾರ್ಥಗಳನ್ನು ಯಾವ ಜಾಗದಲ್ಲಿಯೇ ಬಡಿಸಿದರೂ ಯಾವ ತಪ್ಪು-ಮಹಾಪರಾಧವೂ ಇಲ್ಲ. ಹಾಗಾಗಿ ನಮ್ಮ ಬಡಿಸುವ ಕ್ರಮವೇ ಸರಿ, ನಿಮ್ಮ ಕ್ರಮ ಸರ್ವಥಾ ತಪ್ಪು ಎನ್ನುವಂತಹ ಒಣ ಹಾಗೂ ವ್ಯರ್ಥ ವಾದಗಳನ್ನು ಬಿಟ್ಟು, ನಮ್ಮ ಕರ್ಮಪಿತೃಗಳಾದ ಋಷಿಗಳು ಆಹಾರದ ರಚನೆಯ ಮತ್ತು ಸೇವನೆಯ ವಿಷಯದಲ್ಲಿ ವಾತ್ಸಲ್ಯಪೂರಿತರಾಗಿ ನಮಗೆ ಉಪದೇಶಿಸಿರುವ ರೀತಿನೀತಿಗಳನ್ನು ಅನುಸರಿಸುವ ಬಗೆಗೆ ಶ್ರದ್ಧೆಯಿಂದ ಗಂಭೀರವಾಗಿ ಯೋಚಿಸುವುದನ್ನು ಕಲಿಯೋಣ.

9. ಮಹಾತ್ಮರ ಮೂಲ ವಿಚಿತ್ರವಾದದ್ದು (ಸುಭಾಷಿತ)

ಅಹೋ ಮೇಷಾಂಡಮಿಂದ್ರೋ ಮಲಿನ ಉಡುಪತಿರ್ಮಾಧವೋ ನಂದ ಸೂನುಃ ।
ವೇಶ್ಯಾಪುತ್ರೋ ವಸಿಷ್ಠಃ ಸಲವಣ ಉದಧಿಃ ಪಾವಕಃ ಸರ್ವಭಕ್ಷೀಃ ।
ವ್ಯಾಸೋಮತಸ್ಯ ತನುಜಃ ಪಶುಪತಿನಟನಂ ಪಾಂಡವಾಶ್ಚಾನ್ಯ ಜಾತಾಃ ।
ಏವಂ ಚಿಂತ್ಯೈಕ್ಯೈಕ ಕಥಯಾ ಕಸ್ಯ ದೋಷೋ ನ ಚಾಸ್ತಿ ॥

ಎಲ್ಲಾ ದೊಡ್ಡವ್ಯಕ್ತಿಗಳಲ್ಲಿಯೂ ಒಂದೊಂದು ದೋಷ ಇದ್ದೇ ಇರುತ್ತದೆ । ಆ ದೋಷವನ್ನು ಎಣಿಸದೇ ಗುಣ, ಸಾಧನೆಗಳನ್ನು ಪರಿಗಣಿಸಬೇಕು । ಏಕೆಂದರೆ – ದೇವರಾಜ ಇಂದ್ರನಿಗೆ ಗೌತಮಋಷಿಗಳ ಶಾಪದಿಂದ ವೃಷಣವು ಬಿದ್ದುಹೋಗಿ, ಕುರಿಯ ವೃಷಣ(ಅಂಡ)ವನ್ನು ಜೋಡಿಸಲಾಗಿದೆ! – ಚಂದ್ರನಿಗೆ ಮಾವನಾದ ದಕ್ಷನ ಶಾಪದಿಂದ ಕ್ಷೀಣತ್ವವು ಉಂಟಾಗಿದೆ! – ಕೃಷ್ಣಪರಮಾತ್ಮನು ನಂದಗೋಪನ ಮಗನಾದನು! । ವಸಿಷ್ಠ ಮಹರ್ಷಿಗಳು ಊರ್ವಶಿ ಅಪ್ಸರೆಯ ಮಗ! – ಸಮುದ್ರವು ಅಗಸ್ತ್ಯರ ಮೂತ್ರವಾಯಿತು! – ಅಗ್ನಿಯು ಸರ್ವಭಕ್ಷಕನಾದನು! । ವ್ಯಾಸರು ಬೆಸ್ತಸ್ತ್ರೀ ಮತ್ಯಗಂಧಿಯ ಮಗ! – ಶಿವನು ಲೋಕದ ಒಡೆಯನಾದರೂ ನಟನಾದನು! – ಪಾಂಡವರೆಲ್ಲರೂ ಬೇರೆಯವರಿಂದ ಹುಟ್ಟಿದವರಾದರು! । ಈ ರೀತಿ ಯೋಚಿಸಿದಾಗ ಮಹಾತ್ಮರ ಮೂಲ ವಿಚಿತ್ರವಾಗಿದ್ದು, ಸಾಮಾನ್ಯಜನರಿಗೆ ನಿಂದಾಸ್ಪದವಾಗಿದೆ ॥ (ಆದರೆ, ಇವರೆಲ್ಲರೂ ಲೋಕದ ರಕ್ಷಣೆಗೆ ಮತ್ತು ನಿತ್ಯ ಪರಮಾತ್ಮಸ್ವರೂಪವನ್ನು ತಿಳಿಯುವುದಕ್ಕೆ ಸಾಧನವಾದ ಧರ್ಮದ ರಕ್ಷಣೆಗೆ ಅವತರಿಸಿದ್ದಾರಾದ್ದರಿಂದ ಅವರ ಜನ್ಮ ಮತ್ತು ಅವರ ನಡವಳಿಕೆಗಳು ವ್ಯವಹಾರಾತೀತವಾಗಿರುವುದರಿಂದ ಅಜ್ಞಾನಿಗಳಾದ ನಮಗೆ, ನಮ್ಮ ಅಜ್ಞಾನದಿಂದ ಅವುಗಳು ದೋಷಯುಕ್ತವಾದಂತೆ ಕಂಡುಬರುತ್ತವೆ.)

10. ತೀರ್ಥಯಾತ್ರೆಯ ಕ್ರಮ (ಅಧ್ಯಾತ್ಮರಾಮಾಯಣ)

ಸೇತುಬಂಧೇ ನರಃ ಸ್ನಾತ್ವಾ ದೃಷ್ಟ್ವಾ ರಾಮೇಶ್ವರಂ ಹರಮ್ ।
ಸಂಕಲ್ಪ ನಿಯತೋ ಭೂತ್ವಾ ಗತ್ವಾ ವಾರಾಣಸೀಂ ನರಃ ।
ಆನೀಯ ಗಂಗಾಸಲಿಲಂ ರಾಮೇಶಮಭಿಷಿಚ್ಯ ಚ ।
ಸಮುದ್ರೇಕ್ಷಿಪ್ತ ತದ್ಭಾರೋ ಬ್ರಹ್ಮಪ್ರಾಪ್ನೋತ್ಯಸಂಶಯಮ್ ॥

ವಿಧಿವತ್ತಾದ ತೀರ್ಥಯಾತ್ರಾ ಕ್ರಮ ಹೀಗಿದೆ – ರಾಮೇಶ್ವರದ ಸೇತುಬಂಧದಲ್ಲಿ ಸ್ನಾನಮಾಡಿ, ರಾಮೇಶ್ವರನ ದರ್ಶನ ಮಾಡಿ। ಸಮುದ್ರದ ಮರಳನ್ನು ಹಿಡಿದುಕೊಂಡು ಹಾಗೆಯೇ ಪಶ್ಚಿಮಸಮುದ್ರದ ತೀರದಲ್ಲಿ ಮುಂದುವರೆದು ಗೋಕರ್ಣ, ಭೀಮಾಶಂಕರ, ತ್ರ್ಯಂಬಕೇಶ್ವರ (ನಾಸಿಕ್–ಮಹಾರಾಷ್ಟ್ರ), ಓಂಕಾರೇಶ್ವರ (ಮಧ್ಯಪ್ರದೇಶ), ಉಜ್ಜಯಿನಿ(ಮಧ್ಯಪ್ರದೇಶ), ದ್ವಾರಕಾ(ಗುಜರಾತ್), ಸೋಮನಾಥ(ಸೌರಾಷ್ಟ್ರ/ಗುಜರಾತ್), ಮತ್ತೂ ಉತ್ತರಕ್ಕೆ ಮುಂದುವರೆದು ಹರಿದ್ವಾರ, ಹೃಷೀಕೇಶ, ಬದರೀ, ಕೇದಾರ, ಕೈಲಾಸ, ಮಾನಸಸರೋವರ, ಮುಕ್ತಿನಾಥ(ನೇಪಾಳ), ಪಶುಪತಿನಾಥ(ನೇಪಾಳ) ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿ, ಹಾಗೆಯೇ ಪೂರ್ವಕ್ಕೆ ಮುಂದುವರೆದು ಅಯೋಧ್ಯೇ(ಉತ್ತರಪ್ರದೇಶ), ಪ್ರಯಾಗ(ಉತ್ತರಪ್ರದೇಶ), ವಾರಾಣಸಿ/ಕಾಶಿ(ಉತ್ತರಪ್ರದೇಶ)ಯಲ್ಲಿ ವಿಶ್ವನಾಥನ ದರ್ಶನಮಾಡಿ, ಗಂಗೆಯಲ್ಲಿ ಸ್ನಾನಮಾಡಿ, ಗಂಗಾಜಲವನ್ನು ತೆಗೆದುಕೊಂಡು ಮುಂದೆ ಗಯಾ(ಬಿಹಾರ), ಕಾಮಾಕ್ಯ(ಅಸ್ಸಾಂ) ಕ್ಷೇತ್ರಗಳನ್ನು ದರ್ಶಿಸಿ ಮುಂದೆ ಪೂರ್ವಸಮುದ್ರತೀರದಲ್ಲಿ ದಕ್ಷಿಣದಿಕ್ಕಿಗೆ ಬರುತ್ತಾ, ಕಲ್ಕತ್ತಾಕಾಳಿ, ಗಂಗಾಸಾಗರ ಸಂಗಮ, ಪುರಿ, ಶ್ರೀಶೈಲ, ತಿರುಪತಿ, ಕಂಚಿ, ತಿರುವಣ್ಣಾಮಲೈ, ಚಿದಂಬರ, ಶ್ರೀರಂಗ, ಮಧುರೈ ಮುಂತಾದ ಪುಣ್ಯಕ್ಷೇತ್ರಗಳನ್ನು ದರ್ಶಿಸಿ ಪುನಃ ರಾಮೇಶ್ವರಕ್ಕೆ ಬಂದು, ಗಂಗಾಜಲದಿಂದ ರಾಮೇಶ್ವರನಿಗೆ ಅಭಿಷೇಕಮಾಡಿ, ಮರಳನ್ನು ಸಮುದ್ರಕ್ಕೆ ಹಾಕಿದರೆ ಕ್ರಮವಾದ ತೀರ್ಥಯಾತ್ರೆ ಮುಗಿಯುತ್ತದೆ। ಈ ರೀತಿಯಲ್ಲಿ ಮಾಡಿದರೆ ಬ್ರಹ್ಮಸಾಯುಜ್ಯ ಪ್ರಾಪ್ತಿಯಾಗುತ್ತದೆ ॥

11. ರುದ್ರಾಧ್ಯಾಯದ ಮಹಿಮೆ (ಪದ್ಮಪುರಾಣ)

ನಮಕಂ ಚಮಕಂ ಚೈವ ಪೌರುಷಂ ಸೂಕ್ತಮೇವ ಚ ।

ನಿತ್ಯಂ ತ್ರಯಂ ಪ್ರಯುಂಜಾನೋ ಬ್ರಹ್ಮಲೋಕೇ ಮಹೀಯತೇ ॥

ರುದ್ರಾಧ್ಯಾಯ, ಚಮಕಾಧ್ಯಾಯ, ಪುರುಷಸೂಕ್ತ ಈ ಮೂರು ಮಂತ್ರಗಳನ್ನು ನಿತ್ಯವೂ ಭಕ್ತಿಯಿಂದ ಜಪಿಸುವವನು ಬ್ರಹ್ಮಲೋಕವನ್ನು ಸೇರುತ್ತಾನೆ ॥

ರುದ್ರಾಧ್ಯಾಯೀ ವಸೇದ್ಯತ್ರ ಗ್ರಾಮೇ ವಾ ನಗರೇಽಪಿ ವಾ ।

ನ ತತ್ರ ಕ್ಷುತ್ತಿಪಾಸಾದ್ಯಾ ದುರ್ಭಿಕ್ಷ ವ್ಯಾಧಯೋಪಿ ಚ ॥

ರುದ್ರಮಂತ್ರವನ್ನು ನಿತ್ಯವೂ ಪಠಿಸುವವನು ಎಲ್ಲಿ ವಾಸಿಸುವನೋ ಆ ಗ್ರಾಮದಲ್ಲಿ ಅಥವಾ ನಗರದಲ್ಲಾಗಲೀ ಹಸಿವು, ಬಾಯಾರಿಕೆ, ದುರ್ಭಿಕ್ಷ, ವ್ಯಾಧಿಗಳು ಇರುವುದಿಲ್ಲ ॥

12. ಮಹಿಳೆಯರ ಶ್ರೇಷ್ಠತೆ – ಪ್ರಭಾವ (ಸುಭಾಷಿತ)

ಸ್ತ್ರೀಯೋಹಿ ನಾಮ ಖಿಲ್ವೇತಾ ನಿಸರ್ಗಾದೇವ ಪಂಡಿತಾಃ ।

ಪುರುಷಾಣಾಂತು ಪಾಂಡಿತ್ಯಂ ಶಾಸ್ತ್ರೈರೇವೋಪದಿಶ್ಯತೇ ॥

ಸ್ತ್ರೀಯರು ಸಹಜವಾಗಿಯೇ ಪಾಂಡಿತ್ಯವುಳ್ಳವರು । ಪುರುಷರಿಗಾದರೋ ಶಾಸ್ತ್ರಗ್ರಂಥಗಳ ಅಭ್ಯಾಸ ಬಲದಿಂದ ಪಾಂಡಿತ್ಯ ಬರುತ್ತದೆ ॥

ಅಂತಕಃ ಪವನೋ ಮೃತ್ಯುಃ ಪಾತಾಲಂ ವಡವಾಮುಖಿಮ್ ।

ಕ್ಷುರಧಾರ ವಿಷಂ ಸರ್ಪೋ ವಹ್ನಿರಿತ್ಯೇಕತಃ ಸ್ತ್ರಿಯಃ ॥

ಯಮ, ವಾಯು, ಮೃತ್ಯು, ಪಾತಾಲ, ವಡವಾಗ್ನಿ । ಕತ್ತಿಯಧಾರೆ, ವಿಷ, ಸರ್ಪ, ಅಗ್ನಿ, ಇಷ್ಟು ಶಕ್ತಿಗಳು ಒಟ್ಟಿಗೆ ಸೇರಿದರೂ ಸ್ತ್ರೀ ಶಕ್ತಿಗೆ ಸಮಾನವಾಗಲಾರದು ॥

13. ಮಹಿಳೆಯರು ಯಾವಾಗ ತಾವೇ ಗಂಡನನ್ನು ಹುಡುಕಿಕೊಳ್ಳಬಹುದು ? (ಮಹಾಭಾರತ)

ತ್ರೀಣಿ ವರ್ಷಾಣ್ಯುದೀಕ್ಷೇತ ಕನ್ಯಾ ಋತುಮತೀ ಸತೀ ।
ಚತುರ್ಥೇತ್ವಥ ಸಂಪ್ರಾಪ್ತೇ ಸ್ವಯಂಭರ್ತಾರ ಮರ್ಜಯೇತ್ ॥

ಋತುವಾದ ಕನ್ಯೆಯು ಮುಂದಿನ ೩ ವರ್ಷಗಳ ಕಾಲ ಮದುವೆಯ ನಿರೀಕ್ಷೆ ಮಾಡಬೇಕು । ಅದುವರೆಗೂ ತಂದೆ ಮುಂತಾದವರು ವಿವಾಹಕ್ಕೆ ಪ್ರಯತ್ನಮಾಡದಿದ್ದರೆ ಆಗ ತಾನೇ ವರನನ್ನು ಹುಡುಕಬಹುದು (ಅಂತರಾರ್ಥ ಹೀಗಿದೆ – ಮಕ್ಕಳಿಗೆ ಸರಿಯಾದ ವಯಸ್ಸಿಗೇ, ಬೇರೆ ಯಾವ ಕಾರಣಗಳನ್ನೂ ಹೇಳದೇ ತಂದೆ ತಾಯಿಯರೇ ವಿವಾಹವನ್ನು ಮಾಡಬೇಕು, ಇಲ್ಲದಿದ್ದರೆ ಅನರ್ಥಗಳಾಗುತ್ತವೆ) ॥

14. ಭಕ್ತಿಗೆ ತಕ್ಕಂತೆ ವರ (ಸುಭಾಷಿತ ರತ್ನಮಾಲಿಕಾ)

ಧೂಪ ದೀಪ ದ್ವಯಂ ನಾಸ್ತಿ ಪ್ರಸೀದ ಪರಮೇಶ್ವರ ।
ಅನ್ನ ವಸ್ತ್ರ ದ್ವಯಂ ನಾಸ್ತಿ ಚಿರಂಜೀವೀ ಸುಖೀಭವ ॥

ಒಬ್ಬ ಭಕ್ತ, ಭಗವಂತನಲ್ಲಿ ಪ್ರಾರ್ಥನೆ ಮಾಡುವಾಗ ಸ್ವಾಮೀ ! ಧೂಪ ದೀಪ ಎರಡಿಲ್ಲ ಅನುಗ್ರಹಿಸು ಎಂದನಂತೆ । ಅದಕ್ಕೆ ದೇವರು, ಅನ್ನ ವಸ್ತ್ರ ಎರಡಿಲ್ಲ ಚಿರಂಜೀವಿಯಾಗು ! ಸುಖಿಯಾಗು ! ಎಂದು ಹರಸಿದನಂತೆ ॥

15. ಯಾವುದರಲ್ಲಿ ತೃಪ್ತಿ ಇರಬೇಕು ಇರಬಾರದು (ಸಮಯೋಚಿತ ಪದ್ಯಮಾಲಿಕಾ)

ಸಂತೋಷಸ್ತ್ರೀಷು ಕರ್ತವ್ಯಃ ಕಲತ್ರೇ ಭೋಜನೇ ಧನೇ ।
ತ್ರಿಷು ಚೈವ ನ ಕರ್ತವ್ಯೋsಧ್ಯಯನೇ ಜಪ ದಾನಯೋಃ ॥

ಹೆಂಡತಿ – ಊಟ – ಹಣ ಈ ಮೂರರಲ್ಲಿ ತೃಪ್ತಿ ಇರಬೇಕು । ಅಧ್ಯಯನ – ಜಪ – ದಾನ ಈ ಮೂರರಲ್ಲಿ ತೃಪ್ತಿ ಇರಬಾರದು ॥

16. ಮೋಕ್ಷವು ಮನೆಯಲ್ಲೇ ಸಿಗುತ್ತದೆ ! (ಗರುಡಪುರಾಣ)

ಸ್ವಕರ್ಮ ಧರ್ಮಾರ್ಜಿತ ಜೀವಿತಾನಾಂ
ಶಾಸ್ತ್ರೇಷು ದಾರೇಷು ಸದಾ ರತಾನಾಮ್ ।
ಜಿತೇಂದ್ರಿಯಾಣಾಂ ಅತಿಥಿ ಪ್ರಿಯಾಣಾಂ
ಗೃಹೇಽಪಿ ಮೋಕ್ಷಃ ಪುರುಷೋತ್ತಮಾನಾಮ್ ॥

ಯಾರು ತನ್ನ ಧರ್ಮಕ್ಕನುಗುಣವಾಗಿ ಜೀವನವನ್ನು ನಡೆಸುತ್ತಾನೋ, ಶಾಸ್ತ್ರಗಳಲ್ಲಿಯೂ ಮತ್ತು ತನ್ನ ಪತ್ನಿಯಲ್ಲಿಯೂ ಮಾತ್ರವೇ ಆಸಕ್ತನಾಗಿರುತ್ತಾನೋ । ಜಿತೇಂದ್ರಿಯನಾಗಿ ಅತಿಥಿಗಳನ್ನು ಪ್ರೀತಿಸುತ್ತಾನೋ ಅಂತಹವನು ಎಲ್ಲಿಯೂ ಹೋಗಬೇಕಿಲ್ಲ, ಅವನಿಗೆ ಮನೆಯಲ್ಲಿಯೇ ಮೋಕ್ಷವು ಸಿಗುತ್ತದೆ ॥

17. ಸ್ನೇಹ ಮುರಿಯಲು ಕಾರಣಗಳು (ಸುಭಾಷಿತ ರತ್ನಭಂಡಾರ)

ವಿವಾದೋ ಧನಸಂಬಂಧೋ ಯಾಚನಂ ಸ್ತ್ರೀಷು ಸಂಗತಿಃ ।
ಆದಾನಾಮಗ್ರತಃ ಸ್ಥಾನಂ ಮೈತ್ರೀಭಂಗಸ್ಯ ಹೇತವಃ ॥

ಜಗಳ – ಹಣಕಾಸಿನ ಸಂಬಂಧ – ಬೇಡಿಕೆ – ಹೆಂಗಸರ ಸಂಬಂಧ । ಸಾಲ ಮಾಡುವುದು – ಮೇಲಿನ ಪದವಿಗೆ ಹೋಗುವುದು, ಇವೆಲ್ಲವೂ ಸ್ನೇಹ ಮುರಿದುಬೀಳುವುದಕ್ಕೆ ಕಾರಣಗಳು ॥

18. ಕಾರ್ತೀಕ ಮಾಸದಲ್ಲಿ ತುಳಸೀಎಲೆ ಪೂಜೆಯ ವಿಶೇಷ (ಬ್ರಹ್ಮವೈವರ್ತ ಪುರಾಣ)

ಕಾರ್ತೀಕೇ ತುಲಸೀದಾನಂ ಕರೋತಿ ಹರಯೇ ಚ ಯಃ ।
ಯುಗಂ ಪತ್ರಪ್ರಮಾಣಂ ಚ ಮೋದತೇ ಹರಿಮಂದಿರೇ ॥

ಯಾರು ಕಾರ್ತೀಕಮಾಸದಲ್ಲಿ ಶ್ರೀಹರಿಗೆ ತುಳಸಿಯನ್ನು ಪೂಜಿಸುತ್ತಾರೋ। ಅವರು ಯುಗಪೂರ್ತಿಯಾಗಿ ಅಥವಾ ಎಲೆಗಳ ಸಂಖ್ಯೆಯಷ್ಟು ಕಾಲ ವೈಕುಂಠದಲ್ಲಿ ನೆಲೆಸುವರು ॥

19. ಗಂಗಾಸ್ನಾನದ ಫಲ (ಬ್ರಹ್ಮವೈವರ್ತ ಪುರಾಣ)

ನಿತ್ಯಸ್ನಾಯೀ ಚ ಗಂಗಾಯಾಂ ಸ ಪೂತಃ ಸೂರ್ಯವದ್ಭುವಿ ।
ಪದೇಪದೇsಶ್ವಮೇಧಸ್ಯ ಲಭತೇ ನಿಶ್ಚಿತಂ ಫಲಮ್ ॥

ನಿತ್ಯವೂ ಗಂಗೆಯಲ್ಲಿ ಸ್ನಾನಮಾಡುವವನು ಸೂರ್ಯನಂತೆ ಭೂಮಿಯಲ್ಲಿ ಪವಿತ್ರನೆನಿಸಿಕೊಳ್ಳುವನು। ಆಗಾಗ್ಗೆ ಅಶ್ವಮೇಧಯಾಗ ಮಾಡುವುದರಿಂದ ಸಿಗುವ ಫಲವು ನಿತ್ಯ ಗಂಗಾಸ್ನಾನ ಮಾಡುವವನಿಗೆ ಸಿಗುತ್ತದೆ ॥

20. ಪಾನಕವನ್ನು(ಸಿಹಿನೀರು) ಕೊಡುವುದರ ಫಲ (ಬ್ರಹ್ಮವೈವರ್ತ ಪುರಾಣ)

ಮೀನ ಕರ್ಕಟಯೋರ್ಮಧ್ಯೇ ಗಾಢಂ ತಪತಿ ಭಾಸ್ಕರೇ ।
ಭಾರತೇ ಯೋ ದದಾತ್ಯೇವ ಜಲಮೇವ ಸುವಾಸಿತಮ್ ॥
ಮೋದತೇ ಸ ಚ ವೈಕುಂಠೇ ಯಾವದಿಂದ್ರಾಶ್ಚತುರ್ದಶ ।
ಪುನಃ ಸ್ವಯೋನಿಂ ಸಂಪ್ರಾಪ್ಯ ಸುಖೀ ನಿಷ್ಕಪಟೋ ಭವೇತ್ ॥

ಮೀನ – ಕರ್ಕಾಟಕ ರಾಶಿಗಳ ಮಧ್ಯದಲ್ಲಿ (ಮಾರ್ಚಿ–ಜೂನ್) ಸೂರ್ಯನು ಪ್ರಖರವಾಗಿ ಸುಡುತ್ತಿರುವಾಗ। ಯಾರು ಏಲಕ್ಕಿ ಮುಂತಾದವುಗಳಿಂದ ಸುವಾಸಿತವಾದ ನೀರನ್ನು ಕುಡಿಯಲು ಕೊಡುತ್ತಾರೋ । ಅವರು ೧೪ ಇಂದ್ರರ ಆಯಸ್ಸಿನಷ್ಟು ಕಾಲ ವೈಕುಂಠದಲ್ಲಿದ್ದು । ಪುನಃ ತನ್ನ ಪೂರ್ವಯೋನಿಯಲ್ಲಿ ಜನಿಸಿ ಸುಖಿಗಳೂ, ಕಪಟರಹಿತರೂ ಆಗುತ್ತಾರೆ ॥

21. ನರಕಗಳ ಸಂಖ್ಯೆ (ಗರುಡಪುರಾಣ)

ಚತುರಶೀತಿ ಲಕ್ಷಾಣಿ ನರಕಾಃ ಸಂತಿ ಖೇಚರ ।
ತೇಷಾಂ ಮಧ್ಯೇ ಘೋರತಮಾ ಘೌರೇಯಾಸ್ತ್ವೇಕವಿಂಶತಿಃ ॥

ಎಲೈ ಗರುಡನೇ, ಒಟ್ಟು ನರಕಗಳ ಸಂಖ್ಯೆ ೮೪ ಲಕ್ಷ । ಅವುಗಳಲ್ಲಿ ಅತಿ ಭಯಾನಕವಾದವುಗಳು ಪ್ರಮುಖವಾಗಿ ೨೧ ॥

ಏತೇಷು ಪತಿತಾ ಮೂಢಾಃ ಪಾಪಿಷ್ಠಾ ಧರ್ಮವರ್ಜಿತಾಃ ।
ತತ್ರ ಭುಂಜಂತಿ ಕಲ್ಪಾಂತೇ ತಾಸ್ತಾ ನರಕಯಾತನಾಃ ॥

ಇಂತಹಾ ನರಕಗಳಲ್ಲಿ ಪಾಪಿಷ್ಠರೂ – ಧರ್ಮವನ್ನು ಬಿಟ್ಟವರೂ – ದುಷ್ಟರೂ ಬೀಳುತ್ತಾರೆ । ಹೀಗೆ ಬಿದ್ದವರು ನರಕಯಾತನೆಗಳನ್ನು ಸಾವಿರಾರು ವರ್ಷಗಳು ಅನುಭವಿಸುತ್ತಾರೆ ॥

22. ಉಪಾಕರ್ಮವನ್ನು ಯಾವಾಗ ಮಾಡಬೇಕು ? (ವಸಿಷ್ಠ / ಬೃಹಸ್ಪತಿ / ಧರ್ಮಸಿಂಧು / ಧರ್ಮಸಿಂಧು ಸಾರ / ಕಪರ್ದಿಕಾರಿಕಾ)

ಶ್ರಾವಣೇ ಪೌರ್ಣಮಾಸ್ಯಾಸೀತ್ ಸಂಗವಾತ್ ಪರತೋ ಯದಿ ।
ತಥೈವೌದಯಿಕಂ ಗ್ರಾಹ್ಯಂ ನಾನ್ಯತ್ ವೃದ್ಧಿಮಭೀಪ್ಸುಭಿಃ ।
ಅನ್ವಾಧಾನದಿನೇ ಕುರ್ಯಾತ್ ಉಪಾಕರ್ಮಾದಿಕಂ ಸದಾ ।
ಏತದ್ಯಾಜುಷಿಕಂ ವಿದ್ಧಿ ವಸಿಷ್ಠವಚನಂ ಯಥಾ ॥

ಶ್ರಾವಣಮಾಸದ ಹುಣ್ಣಿಮೆಯು ಸಂಗವಕಾಲಕ್ಕಿಂತ ಮುಂದೆಯೂ ಇರುವುದಾದರೆ, ಆ ಹುಣ್ಣಿಮೆಯೇ **ಔದಯಿಕಿ** ಎಂದು ಹೇಳಲ್ಪಡುವುದು । ಸೂರ್ಯೋದಯಕ್ಕೆ ಮಾತ್ರ ಹುಣ್ಣಿಮೆಯಿದ್ದರೆ ಸಾಲದು, ಇದನ್ನು **ಔದಯಿಕಿ** ಎಂದು ಹೇಳಲು ಬರುವುದಿಲ್ಲ । **'ಸಂಗವಾತ್ ಪರತಃ ಸಾಚೇತ್ ಪೂರ್ಣಿಮಾ ಔದಯಿಕೀ ಸ್ಮೃತಾ'** ಎಂದು ಬೃಹಸ್ಪತಿ ವಚನವಿದೆ। ಅನ್ವಾಧಾನದಿನದಲ್ಲಿ (ಪೌರ್ಣಮಾಸೀಷ್ಟಿಯ ದಿನದ ಹಿಂದಿನದಿನ) ಉಪಾಕರ್ಮಾದಿಗಳನ್ನು ಯಾವಾಗಲೂ ಮಾಡಬೇಕು । ಇದು ಯಜುರ್ಮಂತ್ರದಲ್ಲಿ ಇದೆಯೆಂದು ವಸಿಷ್ಠರ ವಚನದಿಂದ ತಿಳಿದುಬರುತ್ತದೆ ॥

ಹಸ್ತ ಶ್ರವಣಪರ್ವಾಣಿ ಗ್ರಾಹ್ಯಾಣ್ಯೌದಯಿಕಾನಿತು ।
ಹಸ್ತರ್ಕ್ಷಂ ಸಂಗವಸ್ಪೃಷ್ಟಂ ತ್ರಿಮುಹೂರ್ತಂ ತು ವೈಷ್ಣವಮ್ ॥

ಎಂಬ ಬೃಹಸ್ಪತಿಯ ವಚನದಂತೆ ಆಯಾಯಾ ಶಾಖೆಯವರು ಅಂದರೆ ಋಗ್ವೇದಿಗಳು ೩ ಮುಹೂರ್ತ ಶ್ರವಣನಕ್ಷತ್ರವಿರುವ ದಿನವನ್ನೂ, ಯಜುರ್ವೇದಿಗಳು ಉದಯದಿಂದ ಸಂಗವ ಕಾಲಕ್ಕಿಂತ ಮುಂದೆಯೂ ಇರುವ ಹುಣ್ಣಿಮೆಯ ದಿನವನ್ನೂ, (ಉದಯದಿಂದ ಎರಡೂವರೆ ಗಂಟೆ ಪ್ರಾತಃಕಾಲ । ನಂತರದ ಎರಡೂವರೆ ಗಂಟೆ ಸಂಗವಕಾಲ । ನಂತರದ ಎರಡೂವರೆ ಗಂಟೆ ಮಧ್ಯಾಹ್ನ । ನಂತರದ ಎರಡೂವರೆ ಗಂಟೆ ಅಪರಾಹ್ನ । ನಂತರದ ಎರಡೂವರೆ ಗಂಟೆ ಸಾಯಂ) ಹಾಗೂ ಸಾಮವೇದಿಗಳು ಸಂಗವಕಾಲದಲ್ಲಿ ಹಸ್ತನಕ್ಷತ್ರವಿರುವ ದಿನವನ್ನು ಗಣನೆಗೆ ತೆಗೆದುಕೊಂಡು ಉಪಾಕರ್ಮವನ್ನು ಮಾಡಬೇಕು ॥ **ಆದರೆ –**

ತೈತ್ತಿರೀಯಾಣಾಂ ಷಣ್ಮುಹೂರ್ತ ನ್ಯೂನತ್ವೇಪಿ ಉತ್ತರ್ಯೈವ ಗ್ರಾಹ್ಯಾ ॥

ಧರ್ಮಸಿಂಧುಸಾರ ಗ್ರಂಥದ ಪ್ರಕಾರ, ಯಜುರ್ವೇದ ತೈತ್ತಿರೀಯ ಶಾಖೆಯವರಿಗೆ ಉದಯದಿಂದ ೬ ಮುಹೂರ್ತಗಳು ಹುಣ್ಣಿಮೆಯು ಇಲ್ಲದಿದ್ದರೂ ಸಹ, ಎರಡನೇ ದಿನವೇ ಗ್ರಾಹ್ಯ (ಅಂದರೆ – ಎರಡು ದಿನಗಳೂ ಉದಯದಲ್ಲಿ ಹುಣ್ಣಿಮೆ ಇದ್ದ ಸಂದರ್ಭಗಳಲ್ಲಿ ಎರಡನೇ ದಿನವೇ ಉಪಾಕರ್ಮವನ್ನು ತೈತ್ತಿರೀಯಶಾಖೆಯವರು ಮಾಡಬೇಕು, ಅವರಿಗೆ ಮುಹೂರ್ತ–ಗಳಿಗೆಗಳ ನಿಯಮವು ಈ ವಿಷಯದಲ್ಲಿ ಇಲ್ಲ ಎಂಬ ಅಭಿಪ್ರಾಯ) **ಹಾಗೂ –**

ಶ್ರವಣಂ ಪೌರ್ಣಮಾಸೀ ಚ ಸಂಗವಸ್ಪೃಶಮಾಚರೇತ್ ।
ತಥೈವೋದಯಿಕಂ ಗ್ರಾಹ್ಯಂ ನಾನ್ಯಥೋದಯಿಕಂ ಭವೇತ್ ।
ಪ್ರಾತಸ್ಸಂಗವನಂ ಪರ್ವಶ್ರಾವಣೇ ಪೂರ್ವಮುತ್ತಮಃ ॥

ಕಪರ್ದಿಮುನಿಗಳ ಪ್ರಕಾರ, ಶ್ರಾವಣಮಾಸದ ಹುಣ್ಣಿಮೆಯು, ಉದಯದಿಂದ ಸಂಗವಕಾಲದ ವರೆಗೂ ಇದ್ದರೆ । ಆಗ ಮಾತ್ರ ಅದು **ಔದಯಿಕಿ** ಎಂದರ್ಥ ವಾಗುತ್ತದೆ । ಉದಯಕ್ಕೆ ಮಾತ್ರ ಹುಣ್ಣಿಮೆ ತಿಥಿಯು ಇದ್ದರೆ ಅದನ್ನು **ಔದಯಿಕಿ** ಎನ್ನಲು ಬರುವುದಿಲ್ಲ । ಒಂದುವೇಳೆ, ಮೊದಲದಿನ ಕೇವಲ ಸಂಗವಕಾಲದಲ್ಲಿ ಹುಣ್ಣಿಮೆಯು ಇದ್ದು, ಮರುದಿನ ಉದಯಕ್ಕೆ ಮಾತ್ರ ಹುಣ್ಣಿಮೆಯು ಇದ್ದರೆ ಆಗ ಹುಣ್ಣಿಮೆಯು ಉದಯಕ್ಕಿರುವ ದಿನವನ್ನೇ ಆದ್ಯತೆಯಾಗಿ ಗ್ರಹಿಸಬೇಕು ॥ **ಮತ್ತೂ**

ಶ್ರವಣೇ ನ ತು ಯತ್ಕರ್ಮ ಉತ್ತರಾಷಾಢ ಸಂಯುತೇ ।
ಸಂವತ್ಸರ ಕೃತೋಧ್ಯಾಯಃ ತತ್ ಕ್ಷಣಾದೇವ ನಶ್ಯತಿ ॥

ಶ್ರಾವಣ ಹುಣ್ಣಿಮೆಯಲ್ಲಿ ಮಾಡುವ ಉಪಾಕರ್ಮದ ದಿನದಲ್ಲಿ ಉತ್ತರಾಷಾಢ ನಕ್ಷತ್ರವಿದ್ದು, ಅಂದು ಉಪಾಕರ್ಮವನ್ನು ಮಾಡಿದರೆ, ಆ ವರ್ಷ ಮಾಡಿದ ಪೂರ್ಣ ಅಧ್ಯಯನವನ್ನು ಅದು ನಾಶಪಡಿಸುತ್ತದೆ (ಉತ್ತರಾಷಾಢ ನಕ್ಷತ್ರವಿದ್ದ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮ ಮಾಡಬಾರದು । ಮುಂದಿನ ಮಾಸದ ಹುಣ್ಣಿಮೆಯಲ್ಲಿ ಮಾಡಬೇಕು ॥

23. ಯಾವಯಾವ ಸಂದರ್ಭಗಳಲ್ಲಿ ತಾಯಿಯ ಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು (ಆಪಸ್ತಂಬ ಗೃಹ್ಯವ್ಯಾಖ್ಯಾನ–ಪಟಲ 8)

ಅಷ್ಟಕಾಸು ಚ ವೃದ್ಧೌ ಚ ಗಯಾಯಾಂ ಚ ಮೃತೇಹನಿ ।
ಮಾತುಃಶ್ರಾದ್ಧಂ ಪೃಥಕ್ಕುರ್ಯಾತ್ ಅನ್ಯತ್ರ ಪತಿನಾ ಸಹ ॥

ಅಷ್ಟಕಶ್ರಾದ್ಧಗಳಲ್ಲೂ – ವೃದ್ಧಿಶ್ರಾದ್ಧ – ಗಯಾಶ್ರಾದ್ಧ – ಮೃತಾಹಶ್ರಾದ್ಧ। ಇವುಗಳಲ್ಲಿ ಮಾತ್ರ ತಾಯಿಯ ಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು, ಮಿಕ್ಕ ಶ್ರಾದ್ಧಗಳಲ್ಲಿ ಪತಿಯೊಂದಿಗೆ(ತಂದೆ) ಸೇರಿಸಿ ತಾಯಿಯ ಶ್ರಾದ್ಧವನ್ನು ಮಾಡಬೇಕು ॥

24. ಯಾವ ಸಂದರ್ಭಗಳಲ್ಲಿ ನಾವು ಮಾಡಬೇಕಾದ ಶ್ರಾದ್ಧವನ್ನು ಬೇರೆಯವರ ಹತ್ತಿರ ಮಾಡಿಸಬಹುದು (ಧರ್ಮಸಿಂಧು)

ರಾಜಕಾರ್ಯೇ ನಿಯುಕ್ತಸ್ಯ ಬಂಧನಿಗ್ರಹ ವರ್ತಿನಃ ।

ವ್ಯಸನೇಷು ಚ ಸರ್ವೇಷು ಶ್ರಾದ್ಧಂ ವಿಪ್ರೇಣ ಕಾರಯೇತ್ ॥

ರಾಜಕಾರ್ಯದಲ್ಲಿ ನೇಮಿಸಲ್ಪಟ್ಟವರೂ, ಅಪರಾಧಿಗಳಾಗಿ ಬಂಧಿಸಲ್ಪಟ್ಟವರೂ, ಶಿಕ್ಷೆಗೆ ಗುರಿಯಾದವರೂ। ಆಪತ್ತುಗಳಲ್ಲಿ ಸಿಕ್ಕಿಕೊಂಡವರೂ ಸಹ ತಾವು ಮಾಡತಕ್ಕ ಶ್ರಾದ್ಧವನ್ನು ಬ್ರಾಹ್ಮಣರ ಮೂಲಕ ಮಾಡಿಸಬಹುದು ॥

25. ಯಾವಾಗ ಗೌರವವು ಕಡಿಮೆಯಾಗುತ್ತದೆ ? (ಸುಭಾಷಿತ ರತ್ನಾವಳಿ)

ವಿನಾ ಕಾರ್ಯೇಣ ಯೇ ಮೂಢಾಃ ಗಚ್ಛಂತಿ ಪರಮಂದಿರಮ್ ।

ಅವಶ್ಯಂ ಲಘುತಾಂ ಯಾಂತಿ ಕೃಷ್ಣಪಕ್ಷೇ ಯಥಾ ಶಶೀ ॥

ಅಗತ್ಯವಲ್ಲದೇ ಬೇರೆಯವರ ಮನೆಗೆ ಹೆಚ್ಚಾಗಿ ಹೋಗುವವರು । ಕೃಷ್ಣಪಕ್ಷದ ಚಂದ್ರನಂತೆ ಗೌರವವನ್ನು ಕಳೆದುಕೊಳ್ಳುತ್ತಾರೆ ॥

ಶ್ರವಣಂ ಪೌರ್ಣಮಾಸೀ ಚ ಸಂಗವಸ್ಪೃಶಮಾಚರೇತ್ ।
ತಥೈವೋದಯಿಕಂ ಗ್ರಾಹ್ಯಂ ನಾನ್ಯಥೋದಯಿಕಂ ಭವೇತ್ ।
ಪ್ರಾತಸ್ಸಂಗವನಂ ಪರ್ವಶ್ರಾವಣೇ ಪೂರ್ವಮುತ್ತಮಃ ॥

ಕಪರ್ದಿಮುನಿಗಳ ಪ್ರಕಾರ, ಶ್ರಾವಣಮಾಸದ ಹುಣ್ಣಿಮೆಯು, ಉದಯದಿಂದ ಸಂಗವಕಾಲದ ವರೆಗೂ ಇದ್ದರೆ । ಆಗ ಮಾತ್ರ ಅದು **ಔದಯಿಕಿ** ಎಂದರ್ಥ ವಾಗುತ್ತದೆ । ಉದಯಕ್ಕೆ ಮಾತ್ರ ಹುಣ್ಣಿಮೆ ತಿಥಿಯು ಇದ್ದರೆ ಅದನ್ನು **ಔದಯಿಕಿ** ಎನ್ನಲು ಬರುವುದಿಲ್ಲ । ಒಂದುವೇಳೆ, ಮೊದಲದಿನ ಕೇವಲ ಸಂಗವಕಾಲದಲ್ಲಿ ಹುಣ್ಣಿಮೆಯು ಇದ್ದು, ಮರುದಿನ ಉದಯಕ್ಕೆ ಮಾತ್ರ ಹುಣ್ಣಿಮೆಯು ಇದ್ದರೆ ಆಗ ಹುಣ್ಣಿಮೆಯು ಉದಯಕ್ಕಿರುವ ದಿನವನ್ನೇ ಆದ್ಯತೆಯಾಗಿ ಗ್ರಹಿಸಬೇಕು ॥ ಮತ್ತೂ

ಶ್ರವಣೇ ನ ತು ಯತ್ಕರ್ಮ ಉತ್ತರಾಷಾಢ ಸಂಯುತೇ ।
ಸಂವತ್ಸರ ಕೃತೋಧ್ಯಾಯಃ ತತ್ ಕ್ಷಣಾದೇವ ನಶ್ಯತಿ ॥

ಶ್ರಾವಣ ಹುಣ್ಣಿಮೆಯಲ್ಲಿ ಮಾಡುವ ಉಪಾಕರ್ಮದ ದಿನದಲ್ಲಿ ಉತ್ತರಾಷಾಢ ನಕ್ಷತ್ರವಿದ್ದು, ಅಂದು ಉಪಾಕರ್ಮವನ್ನು ಮಾಡಿದರೆ, ಆ ವರ್ಷ ಮಾಡಿದ ಪೂರ್ಣ ಅಧ್ಯಯನವನ್ನು ಅದು ನಾಶಪಡಿಸುತ್ತದೆ (ಉತ್ತರಾಷಾಢ ನಕ್ಷತ್ರವಿದ್ದ ಶ್ರಾವಣ ಹುಣ್ಣಿಮೆಯಲ್ಲಿ ಉಪಾಕರ್ಮ ಮಾಡಬಾರದು । ಮುಂದಿನ ಮಾಸದ ಹುಣ್ಣಿಮೆಯಲ್ಲಿ ಮಾಡಬೇಕು ॥

23. ಯಾವಯಾವ ಸಂದರ್ಭಗಳಲ್ಲಿ ತಾಯಿಯ ಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು (ಆಪಸ್ತಂಬ ಗೃಹ್ಯವ್ಯಾಖ್ಯಾನ–ಪಟಲ 8)

ಅಷ್ಟಕಾಸು ಚ ವೃದ್ಧೌ ಚ ಗಯಾಯಾಂ ಚ ಮೃತೇಹನಿ ।
ಮಾತುಃಶ್ರಾದ್ಧಂ ಪೃಥಕ್ಕುರ್ಯಾತ್ ಅನ್ಯತ್ರ ಪತಿನಾ ಸಹ ॥

ಅಷ್ಟಕಶ್ರಾದ್ಧಗಳಲ್ಲೂ – ವೃದ್ಧಿಶ್ರಾದ್ಧ – ಗಯಾಶ್ರಾದ್ಧ – ಮೃತಾಹಶ್ರಾದ್ಧ। ಇವುಗಳಲ್ಲಿ ಮಾತ್ರ ತಾಯಿಯ ಶ್ರಾದ್ಧವನ್ನು ಪ್ರತ್ಯೇಕವಾಗಿ ಮಾಡಬೇಕು, ಮಿಕ್ಕ ಶ್ರಾದ್ಧಗಳಲ್ಲಿ ಪತಿಯೊಂದಿಗೆ(ತಂದೆ) ಸೇರಿಸಿ ತಾಯಿಯ ಶ್ರಾದ್ಧವನ್ನು ಮಾಡಬೇಕು ॥

24. ಯಾವ ಸಂದರ್ಭಗಳಲ್ಲಿ ನಾವು ಮಾಡಬೇಕಾದ ಶ್ರಾದ್ಧವನ್ನು ಬೇರೆಯವರ ಹತ್ತಿರ ಮಾಡಿಸಬಹುದು (ಧರ್ಮಸಿಂಧು)

ರಾಜಕಾರ್ಯೇ ನಿಯುಕ್ತಸ್ಯ ಬಂಧನಿಗ್ರಹ ವರ್ತಿನಃ ।

ವ್ಯಸನೇಷು ಚ ಸರ್ವೇಷು ಶ್ರಾದ್ಧಂ ವಿಪ್ರೇಣ ಕಾರಯೇತ್ ॥

ರಾಜಕಾರ್ಯದಲ್ಲಿ ನೇಮಿಸಲ್ಪಟ್ಟವರೂ, ಅಪರಾಧಿಗಳಾಗಿ ಬಂಧಿಸಲ್ಪಟ್ಟವರೂ, ಶಿಕ್ಷೆಗೆ ಗುರಿಯಾದವರೂ। ಆಪತ್ತುಗಳಲ್ಲಿ ಸಿಕ್ಕಿಕೊಂಡವರೂ ಸಹ ತಾವು ಮಾಡತಕ್ಕ ಶ್ರಾದ್ಧವನ್ನು ಬ್ರಾಹ್ಮಣರ ಮೂಲಕ ಮಾಡಿಸಬಹುದು ॥

25. ಯಾವಾಗ ಗೌರವವು ಕಡಿಮೆಯಾಗುತ್ತದೆ ? (ಸುಭಾಷಿತ ರತ್ನಾವಳಿ)

ವಿನಾ ಕಾರ್ಯೇಣ ಯೇ ಮೂಢಾಃ ಗಚ್ಛಂತಿ ಪರಮಂದಿರಮ್ ।

ಅವಶ್ಯಂ ಲಘುತಾಂ ಯಾಂತಿ ಕೃಷ್ಣಪಕ್ಷೇ ಯಥಾ ಶಶೀ ॥

ಅಗತ್ಯವಲ್ಲದೇ ಬೇರೆಯವರ ಮನೆಗೆ ಹೆಚ್ಚಾಗಿ ಹೋಗುವವರು । ಕೃಷ್ಣಪಕ್ಷದ ಚಂದ್ರನಂತೆ ಗೌರವವನ್ನು ಕಳೆದುಕೊಳ್ಳುತ್ತಾರೆ ॥

26 ಶ್ರಾದ್ಧ ಮಾಡುವುದರಿಂದ ಯಾರ ಯಾರ ತೃಪ್ತಿಯಾಗುತ್ತದೆ ? (ಗರುಡಪುರಾಣ)

ಅಗ್ನೌಹುತಂತು ದೇವಸ್ಥಾಃ ಸ್ವರ್ಗಸ್ಥಾಃ ವಿಪ್ರಭೋಜನಾತ್ ।
ಯಮಸ್ಥಾಃ ಪಿಂಡದಾನೇನ ನಾರಕ್ಯಾಃ ವಿಕಿರೇಣ ತು ।
ಊರ್ಜಂ ವಹಂತು ತಿರ್ಯಕ್ಸ್ಥಾಃ ರಾಕ್ಷಸಾ ಭೂರಿಭೋಜನೇ ।
ಋಷಿಸ್ಥಾಃ ದಕ್ಷಿಣಾದಾನೇ ಶ್ರಾದ್ಧಂ ಸಪ್ತವಿಧಂ ಸ್ಮೃತಮ್ ॥

ಶ್ರಾದ್ಧದಲ್ಲಿ ಮಾಡಿದ ಹೋಮದಿಂದ, ದೇವತೆಗಳೂ – ಬ್ರಾಹ್ಮಣಭೋಜನದಿಂದ, ಸ್ವರ್ಗದಲ್ಲಿರುವ ಪಿತೃಗಳೂ । ಪಿಂಡದಾನದಿಂದ, ನರಕದಲ್ಲಿರುವ ಪಿತೃಗಳೂ – ವಿಕಿರದಿಂದ, ತಿರ್ಯಗ್ಯೋನಿಗಳಲ್ಲಿರುವವರೂ । ಭೂರಿಭೋಜನದಿಂದ, ರಾಕ್ಷಸರೂ । ದಕ್ಷಿಣೆಯಿಂದ, ಋಷಿಗಳೂ ತೃಪ್ತರಾಗುತ್ತಾರೆ, ಈ ರೀತಿಯಾಗಿ ಶ್ರಾದ್ಧದಲ್ಲಿ ೭ ಹಂತಗಳಿವೆ ॥

27. ಹೆಂಗಸರು ಏನು ಮಾಡದಿದ್ದರೆ ದೋಷವಿಲ್ಲ ? (ಭವಿಷ್ಯಪುರಾಣ)

ಅಶಿರಸ್ಕಂತು ಯತ್ ಸ್ನಾನಂ ತಥಾ ಪರ್ಯುಷಿತ ಭೋಜನಮ್ ।
ದ್ವಾದಶ್ಯುಲ್ಲಂಘನಂ ಸ್ತ್ರೀಣಾಂ ನ ದೋಷಾಯ ತ್ರಯಂ ಭವೇತ್ ॥

ಕೇವಲ ಕಂಠದವರೆಗೆ (ತಲೆಸ್ನಾನವಿಲ್ಲದೆ) ಸ್ನಾನ ಮಾಡುವುದು – ಹಿಂದಿನ ದಿನ ಮಾಡಿದ ಆಹಾರ ಸೇವನೆ ಮಾಡುವುದು । ದ್ವಾದಶೀ ಪಾರಣೆ ಮಾಡದಿರುವಿಕೆ – ಈ ಮೂರೂ ಸ್ತ್ರೀಯರಿಗೆ ದೋಷವಿಲ್ಲ(ಗಂಡಸರಿಗೆ ಈ ಮೂರೂ ಕೆಲಸಗಳು ದೋಷಕಾರಿಗಳು) ॥

28. ಮನುಷ್ಯನ ವಿನಾಶ ಕಾಲಗಳು ಯಾವಾಗ ? (ಭಾಗವತ)

ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು ।
ಧರ್ಮೇಮಯಿ ಚ ವಿದ್ವೇಷಃ ಸವಾ ಆಶು ವಿನಶ್ಯತಿ ॥

ಯಾವಾಗ, ದೇವರಲ್ಲಿ – ವೇದಗಳಲ್ಲಿ – ಗೋವುಗಳಲ್ಲಿ – ಬ್ರಾಹ್ಮಣರಲ್ಲಿ – ಸಾಧುಗಳಲ್ಲಿ । ಧರ್ಮದಲ್ಲಿ – ಭಗವಂತನಲ್ಲಿ ಯಾರು ನಂಬಿಕೆಯನ್ನೂ, ಶ್ರದ್ಧೆಯನ್ನೂ ಇಡುವುದಿಲ್ಲವೋ, ವೈರತ್ವವನ್ನು ಮಾಡುತ್ತಾರೋ ಅವರ ವಿನಾಶ ಸಮೀಪದಲ್ಲಿದೆ ಎಂದು ತಿಳಿಯಬೇಕು ॥

29. ಕಲಿಯುಗದ ಲಕ್ಷಣ (ಜೈಮಿನೀಭಾರತ)

ಜನನೀಂ ಜೀರ್ಣವಸ್ತ್ರೇಣ ವೇಷ್ಟಯಿಷ್ಯಂತಿ ತೇ ಕುಲೌ ।
ವೇಶ್ಯಾಂ ವಾ ಪುಂಶ್ಚಲೀಂ ವಾಪಿ ದುಕೂಲೈರ್ವಿವಿಧೈಃ ಸ್ವಯಮ್ ।
ಜನನೀಂ ತಾಡಯಿಷ್ಯಂತಿ ಲಾಲಯಿಷ್ಯಂತಿ ಸ್ವಾಂ ಸ್ತ್ರಿಯಮ್ ॥

ಕಲಿಯುಗದಲ್ಲಿ ಜನರು, ತಾಯಿಯನ್ನು ಹರಿದಿರುವ ಬಟ್ಟೆಗಳಿಂದಲೂ । ವೇಶ್ಯಾಸ್ತ್ರೀಯನ್ನು ಹಾಗೂ ತನ್ನ ಹೆಂಡತಿಯನ್ನು ಉತ್ತಮೋತ್ತಮವಾದ ಬಟ್ಟೆಗಳಿಂದಲೂ ಅಲಂಕರಿಸುತ್ತಾರೆ । ತಾಯಿಯನ್ನು ನಿರ್ಲಕ್ಷಿಸಿ, ಹೆಂಡತಿಯನ್ನು ಅತಿರೇಕವಾಗಿ ಉಪಚರಿಸುತ್ತಾರೆ ॥

30. ಗಂಡಸರು ಮತ್ತು ಹೆಂಗಸರು ಏನನ್ನು ಮಾಡಬಾರದು ? (ಸುಭಾಷಿತ ರತ್ನಾವಳಿ)

ದೀಪಂ ನಿರ್ವಾಪಣಂ ಪುಂಸಾಂ ಸ್ತ್ರೀಣಾಂ ಕೂಷ್ಮಾಂಡ ಛೇದನಮ್ ।
ಗ್ರಂಥಿತಸ್ಯ ಕುಶಚ್ಛೇದೋ ವಂಶಚ್ಛೇದೋ ನ ಸಂಶಯಃ ॥

ಗಂಡಸರು ದೀಪವನ್ನು ಆರಿಸುವುದು – ಹೆಂಗಸರು ಕುಂಬಳಕಾಯಿಯನ್ನು ಒಡೆಯುವುದು । ಹಾಗೂ ಗಂಟುಹಾಕಿರುವ ದರ್ಭೆಯನ್ನು ಕತ್ತರಿಸುವುದು – ಇವಿಷ್ಟೂ ನಮ್ಮ ನಮ್ಮ ವಂಶಗಳನ್ನು ಛೇದ(ನಾಶ)ಮಾಡಿದಷ್ಟೇ ಪಾಪವು ॥

31. ತೀರ್ಥಯಾತ್ರೆಯನ್ನು ಹೇಗೆ ಮಾಡಬೇಕು ? (ಪದ್ಮಪುರಾಣ)

ಪಾದಂ ಪಾದುಕಾಶ್ಚೈವ ಯಾನೇನಾರ್ಧಂ ತಥೈವ ಚ ।
ವಾಣಿಜ್ಯೇನ ತ್ರಿಭಾಗಂ ಚ ಸರ್ವಂ ಹಂತಿ ಪ್ರತಿಗ್ರಹಃ ॥

ತೀರ್ಥಯಾತ್ರೆಗೆ, ಪಾದರಕ್ಷೆ (ಚಪ್ಪಲಿ) ಧರಿಸಿ ಹೋದರೆ ಗಳಿಸುವ ಯಾತ್ರಾಫಲದಲ್ಲಿ (ಪುಣ್ಯದಲ್ಲಿ) ನಾಲ್ಕನೇ ಒಂದು ಭಾಗ ನಷ್ಟವಾಗುತ್ತದೆ – ವಾಹನದಲ್ಲಿ ಹೋದರೆ, ಅರ್ಧಭಾಗ ಪುಣ್ಯ ನಷ್ಟವಾಗುತ್ತದೆ । ಮಾರ್ಗಮಧ್ಯೆ ವ್ಯಾಪಾರ ಮಾಡುತ್ತಾ ಹೋದರೆ, ಮೂರು ಭಾಗ ಪುಣ್ಯ ನಾಶವಾಗುತ್ತದೆ – ಮಾರ್ಗದಲ್ಲಿ ಪ್ರತಿಗ್ರಹ(ದಾನಾದಿಗಳನ್ನು ತೆಗೆದುಕೊಳ್ಳುವಿಕೆ, ಅಂದರೆ– ಬೇರೆಯವರು ಕೊಡುವ ಹಣವನ್ನು ತೆಗೆದುಕೊಳ್ಳುವಿಕೆ) ವನ್ನು ಮಾಡಿದರೆ, ಎಲ್ಲಾ ಪುಣ್ಯವೂ ನಾಶವಾಗುತ್ತದೆ – ಆದ್ದರಿಂದ ನಡೆದು ಹೋಗುವುದು ಶ್ರೇಷ್ಠ ॥

32. ಎಲ್ಲಾ ಕಾಲಕ್ಕೂ, ಎಲ್ಲಾ ಮನುಷ್ಯರಿಗೂ ಅನ್ವಯಿಸುವ ಸಾಮಾನ್ಯ ಧರ್ಮನಿಯಮಗಳು (ಮನು)

ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ ।
ದಾನಂ ದಮೋ ದಯಾಕ್ಷಾಂತಿಃ ಸರ್ವೇಷಾಂ ಧರ್ಮಲಕ್ಷಣಮ್ ॥

ಅಹಿಂಸೆ – ಸತ್ಯ – ಕಳ್ಳತನ ಮಾಡದಿರುವಿಕೆ – ಶುಚಿತ್ವ – ಇಂದ್ರಿಯ ನಿಗ್ರಹ । ದಾನ – ದಮ – ದಯೆ – ಕ್ಷಾಂತಿ(ಶಾಂತಿ) ಇವಿಷ್ಟೂ ಎಲ್ಲಾ ಕಾಲಕ್ಕೂ, ಎಲ್ಲಾ ಜನರಿಗೂ ಅನ್ವಯಿಸುವ ಸಾರ್ವಕಾಲಿಕ ನಿಯಮಗಳು ॥

33. ಮೌನವನ್ನು ಯಾವಾಗ ಮಾಡಬೇಕು ? (ಆಚಾರ ನಿರ್ಣಯ)

ಸ್ನಾಸ್ಯತೋ ವರುಣಃ ಕಾಂತಿಂ ಜುಹ್ವತೋಽಗ್ನಿಃ ಶ್ರಿಯಂ ಹರೇತ್ ।
ಅಶ್ನತೋ ಮೃತ್ಯುರಾಯುಷ್ಯಂ ತಸ್ಮಾತ್ ಮೌನಂ ತ್ರಿಷು ಸ್ಮೃತಮ್ ॥

ಸ್ನಾನ ಮಾಡುವಾಗ ಮಾತಾಡಿದರೆ – ವರುಣನು ಕಾಂತಿಯನ್ನೂ, ಹೋಮವನ್ನು ಮಾಡುವಾಗ ಮಾತಾಡಿದರೆ – ಅಗ್ನಿಯು ಸಂಪತ್ತನ್ನೂ । ಊಟ ಮಾಡುವಾಗ ಮಾತಾಡಿದರೆ – ಮೃತ್ಯುವು ಆಯುಷ್ಯವನ್ನೂ, ನಾಶಮಾಡುವರು, ಆದ್ದರಿಂದ ಈ ಮೂರೂ ಕಾಲಗಳಲ್ಲಿ ಅವಶ್ಯವಾಗಿ ಮೌನವನ್ನು ಮಾಡಬೇಕು ॥

34. ಒಳ್ಳೆಯ ಸಹವಾಸದಿಂದಾಗುವ ಲಾಭವೇನು ? (ಆಚಾರ ನಿರ್ಣಯ)

ಸಂತಃ ಸದಾಭಿಗಂತವ್ಯಃ ಯದಿ ನೋಪದಿಶಂತ್ಯಪಿ ।
ಯಾಸ್ತುಸ್ವೈರ ಕಥಾಸ್ತೇಷಾಂ ಉಪದೇಶಾಃ ಭವಂತಿ ತಾಃ ॥

ಸಜ್ಜನರ ಸಹವಾಸ ಉತ್ತಮವಾದುದು, ನೇರವಾಗಿ ನಮಗೇ ಉಪದೇಶಕೊಡದಿದ್ದರೂ, ಅವರಾಡುವ ಮಾತಿನಿಂದ ನಮಗೆ ಅನೇಕ ವಿಷಯಗಳು ತಿಳಿಯುತ್ತವೆ ॥

35. ಮುಟ್ಟಿನ ಕಾಲ (ಋತು) ಎಂದರೇನು ? (ಗರುಡಪುರಾಣ–6)

ಋತುಮಧ್ಯೇ ಹಿ ಪಾಪಾನಾಂ ದೇಹೋತ್ಪತ್ತಿಃ ಪ್ರಜಾಯತೇ ।
ಇಂದ್ರಸ್ಯ ಬ್ರಹ್ಮಹತ್ಯಾಸ್ತಿ ಯಸ್ಮಿಂಸ್ತಸ್ಮಿನ್ ದಿನತ್ರಯೇ ॥

ಋತುಕಾಲವೇನೆಂದರೆ – ಒಮ್ಮೆ ಇಂದ್ರನು, ವಿಶ್ವರೂಪನನ್ನು ಕೊಂದದ್ದರಿಂದ ಅವನಿಗೆ ಬ್ರಹ್ಮಹತ್ಯೆಯು ತಟ್ಟಿತು । ಇಂದ್ರನು ಆ ಪಾಪವನ್ನು ೪ ಭಾಗಗಳಾಗಿ

ಮಾಡಿ, ಭೂಮಿ–ನೀರು–ವೃಕ್ಷ– ಮತ್ತು ಸ್ತ್ರೀಯರಿಗೆ ಅವರ ಒಪ್ಪಿಗೆಯ ಮೇರೆಗೆ ಹಂಚಿದನು । ಹಾಗಾಗಿ ಪ್ರತಿತಿಂಗಳು ಋತುದರ್ಶನ (ರಕ್ತಸ್ರಾವ) ಸಮಯದಲ್ಲಿ, ಬ್ರಹ್ಮಹತ್ಯೆಯ ಪಾಪಫಲವು ಇರುತ್ತದೆಯಾದ್ದರಿಂದ ಆ ೩ ದಿನಗಳು ಅವರು ಅಪವಿತ್ರರಾಗಿರುತ್ತಾರೆ ॥

36. ಗಂಡು – ಹೆಣ್ಣು – ನಪುಂಸಕ ಅವಳಿ ಈ ರೀತಿ, ಗರ್ಭದಲ್ಲಿ ಹುಟ್ಟಲು ಇರುವ ಲೆಕ್ಕಾಚಾರವೇನು ? (ಗರುಡಪುರಾಣ–6)

ಶುಕ್ರ ಶೋಣಿತ ಸಂಯೋಗಾತ್ ಪಿಂಡೊತ್ಪತ್ತಿಃ ಪ್ರಜಾಯತೇ ।
ರಕ್ತಾಧಿಕ್ಯೇ ಭವೇನ್ನಾರೀ ಶುಕ್ರಾಧಿಕ್ಯೇ ಭವೇತ್ಪುಮಾನ್ ।
ಸಮಾನೇ ದ್ರವ್ಯ ಸಂಯೋಗೇ ತೃತೀಯಾ ಪ್ರಕೃತಿರ್ಭವೇತ್ ।
ವಿಭಕ್ತೇ ರೇತಸಿ ಪ್ರಾಯೋ ಭವೇದ್ಯುಗ್ಮಮಪಿ ಕ್ವಚಿತ್ ॥

ಪುರುಷನ ವೀರ್ಯ ಮತ್ತು ಮಹಿಳೆಯ ಅಂಡಾಣುಗಳ ಸೇರುವಿಕೆಯಿಂದ ಪಿಂಡ(ಭ್ರೂಣ)ದ ಉತ್ಪತ್ತಿಯಾಗುತ್ತದೆ । ಇದರಲ್ಲಿ ಅಂಡಾಣುವಿನ ಪ್ರಮಾಣವು ಹೆಚ್ಚಿದ್ದರೆ ಸ್ತ್ರೀಯಾಗಿಯೂ ಹಾಗೂ ವೀರ್ಯದ ಪ್ರಮಾಣವು ಹೆಚ್ಚಿದ್ದರೆ ಗಂಡಾಗಿಯೂ ಮತ್ತೂ ಸಮಾನ ಪ್ರಮಾಣದಲ್ಲಿ ಸೇರಿದರೆ ನಪುಂಸಕನಾಗಿಯೂ । ಮತ್ತೂ ವೀರ್ಯವು ಬೇರೆಬೇರೆಯಾಗಿ ಉಳಿದರೆ ಅವಳಿಗಳಾಗಿಯೂ ಹುಟ್ಟುತ್ತಾರೆ ॥

37 ಗರ್ಭದಲ್ಲಿ, ಭ್ರೂಣದ ಬೆಳವಣಿಗೆಯ ಹಂತಗಳು ಹೇಗೆ ನಡೆಯುತ್ತವೆ ? (ಗರುಡಪುರಾಣ–6)

ಕರ್ಮಣಾ ದೈವನೇತ್ರೇಣ ಜಂತುರ್ದೇಹೋಪಪತ್ತಯೇ ।
ಸ್ತ್ರಿಯಾಃ ಪ್ರವಿಷ್ಟ ಉದರಂ ಪುಂಸೋ ರೇತಃ ಕಣಾಶ್ರಯಃ ॥

ಕಲಲಂ ತ್ವೇಕರಾತ್ರೇಣ ಪಂಚರಾತ್ರೇಣ ಬುದ್ಬುದಮ್ ।

ದಶಾಹೇನ ತು ಕರ್ಕಂಧೂಃ ಪೇಶ್ಯಂಡಂ ವಾ ತತಃ ಪರಮ್ ॥

ಮಾಸೇನ ತು ಶಿರೋದ್ವ್ಯಾಂ ಬಾಹ್ವಂಗಾದ್ಯಂಗವಿಗ್ರಹಃ ।

ನಖ ಲೋಮಾಸ್ಥಿ ಚರ್ಮಾಣಿ ಲಿಂಗ ಛಿದ್ರೋದ್ಭವಸ್ತ್ರಿಭಿಃ ॥

ಇನ್ನು, ಗರ್ಭದಿಂದ ಹುಟ್ಟುವ ಕ್ರಮವು ಹೀಗಿರುತ್ತದೆ – ಪರಮಾತ್ಮನಿಂದ ಪ್ರೇರಿತವಾಗಿ ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳಿಂದ ಜೀವಿಯು ದೇಹಧಾರಣಕ್ಕಾಗಿ । ಪುರುಷನ ವೀರ್ಯಬಿಂದುವಿನ ಆಶ್ರಯದಿಂದ ಸ್ತ್ರೀಯ ಹೊಟ್ಟೆಯಲ್ಲಿ ಪ್ರವೇಶಿಸುತ್ತದೆ ॥

ಆಮೇಲೆ, ಮೊದಲರಾತ್ರಿಯಲ್ಲಿ ವೀರ್ಯ–ಅಂಡಾಣುಗಳ ಮಿಶ್ರಣವಾಗುತ್ತದೆ, ನಂತರ ೫ ರಾತ್ರಿಗಳಲ್ಲಿ ಬುದ್ಬುದ(ಗುಳ್ಳೆ)ವಾಗುತ್ತದೆ। ನಂತರದ ೧೦ ದಿವಸಗಳಲ್ಲಿ ಬದರೀಫಲದಂತೆ ಕಠಿಣವಾಗುತ್ತದೆ, ಆಮೇಲೆ ಯೋನಿಯಲ್ಲಿ ಮಾಂಸವು ಪಿಂಡಾಕಾರವಾಗುತ್ತದೆ ॥

ಆಮೇಲೆ, ಮೊದಲನೇ ತಿಂಗಳಲ್ಲಿ – ತಲೆಯೂ, ಎರಡನೇ ತಿಂಗಳಲ್ಲಿ – ಭುಜ, ಆದಿಗಳ ಅಂಗರಚನೆಯೂ। ಮತ್ತೂ ಮೂರನೇ ತಿಂಗಳಲ್ಲಿ – ಉಗುರು, ಕೂದಲು, ಮೂಳೆ, ಚರ್ಮ, ಜನನೇಂದ್ರಿಯ ಹೀಗೆ ದೇಹದ ರಚನಾಕ್ರಮವು ಸಾಗುತ್ತದೆ ॥

38. ಪುಣ್ಯಾಹದಲ್ಲಿ ಎಷ್ಟು ಕಲಶಗಳನ್ನು ಬಳಸಬೇಕು? (ಕಪರ್ದಿಕಾರಿಕಾ)

ಚರಂ ದಕ್ಷಿಣತಸ್ತಸ್ಯ ಸ್ಥಿರಮುತ್ತರತಸ್ತಥಾ ।

ಶುಭಕರ್ಮಾಣಿ ಸರ್ವತ್ರ ತರ್ಪಣಂ ಚ ಉತ್ತರೇದಿಶಿ ॥

ಚರ ಕಲಶವನ್ನು ದಕ್ಷಿಣ ಭಾಗದಲ್ಲಿಯೂ, ಸ್ಥಿರ ಕಲಶವನ್ನು ಉತ್ತರಭಾಗದಲ್ಲಿಯೂ ಇಡಬೇಕು। ಎಲ್ಲಾ ಶುಭ ಕರ್ಮಗಳಲ್ಲಿ ತರ್ಪಣವನ್ನು ಉತ್ತರದಿಕ್ಕಿಗೆ ಬಿಡಬೇಕು ॥

ಚರಂತು ದಕ್ಷಿಣೇಭಾಗೇ ಕಲಶಂ ಸ್ಥಾಪಯೇತ್ ಬುಧಃ ।
ಅಚಲಂ ವಾಮಭಾಗೇತು ಪುಣ್ಯಾಹೇ ಕಲಶದ್ವಯಮ್ ॥

ಚರಕಲಶವನ್ನು ದಕ್ಷಿಣದಲ್ಲೂ, ಸ್ಥಿರಕಲಶವನ್ನು ಉತ್ತರದಲ್ಲೂ ಹೀಗೆ, ತಿಳಿದವರು ಪುಣ್ಯಾಹದಲ್ಲಿ ೨ ಕಲಶಗಳನ್ನು ಇಡಬೇಕು ॥

ಸೂತಕಾಂತೇ ವೃಷೋತ್ಸರ್ಗೇ ಸರ್ವೇಷು ಪಿತೃಕರ್ಮಸು ।
ಕುಂಭಮೇಕಂ ಪ್ರತಿಷ್ಠಾಪ್ಯ ಪುಣ್ಯಾಹಂ ವಾಚಯೇತ್ ಬುಧಃ ॥

ಸೂತಕವು ಕಳೆದಾಗ ಶುದ್ಧಿಗಾಗಿ ಮಾಡುವ ಪುಣ್ಯಾಹದಲ್ಲಿ – ವೃಷೋತ್ಸರ್ಗದಲ್ಲಿ – ಎಲ್ಲ ಪಿತೃಕರ್ಮಗಳಲ್ಲಿ। ಈ ಸಂದರ್ಭಗಳಲ್ಲಿ ಮಾತ್ರ ತಿಳಿದವರು, ೧ ಕಲಶವನ್ನು ಮಾತ್ರ ಇಟ್ಟುಕೊಂಡು ಪುಣ್ಯಾಹವಾಚನ ಕರ್ಮವನ್ನು ಮಾಡಬೇಕು ॥

ತಜ್ಜಲಂ ಪ್ರೋಕ್ಷಣಾರ್ಥಂಸ್ಯಾತ್ ತತ್ಪಾತ್ರಂ ನ ತು ಚಾಲಯೇತ್ ।
ಚಲನಂ ಯತ್ತು ಮೌಢ್ಯೇನ ಪುನಃ ಕರಣಮಾಚರೇತ್ ॥

ಯಾವ ಕಲಶವನ್ನು ಚಲಿಸದೇ ಸ್ಥಿರವಾಗಿ ಇಟ್ಟಿರುತ್ತಾರೋ, ಅದರಿಂದ ಪ್ರೋಕ್ಷಣೆ ಮಾಡಬೇಕು। ಒಂದು ವೇಳೆ ತಿಳುವಳಿಕೆ ಇಲ್ಲದೆ ಆ ಕಲಶವನ್ನು ಎತ್ತಿದರೆ(ಚಲಿಸಿದರೆ) ಮತ್ತೆ ಪುಣ್ಯಾಹ ವಿಧಿಯನ್ನು ಮಾಡಬೇಕು ॥

ಅರಿಷ್ಟ ನಿರಸನಂ ಚೈಷೇ ಶಾಮ್ಯ ಘೋರಾಣಿ ನೈಋತೌ ।
ಅನ್ಯದಿಕ್ಷು ಕ್ಷಿಪೇತ್ ಚೈವ ಕರ್ತುರಾಯುಃ ಕ್ಷಯೋ ಭವೇತ್ ॥

'ಅರಿಷ್ಟ ನಿರಸನವನ್ನು' ಈಶಾನ್ಯದಲ್ಲಿಯೂ, **'ಪ್ರತಿಹತವನ್ನು'** ನೈಋತ್ಯದಲ್ಲಿಯೂ ನೀರಿನಿಂದ ಪ್ರೋಕ್ಷಿಸಿ ಬಿಡಬೇಕು। ಒಂದು ವೇಳೆ ಬೇರೇ ದಿಕ್ಕುಗಳಲ್ಲಿ ಇವನ್ನು ಪ್ರೋಕ್ಷಿಸಿದರೆ, ಕರ್ತೃವಿನ ಆಯಸ್ಸು ಕಡಿಮೆಯಾಗುತ್ತದೆ ॥

39. ದಿನವೂ ಸ್ನಾನ ಮಾಡಬೇಕೆನ್ನುವ ಮತ್ತೂ ಯಾವ ರೀತಿಯ ಬಟ್ಟೆ ಧರಿಸಬೇಕೆನ್ನುವ ವಿಚಾರ (ಮಾರ್ಕಂಡೇಯ ಋಷಿ)

ಅಸ್ನಾತ್ವಾ ನಾಚರೇತ್ ಕರ್ಮ ದೈವಂ ಪಿತ್ರ್ಯಂ ಅಥಾಪಿ ವಾ ।
ಸರ್ವತ್ರ ಕರ್ಮಾದೌ ಸ್ನಾನಂ ಧೌತ ವಸ್ತ್ರಂ ಚ ವಿಹಿತಂ ॥

ಸ್ನಾನ ಮಾಡದೇ ದೇವ, ಪಿತೃ ಸಂಬಂಧವಾದ ಹಾಗೂ ಮತ್ಯಾವುದೇ ಕರ್ಮಗಳನ್ನೂ ಮಾಡಬಾರದು। ಎಂಬ ಪುರಾಣೋಕ್ತಿಯಿಂದ ಎಲ್ಲಾ ಕರ್ಮಗಳ ಆದಿಯಲ್ಲೂ ಸ್ನಾನ ಮತ್ತು ಶುಭ್ರವಾದ ವಸ್ತ್ರಧಾರಣೆಯನ್ನು ಶಾಸ್ತ್ರಗಳು ವಿಧಾನಿಸಿವೆ ॥

ಈಶದ್ಧೌತಂ ನವಶ್ವೇತಂ ಸದೃಶಂ ಯನ್ನ ಧಾರಿತಂ ।
ಅಹತಂ ತದ್ವಿಜಾನೀಯಾತ್ ಸರ್ವ ಕರ್ಮಸು ಪಾವನಮ್ ॥

ಒಗೆದಂತಹ, ಹೊಸದಾದ, ಶ್ವೇತವಸ್ತ್ರವು ಹಾಗೂ ಅಂಚು ಉಳ್ಳದ್ದು, ಹರಿದುಹೋಗದಿರುವಂತಹ ಬಟ್ಟೆಯು। ಎಲ್ಲ ಕರ್ಮಗಳಲ್ಲಿಯೂ ಪಾವನವು, ಶ್ರೇಷ್ಠವು ಎಂದು ಹೇಳಿರುವುದರಿಂದ ಅಂತಹ ವಸ್ತ್ರಗಳನ್ನೇ ಧರಿಸಬೇಕು ॥

40. ಜುಟ್ಟು (ಶಿಖೆ) ಮತ್ತು ಜನಿವಾರ (ಉಪವೀತ)ಗಳ ಅವಶ್ಯಕತೆ (ಮಾರ್ಕಂಡೇಯ ಋಷಿ)

ಸದೋಪವೀತಿನಾ ಕಾರ್ಯಂ ಸದಾ ಬದ್ಧ ಶಿಖೇನ ಚ ।
ಅಶಿಖೋ ಅನುಪವೀತೀ ಚ ಯತ್ಕರೋತಿ ನ ತತ್ಕೃತಮ್ ॥

ಯಾವಾಗಲೂ ಉಪವೀತಿಯಾಗಿ ಮತ್ತು ಬದ್ಧಶಿಖಿನಾಗಿ(ಗಂಟು ಹಾಕಿರಬೇಕು) ಕರ್ಮಗಳನ್ನು ಮಾಡಬೇಕು। ಶಿಖೆಯಿಲ್ಲದೇ ಮತ್ತು ಉಪವೀತನಲ್ಲದೇ ಮಾಡುವ ಯಾವುದೇ ಕರ್ಮವೂ ಮಾಡಿದಂತಾಗುವುದಿಲ್ಲ ॥

ಚರ ಕಲಶವನ್ನು ದಕ್ಷಿಣ ಭಾಗದಲ್ಲಿಯೂ, ಸ್ಥಿರ ಕಲಶವನ್ನು ಉತ್ತರಭಾಗದಲ್ಲಿಯೂ ಇಡಬೇಕು। ಎಲ್ಲಾ ಶುಭ ಕರ್ಮಗಳಲ್ಲಿ ತರ್ಪಣವನ್ನು ಉತ್ತರದಿಕ್ಕಿಗೆ ಬಿಡಬೇಕು ॥

ಚರಂತು ದಕ್ಷಿಣೇಭಾಗೇ ಕಲಶಂ ಸ್ಥಾಪಯೇತ್ ಬುಧಃ ।
ಅಚಲಂ ವಾಮಭಾಗೇತು ಪುಣ್ಯಾಹೇ ಕಲಶದ್ವಯಮ್ ॥

ಚರಕಲಶವನ್ನು ದಕ್ಷಿಣದಲ್ಲೂ, ಸ್ಥಿರಕಲಶವನ್ನು ಉತ್ತರದಲ್ಲೂ ಹೀಗೆ, ತಿಳಿದವರು ಪುಣ್ಯಾಹದಲ್ಲಿ ೨ ಕಲಶಗಳನ್ನು ಇಡಬೇಕು ॥

ಸೂತಕಾಂತೇ ವೃಷೋತ್ಸರ್ಗೇ ಸರ್ವೇಷು ಪಿತೃಕರ್ಮಸು ।
ಕುಂಭಮೇಕಂ ಪ್ರತಿಷ್ಠಾಪ್ಯ ಪುಣ್ಯಾಹಂ ವಾಚಯೇತ್ ಬುಧಃ ॥

ಸೂತಕವು ಕಳೆದಾಗ ಶುದ್ಧಿಗಾಗಿ ಮಾಡುವ ಪುಣ್ಯಾಹದಲ್ಲಿ – ವೃಷೋತ್ಸರ್ಗದಲ್ಲಿ – ಎಲ್ಲ ಪಿತೃಕರ್ಮಗಳಲ್ಲಿ। ಈ ಸಂದರ್ಭಗಳಲ್ಲಿ ಮಾತ್ರ ತಿಳಿದವರು, ೧ ಕಲಶವನ್ನು ಮಾತ್ರ ಇಟ್ಟುಕೊಂಡು ಪುಣ್ಯಾಹವಾಚನ ಕರ್ಮವನ್ನು ಮಾಡಬೇಕು ॥

ತಜ್ಜಲಂ ಪ್ರೋಕ್ಷಣಾರ್ಥಂಸ್ಯಾತ್ ತತ್ಪಾತ್ರಂ ನ ತು ಚಾಲಯೇತ್ ।
ಚಲನಂ ಯತ್ತು ಮೌಢ್ಯೇನ ಪುನಃ ಕರಣಮಾಚರೇತ್ ॥

ಯಾವ ಕಲಶವನ್ನು ಚಲಿಸದೇ ಸ್ಥಿರವಾಗಿ ಇಟ್ಟಿರುತ್ತಾರೋ, ಅದರಿಂದ ಪ್ರೋಕ್ಷಣೆ ಮಾಡಬೇಕು। ಒಂದು ವೇಳೆ ತಿಳುವಳಿಕೆ ಇಲ್ಲದೆ ಆ ಕಲಶವನ್ನು ಎತ್ತಿದರೆ(ಚಲಿಸಿದರೆ) ಮತ್ತೆ ಪುಣ್ಯಾಹ ವಿಧಿಯನ್ನು ಮಾಡಬೇಕು ॥

ಅರಿಷ್ಟ ನಿರಸನಂ ಚೈಷೇ ಶಾಮ್ಯ ಘೋರಾಣಿ ನೈಋತೌ ।
ಅನ್ಯದಿಕ್ಷು ಕ್ಷಿಪೇತ್ ಚೈವ ಕರ್ತುರಾಯುಃ ಕ್ಷಯೋ ಭವೇತ್ ॥

'ಅರಿಷ್ಟ ನಿರಸನವನ್ನು' ಈಶಾನ್ಯದಲ್ಲಿಯೂ, **'ಪ್ರತಿಹತವನ್ನು'** ನೈಋತ್ಯದಲ್ಲಿಯೂ ನೀರಿನಿಂದ ಪ್ರೋಕ್ಷಿಸಿ ಬಿಡಬೇಕು। ಒಂದು ವೇಳೆ ಬೇರೇ ದಿಕ್ಕುಗಳಲ್ಲಿ ಇವನ್ನು ಪ್ರೋಕ್ಷಿಸಿದರೆ, ಕರ್ತೃವಿನ ಆಯಸ್ಸು ಕಡಿಮೆಯಾಗುತ್ತದೆ ॥

39. ದಿನವೂ ಸ್ನಾನ ಮಾಡಬೇಕೆನ್ನುವ ಮತ್ತೂ ಯಾವ ರೀತಿಯ ಬಟ್ಟೆ ಧರಿಸಬೇಕೆನ್ನುವ ವಿಚಾರ (ಮಾರ್ಕಂಡೇಯ ಋಷಿ)

ಅಸ್ನಾತ್ವಾ ನಾಚರೇತ್ ಕರ್ಮ ದೈವಂ ಪಿತ್ರ್ಯಂ ಅಥಾಪಿ ವಾ ।
ಸರ್ವತ್ರ ಕರ್ಮಾದೌ ಸ್ನಾನಂ ಧೌತ ವಸ್ತ್ರಂ ಚ ವಿಹಿತಂ ॥

ಸ್ನಾನ ಮಾಡದೇ ದೇವ, ಪಿತೃ ಸಂಬಂಧವಾದ ಹಾಗೂ ಮತ್ಯಾವುದೇ ಕರ್ಮಗಳನ್ನೂ ಮಾಡಬಾರದು। ಎಂಬ ಪುರಾಣೋಕ್ತಿಯಿಂದ ಎಲ್ಲಾ ಕರ್ಮಗಳ ಆದಿಯಲ್ಲೂ ಸ್ನಾನ ಮತ್ತು ಶುಭ್ರವಾದ ವಸ್ತ್ರಧಾರಣೆಯನ್ನು ಶಾಸ್ತ್ರಗಳು ವಿಧಾನಿಸಿವೆ ॥

ಈಶದ್ಧೌತಂ ನವಶ್ವೇತಂ ಸದೃಶಂ ಯನ್ನ ಧಾರಿತಂ ।
ಅಹತಂ ತದ್ವಿಜಾನೀಯಾತ್ ಸರ್ವ ಕರ್ಮಸು ಪಾವನಮ್ ॥

ಒಗೆದಂತಹ, ಹೊಸದಾದ, ಶ್ವೇತವಸ್ತ್ರವು ಹಾಗೂ ಅಂಚು ಉಳ್ಳದ್ದು, ಹರಿದುಹೋಗದಿರುವಂತಹ ಬಟ್ಟೆಯು। ಎಲ್ಲ ಕರ್ಮಗಳಲ್ಲಿಯೂ ಪಾವನವು, ಶ್ರೇಷ್ಠವು ಎಂದು ಹೇಳಿರುವುದರಿಂದ ಅಂತಹ ವಸ್ತ್ರಗಳನ್ನೇ ಧರಿಸಬೇಕು ॥

40. ಜುಟ್ಟು (ಶಿಖೆ) ಮತ್ತು ಜನಿವಾರ (ಉಪವೀತ)ಗಳ ಅವಶ್ಯಕತೆ (ಮಾರ್ಕಂಡೇಯ ಋಷಿ)

ಸದೋಪವೀತಿನಾ ಕಾರ್ಯಂ ಸದಾ ಬದ್ಧ ಶಿಖೇನ ಚ ।
ಅಶಿಖೋ ಅನುಪವೀತೀ ಚ ಯತ್ಕರೋತಿ ನ ತತ್ಕೃತಮ್ ॥

ಯಾವಾಗಲೂ ಉಪವೀತಿಯಾಗಿ ಮತ್ತು ಬದ್ಧಶಿಖನಾಗಿ(ಗಂಟು ಹಾಕಿರಬೇಕು) ಕರ್ಮಗಳನ್ನು ಮಾಡಬೇಕು। ಶಿಖೆಯಿಲ್ಲದೇ ಮತ್ತು ಉಪವೀತನಲ್ಲದೇ ಮಾಡುವ ಯಾವುದೇ ಕರ್ಮವೂ ಮಾಡಿದಂತಾಗುವುದಿಲ್ಲ ॥

41. ಆಚಮನಕ್ಕಿರುವ ಆದ್ಯತೆ (ಮಾರ್ಕಂಡೇಯ ಋಷಿ)

ದೇವರ್ಚನಾದಿ ಕರ್ಮಾಣಿ ತಥಾ ಗುರ್ವಭಿವಾದನಮ್ ।
ಕುರ್ವೀತ ಸಮ್ಯಗಾಚಮ್ಯ ಪ್ರಯತೋಪಿ ಸದಾ ದ್ವಿಜ: ॥

ದೇವ ಪೂಜೆ – ಎಲ್ಲ ಕರ್ಮಗಳು ಮತ್ತು ಗುರುಗಳಿಗೆ ನಮಸ್ಕಾರ । ಇವುಗಳನ್ನು ಮಾಡುವ ಮೊದಲು ಶುದ್ಧನಾಗಿದ್ದರೂ ಆಚಮನವನ್ನು ಮಾಡಿ ಆರಂಭಿಸಬೇಕು ॥

42. ಪವಿತ್ರ ಧಾರಣೆಯ ಅವಶ್ಯಕತೆ (ಮಾರ್ಕಂಡೇಯ ಋಷಿ)

ಸ್ನಾನೇ ದಾನೇ ಜಪೇ ಹೋಮೇ ಸ್ವಾಧ್ಯಾಯೇ ಪಿತೃ ಕರ್ಮಣಿ ।
ಪವಿತ್ರಂ ತು ಕರೇ ಕುರ್ಯಾತ್ ಸೌವರ್ಣಂ ರಾಜತಂತು ವಾ ॥

ಸ್ನಾನ, ದಾನ, ಜಪ, ಹೋಮ, ಅಧ್ಯಯನ, ಪಿತೃ ಸಂಬಂಧ ಕಾರ್ಯ । ಈ ಎಲ್ಲಾ ಕರ್ಮಗಳಲ್ಲಿ ಪವಿತ್ರವನ್ನು ಕೈಯಲ್ಲಿ ಧರಿಸಬೇಕು, ಅಭಾವದಲ್ಲಿ ಚಿನ್ನ ಅಥವಾ ಬೆಳ್ಳಿಯನ್ನಾದರೂ ಧರಿಸಬೇಕು ॥

43. ಯಾವ ಯಾವ ಸಂದರ್ಭಗಳಲ್ಲಿ ಹೆಂಡತಿಯು ಗಂಡನ ಯಾವ ಪಕ್ಕದಲ್ಲಿ ಕೂರಬೇಕು (ಕಪರ್ದಿಕಾರಿಕಾ)

ಪುಣ್ಯಾಹವಾಚನೇ ಚೈವ ಸಂಕಲ್ಪೇಷು ತಥೈವ ಚ ।
ಆಶೀರ್ವಚನ ಕಾಲೇ ಚ ನಿತ್ಯೋಪಾಸನ ಕರ್ಮಣಿ ।
ರಕ್ಷಾಬಂಧನ ಕಾಲೇ ಚ ಪತ್ನೀಯೋಕ್ತ್ರವಿಮೋಚನೇ ।
ಏತೇಷೂತ್ತರತಸ್ತಿಷ್ಠೇತ್ ವಧೂರನ್ಯತ್ರ ದಕ್ಷಿಣೇ ॥

ಪುಣ್ಯಾಹದಲ್ಲಿ, ಸಂಕಲ್ಪದಲ್ಲಿ । ಆಶೀರ್ವಾದ ಕಾಲದಲ್ಲಿ, ನಿತ್ಯೋಪಾಸನದಲ್ಲಿ । ರಕ್ಷಾಬಂಧನ ಕಾಲದಲ್ಲಿ, ಪತ್ನಿಯ ಯೋಕ್ತ್ರವಿಮೋಚನ ಕಾಲದಲ್ಲಿ । ವಧುವು ವರನಿಂದ ಉತ್ತರದಲ್ಲಿ(ಎಡ) ಕುಳಿತುಕೊಳ್ಳಬೇಕು ಇತರೆಡೆಗಳಲ್ಲಿ ವಧುವು ದಕ್ಷಿಣದಲ್ಲಿ(ಬಲ) ಕುಳಿತುಕೊಳ್ಳಬೇಕು ॥

ಆವಾಂಕರ್ಮಣಿ ನಿತ್ಯಹೋಮ ಸಮಯೇ ಪುಣ್ಯಾಹ ಸಂಕಲ್ಪಯೋಃ ।
ಸ್ಥಾಲ್ಯಾಗ್ರೇಣ ಚ ಯೋಕ್ತ್ರವೋಚನೇ ಪುನಸ್ಸಂಧಾನ ಶಯ್ಯೋತ್ಸವೇ ।
ಏತೇಷು ಆದ್ಯಚರೌ ಚ ವಿಪ್ರಪಡಿತಾಸು ಆಶೀಕ್ಷ್ವರಕ್ಷಾಧೃತೌ ।
ತಿಷ್ಠೇದುತ್ತರತೋ ವಧೂಃ ಸ್ಮೃತಿವಶಾತ್ ಅನ್ಯತ್ತು ತದ್ದಕ್ಷಿಣೇ ॥

ಆ ವಧೂವರರ ಕರ್ಮದಲ್ಲಿ, ನಿತ್ಯಹೋಮಸಮಯದಲ್ಲಿ, ಪುಣ್ಯಾಹ, ಸಂಕಲ್ಪದಲ್ಲಿ। ಸ್ಥಾಲೀಪಾಕ, ಆಗ್ರಯಣ, ಯೋಕ್ತ್ರವಿಮೋಚನ, ಪುನಸ್ಸಂಧಾನ, ಮಲಗುವಿಕೆಯಲ್ಲಿ। ಆದ್ಯ ಚರುವಿನಲ್ಲಿ, ವಿಪ್ರರ ಆಶೀರ್ವಾದದಲ್ಲಿ, ರಕ್ಷೇಧರಿಸಬೇಕಾದರೆ, ವಧುವು ವರನಿಂದ ಉತ್ತರಕ್ಕೆ(ಎಡ) ಇರಬೇಕು ಎಂದು ಸ್ಮೃತಿವಾಕ್ಯವಿರುವುದರಿಂದ ಬೇರೆಕರ್ಮಗಳಲ್ಲಿ ಅವಳು ದಕ್ಷಿಣಕ್ಕಿರಬೇಕು(ಬಲ) ॥

44. ವಿವಾಹದ ಯಾವ ಯಾವ ಸಂದರ್ಭಗಳಲ್ಲಿ, ವರನು ಯಾವ ದಿಕ್ಕಿಗೆ ಇರಬೇಕು ? (ಕಪರ್ದಿಕಾರಿಕಾ)

ಪಾದಪ್ರಕ್ಷಾಲನೇ ಚೈವ ಮಧುಪರ್ಕಸ್ಯ ಪ್ರಾಶನೇ ।
ಕನ್ಯಾ ಸ್ವೀಕೃತಿ ಕಾಲೇ ತು ಶೋಭನ ದ್ರವ್ಯಧಾರಣೇ ।
ಭ್ರುವೋರ್ಮಾರ್ಜನ ಕಾಲೇ ಚ ಕನ್ಯಾಮೂರ್ಧ್ನ್ಯಭಿಷೇಚನೇ ।
ಯೋಕ್ತ್ರಸ್ಯಾವೇಷ್ಟನೇ ಕಾಲೇ ಮಂಗಲ್ಯಸ್ಯ ಚ ಧಾರಣೇ ।
ವಧ್ವಾಸ್ತಂಡುಲ ಸಂಪ್ರಾಪ್ತೌ ವರೋ ವಾರುಣ ದಿಙ್ಮುಖಃ ॥

ಕಾಲುತೊಳೆಯಬೇಕಾದರೆ, ಮಧುಪರ್ಕಪ್ರಾಶನದಲ್ಲಿ । ಕನ್ಯಾಸ್ವೀಕಾರ ಮಾಡುವಾಗ, ಶೋಭನವಾದ ದ್ರವ್ಯಗಳನ್ನು ಧರಿಸುವಾಗ । ಹುಬ್ಬುಗಳಿಗೆ ಪ್ರೋಕ್ಷಣೆ ಮಾಡುವ ಕಾಲದಲ್ಲಿ, ಕನ್ಯೆಯ ತಲೆಗೆ ನೀರನ್ನು ಹಾಕಬೇಕಾದರೆ । ಯೋಕ್ತ್ರವನ್ನು ಕಟ್ಟುವ ಕಾಲದಲ್ಲಿ, ಮಾಂಗಲ್ಯಧಾರಣೆ ಮಾಡುವ ಕಾಲದಲ್ಲಿ । ವಧುವಿಗೆ ಅಕ್ಷತಾ ರೋಪಣವನ್ನು ಮಾಡುವಾಗ ಇವಿಷ್ಟೂ ಸಮಯಗಳಲ್ಲಿ ವರನು ಪಶ್ಚಿಮಾಭಿಮುಖವಾಗಿರಬೇಕು ॥

45. ಜಾತಾಶೌಚ ಮೃತಾಶೌಚ ವಿಚಾರ (ಗರುಡಪುರಾಣ)

ಸರ್ವೇಷಾಮೇವ ವರ್ಣಾನಾಂ ಸೂತಕೇಮೃತಕೇಪಿ ವಾ ।
ದಶಾಹಾಚ್ಛುದ್ಧಿರಿತ್ಯೇಷಾ ಕಲೌ ಶಾಸ್ತ್ರಸ್ಯ ನಿರ್ಣಯಃ ॥

ಹಿಂದಿನ ಯುಗಗಳಲ್ಲಿ, ಜಾತಿಕ್ರಮದಂತೆ ಸೂತಕಾಚರಣೆ ಬೇರೆಬೇರೆ ರೀತಿಯಲ್ಲಿತ್ತು । ಕಲಿಯುಗದಲ್ಲಿ ಎಲ್ಲಾ ಜಾತಿಯವರಿಗೂ ೧೦ ದಿನಗಳಲ್ಲಿ ಸೂತಕ ಕಳೆಯುವುದು ॥

46. ಸೂತಕದಲ್ಲಿ ಮಾಡಬಾರದ ಕೆಲಸಗಳು (ಗರುಡ ಪುರಾಣ)

ಆಶೀರ್ವಾದಂ ದೇವಪೂಜಾಂ ಪ್ರತ್ಯುತ್ಥಾನಾಭಿವಂದನಂ ।
ಪರ್ಯಂಕೇ ಶಯನಂ ಸ್ಪರ್ಶಂ ನ ಕುರ್ಯಾನ್ಮೃತ ಸೂತಕೇ ।
ಸಂಧ್ಯಾಂ ದಾನಂ ಜಪಂ ಹೋಮಂ ಸ್ವಾಧ್ಯಾಯಂ ಪಿತೃತರ್ಪಣಂ ।
ಬ್ರಹ್ಮಭೋಜ್ಯಂ ವ್ರತಂ ನೈವ ಕರ್ತವ್ಯಂ ಮೃತಸೂತಕೇ ॥

ಆಶೀರ್ವಾದ, ದೇವಪೂಜೆ, ಯಾರಾದರೂ ಬಂದರೆ ಎದ್ದು ಸ್ವಾಗತಿಸುವುದು, ನಮಸ್ಕರಿಸುವುದು । ಮಂಚದಮೇಲೆ ಮಲಗುವುದು, ಪರಸ್ಪರ್ಶ । ಸಂಧ್ಯಾವಂದನೆ,

ದಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ । ಬ್ರಹ್ಮಭೋಜನ, ವ್ರತ ಇವಿಷ್ಟೂ ಕಾರ್ಯಗಳನ್ನು ಸೂತಕದಲ್ಲಿ ಮಾಡಬಾರದು ॥

47. ಸೂತಕವಿಲ್ಲದವರುಗಳು (ಪರಾಶರ ಸ್ಮೃತಿ)

ವ್ರತಿನೋ ಮಂತ್ರಪೂತಸ್ಯ ಸಾಗ್ನಿಕಸ್ಯ ದ್ವಿಜಸ್ಯ ಚ ।

ಬ್ರಹ್ಮನಿಷ್ಠಸ್ಯ ಯತಿನೋ ನ ಹಿ ರಾಜ್ಞಾಂ ಚ ಸೂತಕಂ ॥

ದೀರ್ಘಕಾಲದ ವ್ರತ ಮಾಡುವವರಿಗೆ, ಮಂತ್ರದ್ರಷ್ಟಾರರಾದ ಋಷಿಗಳಿಗೆ, ಅಗ್ನಿಹೋತ್ರಿಗಳಿಗೆ । ಬ್ರಹ್ಮನಿಷ್ಠನಾದ ಯತಿಗೆ, ರಾಜನಿಗೆ ಇವರುಗಳಿಗೆ ಸೂತಕವಿರುವುದಿಲ್ಲ ॥

48. ತಂದೆಯ ಸಮಾನರು (ಮನುಸ್ಮೃತಿ)

ಶರೀರಕೃತ್ ಪ್ರಾಣದಾತ, ಯಸ್ಯಚಾನ್ನಾನಿಭುಂಜತೇ ।

ಕ್ರಮೇಣೈತೇ ತ್ರಯೋಪ್ಯುಕ್ತಾಃ ಪಿತರೋ ಧರ್ಮಶಾಸನೇ ॥

ನಮಗೆ ದೇಹ ಕೊಟ್ಟವನು, ಆಪತ್ತಿನಲ್ಲಿ ರಕ್ಷಿಸಿದವನು, ನಿರಂತರ ಅನ್ನಕೊಟ್ಟು ಕಾಪಾಡಿದವನು, ಇವರು ತಂದೆಯ ಸಮಾನರು ॥

49. ತಂದೆಯಲ್ಲಿರುವ ಲಕ್ಷಣಗಳೇ ಮಕ್ಕಳಲ್ಲಿಯೂ ಇರುವಿಕೆಯು (ಸುಭಾಷಿತ)

ಗತಿಃ ಸ್ವರಃ ಸ್ಮೃತಿಃ ಸತ್ವಂ ಶೀಲ ವಿಜ್ಞಾನ ವಿಕ್ರಮಾಃ ।

ಧೃಷ್ಣು ಪ್ರಕೃತಿ ಭಾವೌ ಚ ಆವರ್ತಾ ರೋಮರಾಜಯಃ ।

ಸಮಾಯುಸ್ಯ ಯತಸ್ಯುಸ್ತೇ ತಸ್ಯ ಪುತ್ರೋ ನ ಸಂಶಯಃ ॥

ಗತಿ, ಧ್ವನಿ, ಸ್ಮೃತಿ, ಶಕ್ತಿ, ವಿಜ್ಞಾನ, ವಿಕ್ರಮ, ಧೈರ್ಯ, ಸ್ವಭಾವ, ಸುಳಿಗಳು, ಕೂದಲುಗಳು, ಇವುಗಳು ತಂದೆಯಲ್ಲಿದ್ದ ಹಾಗೇ ಮಕ್ಕಳಲ್ಲಿಯೂ ಇರುವುವು ॥

50. ಒಳ್ಳೆಯ ಕರ್ಮಗಳಿಂದಲೂ ಕೆಟ್ಟಫಲ ಬರುವ ಬಗೆ (ಆಚಾರ ನಿರ್ಣಯ)

ಚತ್ವಾರಿ ಕರ್ಮಾಣ್ಯಭಯಂಕರಾಣಿ ಭಯಂ
ಪ್ರಯಚ್ಛಂತ್ಯ ಯಥಾ ಕೃತಾನಿ ।
ಮಾನಾಗ್ನಿಹೋತ್ರಮುತ ಮಾನಮೌನಂ
ಮಾನೇನಾಧೀತ ಮುತಮಾನ ಯಜ್ಞಃ ॥

ಅಗ್ನಿಹೋತ್ರ, ಮೌನ, ಅಧ್ಯಯನ, ಯಜ್ಞ ಇವಿಷ್ಟೂ ಮನುಷ್ಯನಿಗೆ ಶ್ರೇಯಸ್ಸನ್ನು ಕೊಡುವಂತಹವುಗಳು । ಅಹಂಕಾರದಿಂದ ಹಾಗೂ ಗೌರವ ಸ್ಥಾನವನ್ನು ಅಪೇಕ್ಷಿಸಿ ಮಾಡಿದರೆ ಅಧೋಗತಿಗೆ ಕಾರಣವಾಗುತ್ತದೆ ॥

51. ಯಾವುದನ್ನು ಯಾವುದರಿಂದ ರಕ್ಷಿಸಬೇಕು (ಆಚಾರ ನಿರ್ಣಯ)

ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿ ಪಾದಂ ಚ ಚಕ್ಷುಷಾ ।
ಚಕ್ಷುಃ ಶ್ರೋತ್ರೇ ಚ ಮನಸಾ ಮನೋವಾಚಾಂ ಚ ಕರ್ಮಣಾ ॥

ಬುದ್ಧಿಯಿಂದ ಜನನಾಂಗವನ್ನು ಮತ್ತು ಉದರವನ್ನು ರಕ್ಷಿಸಬೇಕು, ಕೈಕಾಲುಗಳನ್ನು ಕಣ್ಣಿನಿಂದ, ಕಣ್ಣುಕಿವಿಗಳನ್ನು ಮನಸ್ಸಿನಿಂದ, ಮನಸ್ಸು ವಾಕ್‌ಗಳನ್ನು ಕರ್ಮದಿಂದ ರಕ್ಷಿಸಬೇಕು ॥

52. ಮಾರ್ಗದಲ್ಲಿ ಯಾರಿಗೆ ದಾರಿಯನ್ನು ಬಿಡಬೇಕು (ಚಾಣಕ್ಯ ನೀತಿ)

ಅಂಧಸ್ಯ ಪಂಥಾ ಬಧಿರಸ್ಯ ಪಂಥಾಃ
ಸ್ತ್ರಿಯಃ ಪಂಥಾಃ ಭಾರವಾಹಸ್ಯ ಪಂಥಾಃ ।

ರಾಜ್ಞಃ ಪಂಥಾ ಬ್ರಾಹ್ಮಣೇನಾ
ಸಮೇತ್ಯ ಸಮೇತ್ಯತು ಬ್ರಾಹ್ಮಣಸ್ಯೇವ ಪಂಥಾಃ ॥

ಮಾರ್ಗದಲ್ಲಿ ಹೋಗುವಾಗ – ಕುರುಡನಿಗೆ, ಕಿವುಡನಿಗೆ, ಮಹಿಳೆಗೆ, ಭಾರವಾದ ಹೊರೆ ಹೊತ್ತವರಿಗೆ, ರಾಜನಿಗೆ, ಬ್ರಾಹ್ಮಣನಿಗೆ, ರಾಜನೂ ಮತ್ತು ಬ್ರಾಹ್ಮಣನೂ ಒಟ್ಟಿಗೆ ಬಂದರೆ ಬ್ರಾಹ್ಮಣನಿಗೆ ಇವರುಗಳಿಗೆ ಮೊದಲು ದಾರಿ ಬಿಡಬೇಕು ॥

53. ಕಲಿಯುಗದ ಕಡೆಯ ಹಂತದಲ್ಲಿ ಜೀವನಶೈಲಿ (ಪರಾಶರ ಸ್ಮೃತಿ)

ಸಪ್ತ ವರ್ಷಾಷ್ಟ ವರ್ಷಶ್ಚ ಸ್ತ್ರೀಯೋ ಗರ್ಭಧರಾ ನೃಪ ।
ದಶ ದ್ವಾದಶ ವರ್ಷಾಣಾಂ ಪುಂಸಾಂ ಪುತ್ರಃ ಪ್ರಜಾಯತೇ ।
ಭವಂತಿ ಷೋಡಶೇ ವರ್ಷೇ ನರಾ ಫಲಿತಿನಃ ಸದಾ ।
ಪರಮಾಯುಷ್ಯ ಭವಿತಾ ತದಾ ವರ್ಷಾಣಿ ಷೋಡಶ ॥

ಕಲಿಯುಗದ ಕಡೆಕಡೆಗೆ, ೭–೮ ವರ್ಷಗಳಲ್ಲಿ ಸ್ತ್ರೀಯರು ಗರ್ಭವನ್ನು ಧರಿಸುವರು, ೧೦–೧೨ ವರ್ಷಗಳಲ್ಲಿ ಗಂಡಸರಿಗೆ ಮಕ್ಕಳು ಹುಟ್ಟುವರು, ೧೬ನೇ ವರ್ಷಕ್ಕೆ ಗಂಡಸರು ಮುದುಕರಾಗುವರು, ಆ ಸಮಯದಲ್ಲಿ ಮನುಷ್ಯರ ಪರಮಾಯುಷ್ಯವೇ ೧೬ ವರ್ಷಗಳು ! ॥

54. ಬ್ರಾಹ್ಮಣ್ಯ ಲಕ್ಷಣ (ಆಚಾರ ನಿರ್ಣಯ)

ಯಸ್ತು ಶೂದ್ರೇ ದಮೇ ಸತ್ಯೇ ಧರ್ಮೇ ಚ ಸತತೋತ್ಥಿತಃ ।
ತಂ ಬ್ರಾಹ್ಮಣಮಹಂ ಮನ್ಯೇ ವೃತ್ತೇ ನ ಹಿ ಭವೇದ್ವಿಜಃ ॥

ಯಾರಲ್ಲಿ ಇಂದ್ರಿಯ ನಿಗ್ರಹ, ಶಕ್ತಿ, ಸತ್ಯವಾದಿತ್ವ, ಧರ್ಮನಿಷ್ಠೆ, ಸಾತ್ವಿಕತೆ ಮುಂತಾದ ಸದ್ಗುಣಗಳು ಇರುವವೋ ಅವನನ್ನೇ ಬ್ರಾಹ್ಮಣನೆಂದು ತಿಳಿಯಬೇಕು । ನಡತೆಯಿಂದಲೇ ಬ್ರಾಹ್ಮಣನೇ ಹೊರತು ಹುಟ್ಟಿನಿಂದಲ್ಲ, ಬ್ರಾಹ್ಮಣ್ಯವೆಂಬುದು ನಡವಳಿಕೆಯ ಸೂಚಕವೇ ಹೊರತು ದೇಹ ಸಂಬಂಧಿತ ಜಾತಿ ಸೂಚಕವಲ್ಲ । ಒಂದು ವೇಳೆ ಶೂದ್ರನಲ್ಲಿಯೇ ಈ ಗುಣಗಳಿದ್ದರೆ ಅವನೇ ಬ್ರಾಹ್ಮಣನು ॥

55. ಆತ್ಮಹತ್ಯಾ ದೋಷವಿಲ್ಲದವರು (ಪರಾಶರ ಸ್ಮೃತಿ)

ಅನುಷ್ಠಾನಾಸಮರ್ಥಸ್ಯ ವಾನಪ್ರಸ್ಥಸ್ಯ ಜೀರ್ಯತಃ ।
ಭೃಗ್ವಗ್ನಿ ಜಲ ಸಂಪಾತೈರ್ದೇಹ ತ್ಯಾಗೋ ವಿಧೀಯತೇ ॥

ಅನುಷ್ಠಾನ ಮಾಡಲು ಸಾಧ್ಯವಿಲ್ಲದಿರುವಾಗ, ವಾನಪ್ರಸ್ಥಾಶ್ರಮವನ್ನು ಹೊಂದಿದವನು, ಪ್ರಪಾತ, ಜಲ, ಅಗ್ನಿಗಳಲ್ಲಿ ದೇಹತ್ಯಾಗ ಮಾಡಿದರೆ ಆತ್ಮಹತ್ಯಾ ದೋಷವಿಲ್ಲ ॥

56. ಧರ್ಮದ ಲಕ್ಷಣ (ಮನುಸ್ಮೃತಿ)

ವೇದೋಕ್ತಃ ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರಃ ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥

ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ ೨ನೇ ಆದ್ಯತೆ । ಶಿಷ್ಟಾಚಾರಕ್ಕೆ ೩ನೇ ಆದ್ಯತೆ, ಅದೂ ಶಾಸ್ತ್ರ ಒಪ್ಪುವಂತಿದ್ದಾಗ ಮಾತ್ರ ॥

57. ಸಂಧ್ಯಾವಂದನೆಯನ್ನು ಯಾವಾಗ ಬಿಟ್ಟರೆ ದೋಷವಿಲ್ಲ (ಪರಾಶರ ಸ್ಮೃತಿ)

ಅತ್ಯಂತ ರೋಗ ಸಂಯುಕ್ತೇ ರಾಜಚೋರ ಭಯಾದಿಷು ।
ಗುರ್ವಗ್ನಿ ದೇವ ಕೃತ್ಯೇಷು ನಿತ್ಯಹಾನೌನ ದೋಷಭಾಕ್ ॥

ದೊಡ್ಡ ಖಾಯಿಲೆಗೆ ತುತ್ತಾದಾಗ, ರಾಜ–ಕಳ್ಳರ ಭಯ ಇದ್ದಾಗ, ಗುರು–ಅಗ್ನಿ–ದೇವತಾ ಕಾರ್ಯಗಳಿದ್ದಾಗ ಸಂಧ್ಯಾದಿ ನಿತ್ಯಕರ್ಮಗಳನ್ನು ಕಡಿಮೆ ಮಾಡಬಹುದು, ಬಿಡುವಹಾಗಿಲ್ಲ ॥

58. ಯಾವಯಾವ ಆಸನಗಳಿಂದ ಎಂತಹ ಲಾಭ (ಆಚಾರ ನಿರ್ಣಯ)

ವಂಶಾಸನೇಷು ದಾರಿದ್ರ್ಯಂ ಪಾಷಾಣೇ ವ್ಯಾಧಿ ಸಂಭವಃ ।
ಧರಣ್ಯಾಂ ದುಃಖ ಸಂಭೂತಿಃ ದೌರ್ಭಾಗ್ಯಂ ಭಿನ್ನದಾರುಜೇ ।
ತೃಣಾಸನೇ ಯಶೋಹಾನಿ ಪಲ್ಲವೇ ಚಿತ್ತವಿಭ್ರಮಃ ।
ಕೃಷ್ಣಾಜಿನೇ ಜ್ಞಾನ ಸಿದ್ಧಿಃ ಮೋಕ್ಷಶ್ರೀಃ ವ್ಯಾಘ್ರಚರ್ಮಣಿ ।
ವಸ್ತ್ರಾಸನೇ ವ್ಯಾಧಿನಾಶಃ ಕಂಬಲೇ ದುಃಖ ಮೋಚನಮ್ ॥

ಬಿದಿರಿನಿಂದ ಮಾಡಿದ ಆಸನದಲ್ಲಿ ಕೂರುವುದರಿಂದ ದಾರಿದ್ರ್ಯವು ಬರುತ್ತದೆ, ಕಲ್ಲಿನ ಆಸನ ಉಪಯೋಗಿಸುವುದರಿಂದ ಖಾಯಿಲೆ ಉಂಟಾಗುತ್ತದೆ । ಭೂಮಿಯಲ್ಲಿ(ನೆಲ) ಕೂರುವುದರಿಂದ ದುಃಖವೂ, ಭಿನ್ನವಾದ ಮರದ ಆಸನವಾದರೆ ದೌರ್ಭಾಗ್ಯವು ಉಂಟಾಗುತ್ತದೆ । ಹುಲ್ಲಿನ ಆಸನವಾದರೆ ಯಶೋಹಾನಿಯು, ಎಲೆಗಳ ಆಸನವಾದರೆ ಮನಸ್ಸಿನ ಚಂಚಲತೆಯೂ । ಕೃಷ್ಣಾಜಿನದ ಆಸನವಾದರೆ ಜ್ಞಾನ ಸಿದ್ಧಿಯೂ, ಹುಲಿಯ ಚರ್ಮವಾದರೆ ಮೋಕ್ಷ ಸಿದ್ಧಿಯೂ । ಬಟ್ಟೆಯ ಆಸನವಾದರೆ ರೋಗ ನಾಶವೂ, ಕಂಬಳಿಯ ಆಸನವಾದರೆ ದುಃಖನಾಶವೂ ಆಗುತ್ತದೆ ॥

59. ಮೈಲಿಗೆಯ(ಅಸ್ಪೃಶ್ಯತ್ವ) ದೋಷವಿಲ್ಲದ ಸನ್ನಿವೇಶಗಳು (ಪರಾಶರ ಸ್ಮೃತಿ)

ತೀರ್ಥೇ ವಿವಾಹೇ ಯಾತ್ರಾಯಾಂ ಸಂಗ್ರಾಮೇ ದೇಶವಿಪ್ಲವೇ ।
ನಗರ ಗ್ರಾಮ ದಾಹೇ ಚ ಅಸ್ಪೃಶ್ಯತ್ವಂ ನ ವಿದ್ಯತೇ ।
ದಾನೇ ವಿವಾಹೇ ಯಜ್ಞೇ ಚ ಮಹೋತ್ಪಾತೇ ರುಜಾಗಮೇ ।
ಆಪದ್ಯಪಿ ಚ ಕಷ್ಟಾಯಾಂ ಸದ್ಯಃ ಶೌಚಂ ವಿಧೀಯತೇ ॥

ತೀರ್ಥಕ್ಷೇತ್ರದಲ್ಲಿ, ವಿವಾಹದಲ್ಲಿ, ಯಾತ್ರೆಯಲ್ಲಿ, ಯುದ್ಧದಲ್ಲಿ, ದೇಶಕ್ಕೆ ತೊಂದರೆ ಬಂದಾಗ । ನಗರ – ಗ್ರಾಮದಲ್ಲಿ ಅಗ್ನಿ ಭಯ ಉಂಟಾದಾಗ, ಅಸ್ಪೃಶ್ಯತೆಯ ದೋಷವಿಲ್ಲ । ದಾನದಲ್ಲಿ, ವಿವಾಹ, ಯಜ್ಞ, ಮಹೋತ್ಪಾತ, ರೋಗ । ಆಪತ್ತು, ತೀವ್ರವಾದ ಕಷ್ಟ ಈ ಸಂದರ್ಭಗಳಲ್ಲಿ ಅಶೌಚವಿದ್ದರೂ ಮೇಲೆ ತಿಳಿಸಿರುವ ಕಾಲಕ್ಕೆ ಶುದ್ಧಿಯುಂಟಾಗುತ್ತದೆ ॥

60. ಹೂ ಪತ್ರೆಗಳು ಅಶುಚಿಯಾಗುವುದು ಹೇಗೆ ? (ಆಚಾರ ನಿರ್ಣಯ)

ಅಧೋವಸ್ತ್ರ ಧೃತಂ ಯಚ್ಚ ಜಲಾಂತಃ ಕ್ಷಾಲಿತಂ ಚ ಯತ್ ।
ದೇವತಾಸ್ತನ್ನಿರ್ಗೃಹ್ಣಂತಿ ಪುಷ್ಪಂ ನಿರ್ಮಾಲ್ಯತಾಂ ಭವೇತ್ ॥

ಅಧೋ(ಕೆಳಮುಖ)ವಸ್ತ್ರದಲ್ಲಿ ಹಾಕಿದ, ನೀರಿನಲ್ಲಿ ತೊಳೆದಿರುವ, ಹೂಪತ್ರೆಗಳು ಅಪವಿತ್ರವಾಗಿ ದೇವತಾರಾಧನೆಗೆ ಅಯೋಗ್ಯವಾಗುವುವು ॥

61. ದೀಪದ ಫಲ (ಆಚಾರ ನಿರ್ಣಯ)

ದೇವಾಗಾರೇ ದ್ವಿಜಾತೀನಾಂ ದೀಪಂ ದತ್ವಾ ಚತುಷ್ಪಥೇ ।
ಮೇಧಾವೀ ಜ್ಞಾನ ಸಂಪನ್ನಶ್ಚಕ್ಷುಷ್ಮಾನ್ ಜಾಯತೇ ನರಃ ॥

ದೇವಾಲಯದಲ್ಲಿ, ಬ್ರಾಹ್ಮಣಬೀದಿಯಲ್ಲಿ, ೪ ರಸ್ತೆಗಳು ಕೂಡುವಲ್ಲಿ । ದೀಪವನ್ನು ಹಚ್ಚಿದರೆ ಒಳ್ಳೆಯ ದೃಷ್ಟಿಯುಳ್ಳವನೂ, ಜ್ಞಾನಿಯೂ ಆಗುವನು ॥

62. ಯಾರು ಯಾರು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು (ಆಚಾರ ನಿರ್ಣಯ)

ಪಿತಾಪುತ್ರೌ ಸಹಾಸೀತಾಂ ದ್ವೌ ವಿಪ್ರೌ ಕ್ಷತ್ರಿಯಾವಪಿ ।
ವೃದ್ಧೌ ವೈಶ್ಯೌ ಚ ಶೂದ್ರೌ ಚ ನ ತ್ವನ್ಯಾವಿತರೇತರಮ್ ॥

ತಂದೆ–ಮಗ, ಇಬ್ಬರು ಬ್ರಾಹ್ಮಣರು, ಇಬ್ಬರು ಕ್ಷತ್ರಿಯರು । ಇಬ್ಬರು ವೃದ್ಧರು, ಇಬ್ಬರು ವೈಶ್ಯರು, ಇಬ್ಬರು ಶೂದ್ರರು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು ॥

63. ಭಗವಂತನ ಆದೇಶ (ಭಾಗವತ)

ಶ್ರುತಿ ಸ್ಮೃತೀಮಮೈವಾಜ್ಞೇ ಯಸ್ತದುಲ್ಲಂಘ್ಯ ವರ್ತತೇ ।
ಆಜ್ಞಾಛೇದೀ ಮಮದ್ವೇಷೀ ಮದ್ಭಕ್ತೋಽಪಿ ನ ವೈಷ್ಣವಃ ॥

ಶ್ರುತಿ ಅಂದರೆ ವೇದಗಳು ಮತ್ತು ಸ್ಮೃತಿ ಅಂದರೆ ಧರ್ಮಶಾಸ್ತ್ರ, ಪುರಾಣಾದಿಗಳು ಇವುಗಳಲ್ಲಿರುವುದು ನನ್ನ ಆಜ್ಞೆ । ಇವನ್ನು ಯಾರು ಉಲ್ಲಂಘಿಸುವರೋ ಅವರು ನನ್ನ ಭಕ್ತರಾದರೂ ವೈಷ್ಣವರಾಗುವುದಿಲ್ಲ(ಅವರನ್ನು ನಾನು ಕ್ಷಮಿಸುವುದಿಲ್ಲ) ॥

64. ಸ್ತ್ರೀಯರ ಸಾಮರ್ಥ್ಯ (ಸುಭಾಷಿತ)

ಉಶನಾವೇದ ಯಚ್ಛಾಸ್ತ್ರಂ ಯಚ್ಚವೇದ ಬೃಹಸ್ಪತಿಃ ।
ಸ್ವಭಾವೇನೈವ ತಚ್ಛಾಸ್ತ್ರಂ ಸ್ತ್ರೀ ಬುದ್ಧೌ ಸುಪ್ರತಿಷ್ಠಿತಮ್ ॥

ಶುಕ್ರನು ಎಷ್ಟು ಶಾಸ್ತ್ರಗಳನ್ನು ತಿಳಿದಿರುವನೋ, ದೇವಗುರುವಾದ ಬೃಹಸ್ಪತಿಯು ಎಷ್ಟನ್ನು ತಿಳಿದಿರುವನೋ । ಅಷ್ಟನ್ನೂ ಸಹ ಹೆಂಗಸರು ಸ್ವಾಭಾವಿಕವಾಗಿಯೇ ತಿಳಿದಿರುತ್ತಾರೆ ॥

65. ಗಾಯತ್ರೀ ಮಂತ್ರದ ಶಕ್ತಿ–ಮಹತ್ವ (ಬ್ರಹ್ಮವೈವರ್ತ ಪುರಾಣ)

ನೋಪತಿಷ್ಠತಿ ಯಃ ಪೂರ್ವಾಂ ನೋಪಾಸ್ತೇ ಯಶ್ಚ ಪಶ್ಚಿಮಾಮ್ ।
ಸ ಶೂದ್ರವದ್ಬಹಿಷ್ಕಾರ್ಯಃ ಸರ್ವಸ್ಮಾದ್ದ್ವಿಜ ಕರ್ಮಣಃ ॥

ಯಾರು ಬೆಳಗಿನ ಮತ್ತು ಸಂಜೆಯ ಸಂಧ್ಯಾಕರ್ಮಗಳನ್ನು ಮಾಡುವುದಿಲ್ಲವೋ । ಅವನನ್ನು ಬ್ರಾಹ್ಮಣೋಚಿತವಾದ ಎಲ್ಲಾ ಕರ್ಮಗಳಿಂದಲೂ ಬಹಿಷ್ಕಾರ ಹಾಕಿ ಶೂದ್ರನಂತಿಡಬೇಕು ॥

ಯಾವಜ್ಜೀವನ ಪರ್ಯಂತಂ ಯಸ್ತ್ರಿಸಂಧ್ಯಾಂ ಕರೋತಿ ಚ ।
ಸ ಚ ಸೂರ್ಯ ಸಮೋ ವಿಪ್ರಸ್ತೇಜಸಾ ತಪಸಾ ಸದಾ ॥

ಜೀವಿತಕಾಲ ಪೂರ್ತಿಯಾಗಿ ಯಾರು ತ್ರಿಸಂಧ್ಯಾ ಕರ್ಮಗಳನ್ನು ಆಚರಿಸುವರೋ । ಆ ಬ್ರಾಹ್ಮಣರು ತೇಜಸ್ಸು, ತಪಸ್ಸಿನಲ್ಲಿ ಸೂರ್ಯನಿಗೆ ಸಮಾನರಾಗಿ ಸಕಲ ಪಾಪಗಳಿಂದ ಮುಕ್ತರಾಗುವರು ॥

ನ ಗೃಹ್ಣಂತಿ ಸುರಾಃ ಪೂಜಾಂ ಪಿತರಃ ಪಿಂಡ ತರ್ಪಣಂ ।
ಸ್ವೇಚ್ಛಯಾ ಚ ದ್ವಿಜಾತೇಶ್ಚ ತ್ರಿಸಂಧ್ಯರಹಿತಸ್ಯ ಚ ॥

ತ್ರಿಸಂಧ್ಯೆಯನ್ನು ಆಚರಿಸದೇ ಸ್ವೇಚ್ಛೆಯಾಗಿರುವ ಮನುಷ್ಯರು ಅರ್ಪಿಸಿದ ಪೂಜೆಯನ್ನು ದೇವತೆಗಳು ಸ್ವೀಕರಿಸುವುದಿಲ್ಲ । ಅವರು ಕೊಟ್ಟ ಪಿಂಡ, ತರ್ಪಣಗಳನ್ನು ಪಿತೃಗಳೂ ಸ್ವೀಕರಿಸುವುದಿಲ್ಲ ॥

66. ಬ್ರಾಹ್ಮಣರು ಯಾವಾಗ ತಮ್ಮ ಶಕ್ತಿ–ತೇಜಸ್ಸನ್ನು ಕಳೆದುಕೊಳ್ಳುವುದು (ಬ್ರಹ್ಮವೈವರ್ತ ಪುರಾಣ)

ವಿಷ್ಣುಮಂತ್ರ ವಿಹೀನಶ್ಚ ತ್ರಿಸಂಧ್ಯ ರಹಿತೋ ದ್ವಿಜಃ ।
ಏಕಾದಶೀ ವಿಹೀನಶ್ಚ ವಿಷಹೀನೋ ಯಥೋರಗಃ ॥

ವಿಷ್ಣುಮಂತ್ರವನ್ನು ಜಪಿಸದ, ತ್ರಿಸಂಧ್ಯೆಯನ್ನು ಆಚರಿಸದ । ಏಕಾದಶೀ ವ್ರತವನ್ನಾಚರಿಸದ ದ್ವಿಜನು ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

ಶವದಾಹೀ ಚ ಶೂದ್ರಾಣಾಂ ಯೋ ವಿಪ್ರೋ ವೃಷಲೀಪತಿಃ ।
ಶೂದ್ರಾಣಾಂ ಸೂಪಕಾರಶ್ಚ ವಿಷಹೀನೋ ಯಥೋರಗಃ ॥

ಬ್ರಾಹ್ಮಣನಾಗಿ ಹುಟ್ಟಿ ಶೂದ್ರರ ಶವಸಂಸ್ಕಾರ ಮಾಡುವವನೂ, ಶೂದ್ರಸ್ತ್ರೀಯನ್ನು ಮದುವೆಯಾಗುವವನೂ । ಶೂದ್ರರ ಮನೆಯಲ್ಲಿ ಅಡುಗೆ ಮಾಡುವವನೂ, ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

ಸೂರ್ಯೋದಯೇ ಚ ದ್ವಿರ್ಭೋಜೀ ಮತ್ಸ್ಯಭೋಜೀ ಚ ಯೋ ದ್ವಿಜಃ ।
ಶಿಲಾಪೂಜಾದಿ ರಹಿತೋ ವಿಷಹೀನೋ ಯತೋರಗಃ ॥

ಹಗಲು ೨ ಸಲ ಊಟಮಾಡುವವನೂ, ಮೀನನ್ನು ತಿನ್ನುವವನೂ । ಶಿವಲಿಂಗ–ಸಾಲಿಗ್ರಾಮಾದಿ ಶಿಲಾಪೂಜೆ ಮಾಡದಿರುವ ಬ್ರಾಹ್ಮಣನು ವಿಷವಿಲ್ಲದ ಹಾವಿನಂತೆ ದುರ್ಬಲನಾಗುವನು ॥

67. ಯಶಸ್ಸು–ಸುಖ ಲಭಿಸುವ ಬಗೆ (ಮನುಸ್ಮೃತಿ)

ಶ್ರುತಿ ಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ ।
ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಮ್ ॥

ಶ್ರುತಿ(ವೇದ) ಸ್ಮೃತಿ(ಶಾಸ್ತ್ರ)ಗಳಲ್ಲಿ ಹೇಳಿರುವಂತೆ ವರ್ತಿಸಿದರೆ । ಇಹ–ಪರಗಳಲ್ಲಿ ಕೀರ್ತಿ–ಸುಖಗಳು ನಿಶ್ಚಯವಾಗಿ ಲಭಿಸುವವು ॥

68. ಊಟದಲ್ಲಿ ಪಂಕ್ತಿ ಬೇರೆ ಮಾಡುವ ರೀತಿ (ಆಚಾರ ನಿರ್ಣಯ)

ಅಗ್ನಿನಾ ಭಸ್ಮನಾ ಚೈವ ಸ್ಥಂಭೇನ ಸಲಿಲೇನ ವಾ ।
ದ್ವಾರೇಣ ಚೈವ ಮಾರ್ಗೇಣ ಪಂಕ್ತಿ ಭೇದೋಬುಧೈಃ ಸ್ಮೃತಃ ॥

ಊಟದಲ್ಲಿ ಪಂಕ್ತಿ ವ್ಯತ್ಯಾಸವಾಗಬೇಕಾದರೆ । ನೀರಿನಿಂದ–ವಿಭೂತಿಯಿಂದ–ಕಂಭದಿಂದ–ದ್ವಾರದಿಂದ ಪಂಕ್ತಿಭೇದವನ್ನು ಹೇಳಿದೆ ॥

69. ಮಂಗಳಕರವಾದ 8 ವಸ್ತುಗಳು (ಸುಭಾಷಿತ)

ದರ್ಪಣಂ ಪೂರ್ಣಕಲಶಂ ಕನ್ಯಾ ಸುಮನಸೋಕ್ಷತಾಃ ।
ದೀಪಮಾಲಾ ಧ್ವಜಂ ಲಾಜಾಸ್ಸಂಪ್ರೋಕ್ತಂ ಚ ಅಷ್ಟಮಂಗಲಮ್ ॥

ಕನ್ನಡಿ, ಪೂರ್ಣಕಲಶ, ಕನ್ಯೆ, ಸುಮಂಗಲಿಯರು, ಅಕ್ಷತೆ ॥ ದೀಪಗಳು, ಧ್ವಜ, ಅರಳು ಇವು ಮಂಗಳಕರ ವಸ್ತುಗಳು ॥

70. ಜ್ಞಾನಿಗಳ ದೃಷ್ಟಿಯಲ್ಲಿ ಪ್ರಪಂಚ (ಸುಭಾಷಿತ)

ಬುದ್ಧತತ್ವಸ್ಯ ಲೋಕೋಽಯಂ ಜಡೋನ್ಮತ್ತ ಪಿಶಾಚವತ್ ।
ಬುದ್ಧತತ್ವೋಽಪಿ ಲೋಕಸ್ಯ ಜಡೋನ್ಮತ್ತ ಪಿಶಾಚವತ್ ॥

ತತ್ವವನ್ನು ತಿಳಿದ ಜ್ಞಾನಿಗೆ, ಈ ಪ್ರಪಂಚವು ಜಡ–ಉನ್ಮತ್ತ–ಪಿಶಾಚದ ಹಾಗೆ ಕಾಣುತ್ತದೆ । ಪ್ರಪಂಚದಲ್ಲಿರುವ ಮನುಷ್ಯರಿಗೆ ಜ್ಞಾನಿಗಳನ್ನು ನೋಡಿದರೂ ಜಡ–ಉನ್ಮತ್ತ–ಪಿಶಾಚಿಗಳಂತೆಯೇ ತೋರುತ್ತಾರೆ (ಆದರೆ ಜ್ಞಾನಿಗಳ ಅಭಿಪ್ರಾಯವೇ ಸತ್ಯ, ಸಾಮಾನ್ಯ ಜನರ ಅಭಿಪ್ರಾಯವು ಕೇವಲ ಭ್ರಮೆಯಷ್ಟೆ) ॥

71. ವೇದಗಳ ಹೆಚ್ಚುಗಾರಿಕೆ (ಜಾಬಾಲ ಸ್ಮೃತಿ)

ಶ್ರುತಿ ಸ್ಮೃತಿ ವಿರೋಧೇತು ಶ್ರುತಿರೇವ ಗರೀಯಸಿ ।

ಅವಿರೋಧೇ ಸದಾ ಕಾರ್ಯಂ ಸ್ಮಾರ್ತಂ ವೈದಿಕ ವತ್ಸದಾ ॥

ವೇದ ಹಾಗೂ ಪುರಾಣಾದಿ ಇತರ ಗ್ರಂಥಗಳಲ್ಲಿ ಪರಸ್ಪರ ಸಾಕ್ಷಾತ್ ವಿರೋಧ ಕಂಡುಬಂದಾಗ, ವೇದವೇ ಮುಖ್ಯವಾಗುತ್ತದೆ । ವಿರೋಧವಿಲ್ಲದಾಗ ಸ್ಮಾರ್ತಕರ್ಮಗಳನ್ನೂ ವೈದಿಕ ಕರ್ಮಗಳಂತೆಯೇ ಮಾಡಬಹುದು ॥

72. ಸ್ಮೃತಿ(ಧರ್ಮಶಾಸ್ತ್ರ)ಕಾರರು (ಯಾಜ್ಞವಲ್ಕ್ಯ ಸ್ಮೃತಿ)

ಮನ್ವತ್ರಿ ವಿಷ್ಣು ಹಾರೀತ ಯಾಜ್ಞವಲ್ಕ್ಯೋಶನಾಂಗಿರಾಃ ।

ಯಮಾಪಸ್ತಂಬ ಸಂವರ್ತಾಃ ಕಾತ್ಯಾಯನ ಬೃಹಸ್ಪತೀ ।

ಪರಾಶರ ವ್ಯಾಸ ಶಂಖಲಿಖಿತೌ ದಕ್ಷ ಗೌತಮೌ ।

ಶಾತಾತಪೋ ವಸಿಷ್ಠಶ್ಚ ಧರ್ಮಶಾಸ್ತ್ರ ಪ್ರಯೋಜಕಾಃ ॥

ಮನು – ಅತ್ರಿ – ವಿಷ್ಣು – ಹಾರೀತ – ಯಾಜ್ಞವಲ್ಕ್ಯ – ಉಶನಾ – ಆಂಗಿರಸ । ಯಮ – ಆಪಸ್ತಂಬ – ಸಂವರ್ತ – ಕಾತ್ಯಾಯನ – ಬೃಹಸ್ಪತಿ । ಪರಾಶರ – ವ್ಯಾಸ – ಶಂಖ – ಲಿಖಿತ – ದಕ್ಷ – ಗೌತಮ । ಶಾತಾತಪ – ವಸಿಷ್ಠ ಇವರುಗಳು ಧರ್ಮಶಾಸ್ತ್ರಕಾರರು ॥

73. ಯಾವ ರೀತಿ ದಾನ ಮಾಡಬೇಕು (ಪರಾಶರ ಸ್ಮೃತಿ)

ಅಧಮಂ ಯಾಚಮಾನಾಯ ಸೇವಾದಾನಂ ತು ನಿಷ್ಫಲಂ ।

ಜಿತೋಧರ್ಮೋಽಹ್ಯ ಧರ್ಮೇಣ ಸತ್ಯಂ ಚೈವಾನೃತೇನ ಚ ॥

ಕೊಡುವವರೇ ತೆಗೆದುಕೊಳ್ಳುವವರ ಬಳಿಹೋಗಿ ಕೊಡುವ ದಾನವು ಅತ್ಯಂತ ಶ್ರೇಷ್ಠ, ಕರೆದು ಕೊಟ್ಟರೆ ಮಧ್ಯಮ । ಬೇಡಿದಾಗ ಕೊಟ್ಟರೆ ಅಧಮವು, ಕೂಲಿಯಾಗಿ ಕೊಟ್ಟರೆ ಪುಣ್ಯವಿಲ್ಲ ॥

74. ಅತಿಥಿ ಯಾರು (ಪರಾಶರ ಸ್ಮೃತಿ)

ದೂರಾಚ್ಚೋಪಗತಂ ಶ್ರಾಂತಂ ವೈಶ್ವದೇವ ಉಪಸ್ಥಿತಂ ।
ಅತಿಥಿಂ ತಂ ವಿಜಾನೀಯಾನ್ನಾತಿಥಿಃ ಪೂರ್ವಮಾಗತಃ ॥

ಬೇರೆಕಡೆಯಿಂದ ಬಂದು, ಬಳಲಿದವನಾಗಿ ಮಧ್ಯಾಹ್ನದ(ವೈಶ್ವದೇವದ ಹೊತ್ತಿಗೆ) ಸಮಯಕ್ಕೆ ಮನೆಗೆ ಬಂದರೆ । ಅಂತಹವನು ಮಾತ್ರ ಅತಿಥಿಯು, ಮೊದಲು ಬಂದು ಊಟಕ್ಕೆ ಕಾಯುತ್ತಿದ್ದರೆ ಅವನು ಅತಿಥಿಯಲ್ಲ ॥

75. ಸೂತಕದ ಆಚರಣೆ ಯಾವಾಗ ಇಲ್ಲ (ಪರಾಶರ ಸ್ಮೃತಿ)

ಭೃಗ್ವಗ್ನಿಮರಣೇ ಚೈವ ದೇಶಾಂತರ ಮೃತೇ ತಥಾ ।
ಬಾಲೇ ಪ್ರೇತೇ ಚ ಸಂನ್ಯಸ್ತೇ ಸದ್ಯಃ ಶೌಚಂ ವಿಧೀಯತೇ ॥

ಆತ್ಮಹತ್ಯೆ ಮಾಡಿಕೊಂಡವನ, ದೇಶಾಂತರದಲ್ಲಿ ಸತ್ತವನ, ಮಗುವಿನ, ಸಂನ್ಯಾಸಿಯ ಇವರುಗಳ ಸೂತಕಾಚರಣೆ ಬೇಡ ॥

ದೇಶಾಂತರಮೃತಃ ಕಶ್ಚಿತ್ ಸಗೋತ್ರಃ ಶ್ರೂಯತೇ ಯದಿ ।
ನ ತ್ರಿರಾತ್ರಮಹೋರಾತ್ರಂ ಸದ್ಯಃ ಸ್ನಾತ್ವಾ ಶುಚಿರ್ಭವೇತ್ ॥

ದೂರ ಸ್ಥಳದಲ್ಲಿ ಸತ್ತ ಸುದ್ದಿ ಕೇಳಿದಾಗ ಸ್ವಗೋತ್ರದವರಿಗೆ ಬರೀ ಸ್ನಾನವೇ ಸಾಕು, ಸೂತಕಾಚರಣೆ ಇಲ್ಲ ॥

ಬ್ರಹ್ಮಚಾರೀ ಗೃಹೇ ಯೇಷಾಂ ಹೂಯತೇ ಚ ಹುತಾಶನಃ ।
ಸಂಪರ್ಕಂ ಚೇನ್ನ ಕುರ್ವೀತ ನ ತೇಷಾಂ ಸೂತಕಂ ಭವೇತ್ ॥

ಅಗ್ನಿಕಾರ್ಯ ಮಾಡುತ್ತಾ ಮನೆಯಲ್ಲಿರುವ ಬ್ರಹ್ಮಚಾರಿಗೆ ಮಾತ್ರ ಸೂತಕವು ಇಲ್ಲ ॥

76. ಎಲ್ಲರಿಗಿಂತ ಮೊದಲೇ ಊಟ ಮಾಡಬಹುದಾದವರು (ಪರಾಶರ ಸ್ಮೃತಿ)

ಸುವಾಸಿನೀಃ ಕುಮಾರೀಶ್ಚ ರೋಗಿಣೋ ಗರ್ಭಿಣೀಃ ಸ್ತ್ರಿಯಃ ।
ಅತಿಥಿಭ್ಯೋಗ್ರ ಏವೈನಾನ್ ಭೋಜಯೇದವಿಚಾರಯನ್ ॥

ಸುವಾಸಿನೀ, ಕುಮಾರೀ, ರೋಗಿಗಳು, ಗರ್ಭಿಣಿಯರು । ಇವರುಗಳು ಅತಿಥಿಗಳ ಅಥವಾ ಬ್ರಾಹ್ಮಣರ ಊಟಕ್ಕೂ ಮೊದಲೇ ಊಟ ಮಾಡಬಹುದು ॥

77. ಬ್ರಾಹ್ಮಣನು ಕೃಷಿಯನ್ನು ಮಾಡಬಹುದೇ ? (ಪರಾಶರ ಸ್ಮೃತಿ)

ಅತ್ಯಾಪದಿ ಸ್ವಪಿತ್ರೋರ್ವೈ ಪಾಲನಾಯ ಸ್ವಯಂ ಯದಿ ।
ಯಃ ಕರೋತಿ ಕೃಷಿಂ ಸೋಪಿ ಹಲಾಗ್ರಂ ನ ಸ್ಪೃಶೇತ್ ದ್ವಿಜಃ ॥

ಬ್ರಾಹ್ಮಣನು, ಜೀವನಕ್ಕೇ ತೀರ ಕಷ್ಟವಾದಾಗ ಮಾತ್ರ ಕೃಷಿಯನ್ನು ಮಾಡಬಹುದು । ಆದರೆ ನೇಗಿಲನ್ನು ಹಿಡಿದು ಉಳಬಾರದು ॥

78. ಹೂ, ಗಂಧ, ತುಳಸಿಗಳನ್ನು ಎಲ್ಲಿ ಧರಿಸಬಾರದು ? (ಆಚಾರ ನಿರ್ಣಯ)

ಕರ್ಣೇ ಪುಷ್ಪಂ ಗಳೇ ಗಂಧಂ ಶಿಖಾಯಾಂ ತುಳಸೀದಳಂ ।

ಮೋಹಾತ್ ಧಾರಯತೇ ವಿಪ್ರಃ ಸ ವೈ ಶೂದ್ರೋ ನ ಸಂಶಯಃ ॥

ಕಿವಿಯಲ್ಲಿ ಹೂವನ್ನು – ಕಂಠದಲ್ಲಿ ಗಂಧವನ್ನು – ಶಿಖೆ(ಜುಟ್ಟು)ಯಲ್ಲಿ ತುಳಸಿಯನ್ನು । ಯಾರು ಧರಿಸುತ್ತಾರೋ ಅವರು ನಿಸ್ಸಂಶಯವಾಗಿ ಶೂದ್ರಸಮಾನರಾಗುತ್ತಾರೆ(ಅಜ್ಞಾನಿಗಳಾಗುತ್ತಾರೆ) । (ಹೂವನ್ನು ತಲೆಯಲ್ಲಿ, ತುಳಸಿಯನ್ನು ಕಿವಿಯಲ್ಲಿ, ಗಂಧವನ್ನು ಹಣೆಯಲ್ಲಿ ಧರಿಸಬೇಕು) ॥

79. ಯಾವ ಯಾವ ವಸ್ತುಗಳನ್ನು ಭೂಮಿಯಲ್ಲಿ ಇಡಬಾರದು (ಆಚಾರ ನಿರ್ಣಯ)

ದ್ವಿಜಪೃಷ್ಠಂ ಶಂಖಿಪೃಷ್ಠಂ ನಾರೀಸ್ತನಮಂಡಲಮ್ ।

ಪುಸ್ತಕಂ ಘಂಟಾ ಚ ರುದ್ರಾಕ್ಷಂ ನ ಸ್ಥಾತವ್ಯಂ ಕದಾ ಭುವಿ ॥

ಬ್ರಾಹ್ಮಣರು ಯಾವಾಗಲೂ ಆಸನವಿಲ್ಲದೇ ನೆಲದಲ್ಲಿ ಕೂರಬಾರದು – ಶಂಖವನ್ನು ನೆಲದಲ್ಲಿ(ಪೀಠವಿಲ್ಲದೇ) ಇಡಬಾರದು – ಹೆಂಗಸರು ನೇರವಾಗಿ ನೆಲಕ್ಕೆ ಸ್ತನಗಳನ್ನು ತಗುಲಿಸಬಾರದು । ಹಾಗೆಯೇ ಪುಸ್ತಕ – ಘಂಟೆ – ರುದ್ರಾಕ್ಷಿ ಇವುಗಳನ್ನೂ ಸಹ ಯಾವುದೇ ಸಂದರ್ಭಗಳಲ್ಲೂ ಕೂಡ ನೆಲದಲ್ಲಿ ಇಡಬಾರದು, ಇಟ್ಟರೆ ಇವೆಲ್ಲವೂ ಅವುಗಳ ಸ್ವಾಭಾವಿಕ ಶಕ್ತಿಯನ್ನು, ಸೌಂದರ್ಯವನ್ನು, ತೇಜಸ್ಸನ್ನು, ಮಹತ್ವವನ್ನು ಕಳೆದುಕೊಳ್ಳುತ್ತವೆ ॥

80. ಯಾವ ಯಾವ ಸಂದರ್ಭಗಳಲ್ಲಿ ಯಾವ ರೀತಿಯ ನಮಸ್ಕಾರ ಮಾಡಬೇಕು (ಆಚಾರ ನಿರ್ಣಯ)

ದೇವಾನ್ ನದೀನ್ ಸಭಾಂ ವೃಕ್ಷಾನ್ ಅಗ್ನೀನಪಿ ತಥಾ ಯತೀನ್ ।
ದಂಡವತ್ ಪ್ರಣಮೇತ್ ಭೂಮೌ ನಾಭಿವಾದನಮಾಚರೇತ್ ॥

ದೇವಾಲಯಗಳಲ್ಲಿ – ನದಿಗೆ – ಸಭೆಗೆ – ದೇವವೃಕ್ಷಗಳಿಗೆ – ಯಜ್ಞೇಶ್ವರನಿಗೆ (ಅಗ್ನಿ) – ಯತಿ(ಸಂನ್ಯಾಸಿ)ಗಳಿಗೆ । ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು, ಅಭಿವಾದನ ನಮಸ್ಕಾರ ಮಾಡಬಾರದು ॥

81. ಯಾವಾಗ ಗೊತ್ತಿದ್ದರೂ ಉತ್ತರಿಸಬಾರದು (ಮನುಸ್ಮೃತಿ)

ನಾಪೃಷ್ಟಃ ಕಸ್ಯಚಿದ್ಬ್ರೂಯಾತ್ ನ ಚಾನ್ಯಾಯೇನ ಪೃಚ್ಛತಃ ।
ಜಾನನ್ನಪಿ ಹಿ ಮೇಧಾವೀ ಜಡವಲ್ಲೋಕ ಆಚರೇತ್ ॥

ತನ್ನನ್ನು ಕೇಳದಿರುವಾಗ ನಾವಾಗಿಯೇ ಸಲಹೆ ಕೊಡಬಾರದು, ಅಹಂಕಾರದಿಂದ ಕೇಳುವವನಿಗೆ ಉತ್ತರಿಸಬಾರದು । ವಿದ್ಯಾವಂತನು (ಮೇಧಾವಿಯು/ಜ್ಞಾನಿಯು) ಅನೇಕ ವಿಷಯಗಳನ್ನು ಬಲ್ಲವನಾಗಿದ್ದರೂ ಪ್ರಪಂಚದಲ್ಲಿ ಇಂತಹ ಸಂದರ್ಭಗಳಲ್ಲಿ ದಡ್ಡರಂತೆ ಮೌನವಾಗಿರಬೇಕು ॥

82. ಜನ್ಮಜನ್ಮಾಂತರಕ್ಕೂ ಬೇಡವಾದದ್ದು (ಶಂಕರಾಚಾರ್ಯ ಕೃತ ಅಪರಾಧ ಕ್ಷಮಾಪಣ ಸ್ತೋತ್ರ)

ಪೌರೋಹಿತ್ಯಂ ರಜನಿಚರಿತಂ ಗ್ರಾಮಣಿತ್ವಂ ನಿಯೋಗೋ ।
ಮಾಠಾಪತ್ಯಂಹ್ಯನೃತವಚನಂ ಸಾಕ್ಷಿವಾದಃ ಪರಾನ್ನಮ್ ।

ಬ್ರಹ್ಮದ್ವೇಷಃ ಖಲಜನರತಿಃ ಪ್ರಾಣಿನಾಂ ನಿರ್ದಯತ್ವಂ ।
ಮಾ ಭೂದ್ದೇವಂ ಮಮ ಪಶುಪತೇ ಜನ್ಮಜನ್ಮಾಂತರೇಽಪಿ ॥

ಹೇ ಪರಮೇಶ್ವರ – ಪೌರೋಹಿತ್ಯ, ರಾತ್ರಿ ಸಂಚಾರ, ಗ್ರಾಮಾಧಿಕಾರ, ದಾಸ್ಯ । ಮಠಾಧಿಪತಿಯ ಕೆಲಸ, ಸುಳ್ಳು ಹೇಳುವುದು, ಸಾಕ್ಷಿಯಾಗಿ ನುಡಿಯುವುದು, ಪರಾನ್ನ, ಬ್ರಾಹ್ಮಣದ್ವೇಷ, ದುಷ್ಟರ ಸ್ನೇಹ, ಪ್ರಾಣಿಗಳಲ್ಲಿ ನಿರ್ದಯೆ, ಇವುಗಳನ್ನು ನನಗೆ ಜನ್ಮಜನ್ಮಾಂತರಕ್ಕೂ ದೊರಕಿಸಬೇಡ (ಅಂತರಾರ್ಥ ಹೀಗಿದೆ – ಇವೆಲ್ಲವೂ ಕಾಲಾನಂತರದಲ್ಲಿ ದುರುಪಯೋಗವಾಗುತ್ತವೆ ಎಂಬುದು) ॥

83. ಪ್ರಾಣ ಹೋಗುವ ಕಡೇ ಕ್ಷಣದ ಅನುಭವ (ಗರುಡಪುರಾಣ)

ತಸ್ಮಿನ್ನಂತಕ್ಷಣೇ ತಾರ್ಕ್ಷ್ಯ ದೈವೀದೃಷ್ಟಿಃ ಪ್ರಜಾಯತೇ ।
ಏಕೀಭೂತಂ ಜಗತ್ಸರ್ವಂ ನ ಕಿಂಚಿದ್ವಕ್ತುಮೀಯತೇ ॥

ಎಲೈ ಗರುಡನೇ, ಅಂತ್ಯ ಸಮಯದಲ್ಲಿ ಮನುಷ್ಯನಿಗೆ ದಿವ್ಯದೃಷ್ಟಿಯು ಉತ್ಪನ್ನವಾಗುತ್ತದೆ । ಇಹ–ಪರಲೋಕ, ಪ್ರಪಂಚ ಒಂದೇ ಎಂಬುವ ಹಾಗೆ ಅನಿಸುತ್ತದೆ । ಇವೆಲ್ಲವನ್ನೂ ಹೇಳಬೇಕೆನಿಸಿದರೂ ಸಹ ಮಾತನಾಡಲು ಆಗುವುದಿಲ್ಲ ॥

84. ಸತ್ತಮೇಲೆ, ಪಿಂಡ–ತರ್ಪಣಗಳನ್ನು ಕೊಡದಿದ್ದರೆ ಏನಾಗುತ್ತದೆ ? (ಗರುಡಪುರಾಣ)

ಭವಂತಿ ಪ್ರೇತರೂಪಾಸ್ತೇ ಪಿಂಡದಾನ ವಿವರ್ಜಿತಾಃ ।
ಆಕಲ್ಪಂ ನಿರ್ಜನಾರಣ್ಯೇ ಭ್ರಮಂತಿ ಬಹುದುಃಖಿತಾಃ ॥

ಮರಣದ ನಂತರ, ಪುತ್ರಾದಿಗಳು ಪಿಂಡದಾನ ಕೊಡದಿದ್ದರೆ, ಪ್ರೇತರೂಪದಿಂದ ಸಾವಿರಾರು ವರ್ಷಗಳು ನಿರ್ಜನ ಕಾಡಿನಲ್ಲಿ ಬಹಳ ದುಃಖಿತನಾಗಿ ಮೃತ ವ್ಯಕ್ತಿಯು ಸುತ್ತುತ್ತಾನೆ ॥

ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ ।
ಅಭುಕ್ತ್ವಾ ಯಾತನಾಂ ಜಂತುರ್ಮಾನುಷ್ಯಂ ಲಭತೇ ನ ಹೀ ॥

ಸಾವಿರಾರು ವರ್ಷಗಳು ಕಷ್ಟಗಳನ್ನು ಅನುಭವಿಸಿದರೂ ಸಹ, ಕಷ್ಟಗಳು ನಾಶವಾಗುವುದಿಲ್ಲ (ಪಿಂಡಾದಿಗಳನ್ನು ಕೊಡದಿದ್ದರೆ) । ಪಾಪಿಯು ನರಕ ಯಾತನೆಗಳನ್ನು ಅನುಭವಿಸಿದರೂ ಮನುಷ್ಯ ಜನ್ಮವು ಎಂದೂ ಪ್ರಾಪ್ತವಾಗುವುದಿಲ್ಲ ॥

ಅತೋ ದದ್ಯಾತ್ ಸುತಃ ಪಿಂಡಾನ್ ದಿನೇಷು ದಶಸು ದ್ವಿಜ ।
ಪ್ರತ್ಯಹಂ ತೇ ವಿಭಜ್ಯಂತೇ ಚತುರ್ಭಾಗೈಃ ಖಗೋತ್ತಮ ॥

ಈ ಕಾರಣದಿಂದಲೇ ಎಲ್ಲೈ ಗರುಡನೇ, ವ್ಯಕ್ತಿಯ ಮರಣದ ನಂತರ ಮಕ್ಕಳು ೧೦ ದಿವಸ ಪಿಂಡದಾನ ಮಾಡಿದರೆ, ಅವು ಪ್ರತಿದಿನ ೪ ಭಾಗಗಳಾಗಿ ವಿಭಾಗಿಸಲ್ಪಡುತ್ತವೆ ॥

ಅಹೋರಾತ್ರೈಶ್ಚ ನವಭಿಃ ಪ್ರೇತಃ ಪಿಂಡಮವಾಪ್ನುಯಾತ್ ।
ಜಂತುರ್ನಿಷ್ಪನ್ನ ದೇಹಶ್ಚ ದಶಮೇ ಬಲಮವಾಪ್ನುಯಾತ್ ॥

ಒಂಭತ್ತು ದಿನಗಳು ಪಿಂಡದಾನ ಕೊಡುವುದರಿಂದ ಪ್ರೇತಕ್ಕೆ 'ಪಿಂಡಜ' ಶರೀರವು ಸಿಗುತ್ತದೆ । ನಂತರ ೧೦ನೇ ದಿನದ ಪಿಂಡದಾನದಿಂದ ಆ 'ಪಿಂಡಜ' ಶರೀರಕ್ಕೆ ಚಲಿಸುವ ಶಕ್ತಿಯು ದೊರೆಯುತ್ತದೆ ॥

85. ವಿವಿಧ ರೀತಿಯ ಜನ್ಮಗಳಿಗೆ ಕಾರಣಗಳು (ಬ್ರಹ್ಮವೈವರ್ತಪುರಾಣ)

ಕರ್ಮಣಾ ಜಾಯತೇ ಜಂತುಃ ಕರ್ಮಣೈವ ಪ್ರಲೀಯತೇ ।
ಸುಖಂ ದುಃಖಂ ಭಯಂ ಶೋಕಂ ಕರ್ಮಣೈವ ಪ್ರಪದ್ಯತೇ ॥

ಪ್ರತಿಯೊಂದು ಪ್ರಾಣಿಯೂ ಜನ್ಮಾಂತರ ಕರ್ಮಗಳಿಗನುಗುಣವಾಗಿಯೇ ಜನ್ಮವೆತ್ತಿ ಸಾಯುವುದು । ಸುಖ, ದುಃಖ, ಭಯ, ಶೋಕಗಳೂ ಜೀವಿಯ ಹಿಂದಿನ ಕರ್ಮಕ್ಕನುಗುಣವಾಗಿಯೇ ಬರುವುವು ॥

ಕರ್ಮಣಾ ಕೋಟಿ ಕಲ್ಪಾಯುಃ ಕ್ಷೀಣಾಯುಶ್ಚ ಸ್ವಕರ್ಮಣಾ ।

ಜೀವ ಸಂಚಾರಮಾತ್ರಾಯುರ್ಗರ್ಭೇ ಮೃತ್ಯುಃ ಸ್ವಕರ್ಮಣಾ ॥

ಕೋಟಿಕಲ್ಪಕಾಲ ಜೀವಿಸುವುದಾಗಲೀ, ಕ್ಷೀಣಾಯುವಾಗಲೀ, ಹುಟ್ಟಿದ ಕ್ಷಣದಲ್ಲೇ ಸಾಯುವುದಾಗಲೀ, ಗರ್ಭದಲ್ಲೇ ಸಾಯುವುದಾಗಲೀ ಪ್ರತಿಯೊಂದೂ ಸಹ ಸ್ವಕರ್ಮದ(ನಾವು ಮಾಡಿದ ಕೆಲಸದ) ಫಲವೇ ಆಗಿರುತ್ತದೆ ॥

86. ಅರಳೀ ಮರವನ್ನು ನೆಡಿಸುವುದು ಏಕೆ? (ಬ್ರಹ್ಮವೈವರ್ತಪುರಾಣ)

ಅಶ್ವತ್ಥವೃಕ್ಷಮಾರೋಪ್ಯ ಪ್ರತಿಷ್ಠಾಂ ಚ ಕರೋತಿ ಯಃ ।

ಸ ಯಾತಿ ತಪಸೋ ಲೋಕಂ ವರ್ಷಾಣಾಮಯುತಂ ಪರಮ್ ॥

ಅರಳಿಮರವನ್ನು ನೆಡಿಸಿ, ಅಲ್ಲಿ ನಾರಾಯಣನನ್ನು ಪ್ರತಿಷ್ಠೆ ಮಾಡಿಸುವ ಮನುಷ್ಯನು ತಪೋಲೋಕಕ್ಕೆ ಹೋಗಿ ಅಲ್ಲಿ ಹತ್ತುಸಾವಿರವರ್ಷಗಳು ಸುಖವಾಗಿ ವಾಸಿಸುತ್ತಾರೆ ॥

87. ಪುಣ್ಯದಿವಸಗಳಲ್ಲಿ ದಾನವನ್ನು ಏಕೆ ಮಾಡಬೇಕು? (ಬ್ರಹ್ಮವೈವರ್ತಪುರಾಣ)

ಗೃಹರೇಣು ಪ್ರಮಾಣಾಬ್ದಂ ದಾನಂ ಪುಣ್ಯದಿನೇ ಯದಿ ।

ವಿಪುಲಂ ಸ್ವರ್ಗವಾಸಂ ಚ ಕುರ್ವಂತಿ ಮಾನವಾಃ ಸತಿ ॥

ಮಾನವರು ಪುಣ್ಯದಿನಗಳಲ್ಲಿ ಹೆಚ್ಚಾಗಿ ದಾನಮಾಡಿದರೆ, ತನ್ನ ಮನೆಯ ಧೂಳಿನ ಕಣಗಳಿರುವಷ್ಟು ಸಂಖ್ಯೆಯ ವರ್ಷಗಳು ವಿಪುಲವಾದ ಸ್ವರ್ಗದಲ್ಲಿ ವಾಸಿಸುವರು ॥

88. ಕರ್ಮಫಲವನ್ನು ಅನುಭವಿಸುವಿಕೆಯ ರೀತಿ (ಬ್ರಹ್ಮವೈವರ್ತಪುರಾಣ)

ಸ್ವಧರ್ಮ ರಹಿತಾ ವಿಪ್ರಾ ನಾನಾಯೋನಿಂ ವ್ರಜಂತಿ ಚ ।
ಭುಕ್ತ್ವಾ ಚ ಕರ್ಮಭೋಗಂ ಚ ವಿಪ್ರಯೋನಿಂ ಲಭೇತ್ಪುನಃ ॥

ಸ್ವಧರ್ಮಾಚರಣೆಯನ್ನು ಬಿಟ್ಟ ಬ್ರಾಹ್ಮಣರು ಮುಂದೆ ಕೀಟಾದಿ ಜನ್ಮಗಳನ್ನು ಪಡೆದು । ತಮ್ಮ ಕರ್ಮಫಲವನ್ನು ಅನುಭವಿಸಿ, ಪುನಃ ಬ್ರಾಹ್ಮಣ ಜನ್ಮವನ್ನು ಪಡೆಯುವರು ॥

ಮಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕಲ್ಪಕೋಟಿ ಶತೈರಪಿ ॥

ತಾನು ಮಾಡಿದ ಕರ್ಮದ ಫಲವು, ಅನುಭವಿಸದ ಹೊರತು ಕೋಟಿವರ್ಷಗಳೇ ಆದರೂ ಸಹ ಅದು ಕಳೆಯುವುದಿಲ್ಲ । ಹಾಗಾಗಿ ಎಷ್ಟೇ ಜನ್ಮಗಳಾಗಲಿ ತನ್ನ ಕರ್ಮದ ಫಲವನ್ನು ತಾನೇ ಅನುಭವಿಸಿಯೇ ತೀರಿಸಬೇಕು ॥

ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ।
ದೇವತೀರ್ಥೇ ಸಹಾಯೇನ ಕಾಯವ್ಯೂಹೇನ ಶುದ್ಧ್ಯತಿ ॥

ತಾನು ಮಾಡಿದ ಶುಭ ಅಥವಾ ಅಶುಭ ಕರ್ಮಗಳ ಫಲವನ್ನು ತಾನೇ ಅವಶ್ಯವಾಗಿ ಅನುಭವಿಸಬೇಕು । ಆದರೆ ನಿರಂತರ ದೇವತಾತೀರ್ಥಗಳ ಅನುಗ್ರಹದಿಂದಲೂ ಮತ್ತು ದೇಹದಂಡನೆಯಿಂದಲೂ ಶುದ್ಧಿಹೊಂದಬಹುದು ॥

89. ಅನ್ನದಾನದ ವಿಚಾರ(ಯಮ– ಬ್ರಹ್ಮವೈವರ್ತಪುರಾಣ)

ಅನ್ನದಾನಂ ಚ ವಿಪ್ರಾಯ ಯಃ ಕರೋತಿ ಚ ಭಾರತೇ ।
ಅನ್ನಪ್ರಮಾಣವರ್ಷಂ ಚ ಶಕ್ರಲೋಕೇ ಮಹೀಯತೇ ॥

ಭಾರತದೇಶದಲ್ಲಿ ಬ್ರಾಹ್ಮಣರಿಗೆ ಅನ್ನದಾನ ಮಾಡಿದವನು, ಆ ಅನ್ನದ ಅಗುಳಿರುವಷ್ಟು ಕಾಲ ಇಂದ್ರಲೋಕದಲ್ಲಿ ಸುಖವಾಗಿರುವನು ॥

ಅನ್ನದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ।
ನಾತ್ರ ಪಾತ್ರಪರೀಕ್ಷಾ ಸ್ಯಾನ್ನ ಕಾಲನಿಯಮಃ ಕ್ವಚಿತ್ ॥

ಅನ್ನದಾನಕ್ಕಿಂತ ಉತ್ತಮವಾದ ದಾನವು ಹಿಂದೆಯೂ ಇರಲಿಲ್ಲ, ಮುಂದೆಯೂ ಇರುವುದಿಲ್ಲ । ಅನ್ನದಾನ ಮಾಡಲು ಪಾತ್ರ (ವ್ಯಕ್ತಿ/ಅಂತಸ್ತು) ಪರೀಕ್ಷೆಯಾಗಲೀ – ಕಾಲದ ನಿಯಮವಾಗಲೀ ಇರುವುದಿಲ್ಲ ॥

90. ಮಾಘಮಾಸದಲ್ಲಿ ತೀರ್ಥಸ್ನಾನ ಮತ್ತು ಎಳ್ಳಿನ ವಿಶೇಷತೆ (ಭವಿಷ್ಯಪುರಾಣ)

ಮಾಘಮಾಸೇ ರಂಟಂತ್ಯಾಪಃ ಕಿಂಚಿದಭ್ಯುದಿತೇ ರವೌ ।
ಬ್ರಹ್ಮಘ್ನಂ ವಾ ಸುರಾಪಂ ವಾ ಕಂಕಂತಂತು ಪುನೀಮಹೇ ।
ತಿಲಸ್ನಾಯೀ ತಿಲೋದ್ವರ್ತೀ ತಿಲಭೋಕ್ತಾ ತಿಲೋದಕೀ ।
ತಿಲಹೋತಾ ಚ ದಾತಾ ಚ ಷಟ್ ತಿಲೇನೈನಾವತರತಿ ॥

ಮಾಘಮಾಸದಲ್ಲಿ ತೀರ್ಥಸ್ನಾನ ಮಾಡಿದವನು ಬ್ರಹ್ಮಹತ್ಯೆಯನ್ನೇ ಮಾಡಿರಲಿ, ಕುಡುಕನೇ ಇರಲಿ, ಪಾತಕಿಯೇ ಇರಲಿ ಅವರೆಲ್ಲರನ್ನೂ ಪವಿತ್ರಗೊಳಿಸುತ್ತೇವೆ ಎಂದು ತೀರ್ಥಗಳು ಕರೆಯುತ್ತಿರುತ್ತವೆ। ಮಾಘಮಾಸದಲ್ಲಿ ಎಳ್ಳಿನ ದಾನ – ಎಳ್ಳಿನಸ್ನಾನ – ಎಳ್ಳಿನಊಟ – ಎಳ್ಳಿನ ಲೇಪನ – ಎಳ್ಳುಮಿಶ್ರಿತ ಜಲಪಾನ – ಎಳ್ಳಿನಹೋಮ ಹೀಗೆ ೬ ರೀತಿಯಿಂದ ಎಳ್ಳನ್ನು ಬಳಸುವವನು ಎಲ್ಲ ರೀತಿಯ ಪಾಪಗಳಿಂದಲೂ ಮುಕ್ತನಾಗುತ್ತಾನೆ ॥

91. ಮರ ಬೆಳೆಸುವುದರ ವಿಶೇಷತೆ (ಭವಿಷ್ಯಪುರಾಣ)

ಅಶ್ವತ್ಥಮೇಕಂ ಪಿಚಮಂದಮೇಕಂ
ನ್ಯಗ್ರೋಧಮೇಕಂ ದಶ ತಿಂತ್ರಿಣೀಕಾನ್ ।
ಕಪಿತ್ಥ ಬಿಲ್ವಾಮಲಕೀತ್ರಯಂ ಚ
ಪಂಚಾಮರೋಪೀ ನರಕಂ ನ ಪಶ್ಯೇತ್ ॥

ಒಂದು ಅರಳೀಮರ – ಒಂದು ಬೇವಿನಮರ – ಒಂದು ಆಲದಮರ – ಹತ್ತು ಹುಣಿಸೇಮರ। ಬೇಲ – ಬಿಲ್ವ – ನೆಲ್ಲಿ ಗಿಡಗಳನ್ನು ೩–೩ ಅಥವಾ ಒಂದೊಂದಾದರೂ ನೆಟ್ಟು ಬೆಳಸಿದ ಮನುಷ್ಯನು ಎಂದೂ ನರಕವನ್ನು ನೋಡುವುದಿಲ್ಲ ॥

92. ಭಾನುವಾರದಂದು ಮಾಡಬಾರದ ಕೆಲಸಗಳು (ಸೌರಪುರಾಣ–ಸೂರ್ಯಾಷ್ಟಕ)

ಆಮಿಷಂ ಮಧುಪಾನಂ ಚ ಯಃ ಕರೋತಿ ರವೇರ್ದಿನೇ ।
ಸಪ್ತ ಜನ್ಮ ಭವೇದ್ರೋಗೀ ಪ್ರತಿಜನ್ಮ ದರಿದ್ರತಾ ॥

ಯಾರು ಭಾನುವಾರದಂದು ಮತ್ತುಬರಿಸುವ (ಹೆಂಡ, ಗಾಂಜಾ, ಬೀಡಿ) ಆಹಾರಗಳ ಸೇವನೆಯನ್ನು ಮಾಡುತ್ತಾರೋ। ಅವರು ಮುಂದಿನ ೭ ಜನ್ಮಗಳಲ್ಲಿ ರೋಗಿಷ್ಠನಾಗಿದ್ದು, ದರಿದ್ರನೂ ಆಗುತ್ತಾನೆ ॥

ಸ್ತ್ರೀ ತೈಲ ಮಧು ಮಾಂಸಾನಿ ಯಃ ತ್ಯಜೇತ್ತು ರವೇರ್ದಿನೇ ।
ನ ವ್ಯಾಧಿಃ ಶೋಕ ದಾರಿದ್ರ್ಯಂ ಸೂರ್ಯಲೋಕಂ ಚ ಗಚ್ಛತಿ ॥

ಸ್ತ್ರೀಸುಖ – ತೈಲದ (ಎಣ್ಣೆ) ಉಪಯೋಗ – ಮತ್ತುಬರಿಸುವ ಪದಾರ್ಥಗಳು – ಮಾಂಸ ಇವುಗಳನ್ನು ಯಾರು ಭಾನುವಾರದಂದು ಬಳಸುವುದಿಲ್ಲವೋ। ಅವರಿಗೆ

ಖಾಯಿಲೆಗಳಾಗಲೀ, ದುಃಖವಾಗಲೀ, ದರಿದ್ರತೆಯಾಗಲೀ ಉಂಟಾಗುವುದಿಲ್ಲ ಹಾಗೂ ಅವರು ಸತ್ತಮೇಲೆ ಸೂರ್ಯಲೋಕವನ್ನು ಸೇರುತ್ತಾರೆ ॥

93. ಶಿಕ್ಷೆಯ ವಿಚಾರ (ಮನುಸ್ಮೃತಿ)

ಪಿತಾऽಚಾರ್ಯಃ ಸುಹೃನ್ಮಾತಾ ಭಾರ್ಯಾ ಪುತ್ರಃ ಪುರೋಹಿತಃ ।
ನಾದಂಡ್ಯೋ ನಾಮ ರಾಜ್ಞೋऽಸ್ತಿ ಯಃ ಸ್ವಧರ್ಮೇ ನ ತಿಷ್ಠತಿ ॥

ತಂದೆ, ಆಚಾರ್ಯ, ಮಿತ್ರ, ತಾಯಿ, ಹೆಂಡತಿ, ಮಗ, ಪುರೋಹಿತ । ಧರ್ಮವನ್ನು ಮೀರಿದರೆ ಇವರುಗಳನ್ನೂ ಸಹ ಅವಶ್ಯವಾಗಿ ದಂಡಿಸಬೇಕು ॥

94. ದಾನದ ರೀತಿ (ಅತ್ರಿಸಂಹಿತಾ)

ಅಹನ್ಯಹನಿ ದಾತವ್ಯಂ ಅದೀನೇನಾಂತರಾತ್ಮನಾ ।
ಸ್ತೋಕಾದಪಿ ಪ್ರಯತ್ನೇನ ದಾನಮಿತ್ಯಭಿಧೀಯತೇ ॥

ಪ್ರತಿದಿನವೂ ಮನಸ್ಸಿನಲ್ಲಿ ವ್ಯಥೆಪಡದೇ, ತನಗಿರುವ ಅಲ್ಪದಲ್ಲೇ ಪ್ರಯತ್ನದಿಂದ ಇತರರಿಗೆ ಕೊಡಬೇಕು । ಇದಕ್ಕೆ ದಾನ ಎಂದು ಹೆಸರು ॥

95. ಪಾಪವನ್ನು ಕಳೆದುಕೊಳ್ಳುವ ರೀತಿ (ಮನುಸ್ಮೃತಿ)

ಖ್ಯಾಪನೇನಾನುತಾಪೇನ ತಪಸಾऽಧ್ಯಯನೇನಚ ।
ಪಾಪಕೃನ್ಮುಚ್ಯತೇ ಪಾಪಾತ್ತಥಾ ದಾನೇನ ಚಾಪದಿ ॥

ಪಾಪಮಾಡಿದವನು, ತನ್ನ ಪಾಪವನ್ನು ಹೇಳಿಕೊಳ್ಳುವುದರಿಂದಲೂ – ಪಶ್ಚಾತ್ತಾಪದಿಂದಲೂ – ತಪಸ್ಸಿನಿಂದಲೂ – ಅಧ್ಯಯನದಿಂದಲೂ – ದಾನದಿಂದಲೂ ಮಾಡಿದ ಪಾಪದಿಂದ ಶುದ್ಧನಾಗಬಹುದು ॥

96. ಯಾವ ಯಾವ ಸಮಯಗಳಲ್ಲಿ ಧರ್ಮವನ್ನು ಎರಡನೆಯ ಆದ್ಯತೆಯಾಗಿ ಪರಿಗಣಿಸಬಹುದು (ಪರಾಶರಸ್ಮೃತಿ)

ದೇಶಭಂಗೇ ಪ್ರವಾಸೇ ವಾ ವ್ಯಾಧಿಷು ವ್ಯಸನೇಷ್ವಪಿ ।
ರಕ್ಷೇದೇವ ಸ್ವದೇಹಾದಿ ಪಶ್ಚಾದ್ಧರ್ಮಂ ಸಮಾಚರೇತ್ ॥

ದೇಶದಲ್ಲಿ ಯುದ್ಧ ಮೊದಲಾದ ಆಪತ್ತುಗಳಿದ್ದಾಗ – ಪ್ರಯಾಣದ ಸಮಯದಲ್ಲಿ – ರೋಗಿಯಾಗಿದ್ದಾಗ – ಸಂಕಷ್ಟಗಳು ಬಂದಾಗ। ಮೊದಲು ತನ್ನ ಶರೀರವನ್ನು ಕಾಪಾಡಿಕೊಳ್ಳಬೇಕು, ಆಮೇಲೆ ಧರ್ಮಾಚರಣೆಯ ಕಡೆಗೆ ಗಮನಕೊಡಬಹುದು ॥

97. ಯಾರು ನಿಜವಾದ ಸತ್ಪಾತ್ರರು (ಯೋಗ್ಯರು)? (ಯಾಜ್ಞವಲ್ಕ್ಯ ಸ್ಮೃತಿ)

ನ ವಿದ್ಯಯಾ ಕೇವಲಯಾ ತಪಸಾ ವಾऽಪಿ ಪಾತ್ರತಾ ।
ಯತ್ರ ವೃತ್ತಮಿಮೇ ಚೋಭೇ ತದ್ಧಿ ಪಾತ್ರಂ ಪ್ರಕೀರ್ತಿತಮ್ ॥

ಬರೀ ವಿದ್ಯೆಯಿಂದಾಗಲೀ – ತಪಸ್ಸಿನಿಂದಾಗಲೀ – ಯಾರೂ ಸತ್ಪಾತ್ರನೆನಿಸುವುದಿಲ್ಲ। ಯಾರಲ್ಲಿ ನಡತೆ, ವಿದ್ಯೆ, ತಪಸ್ಸು ಇರುತ್ತವೋ ಅವನೇ 'ಸತ್ಪಾತ್ರ' ॥

98. ಯಾವುವನ್ನು ಮಾಡಬಾರದು? (ಯಾಜ್ಞವಲ್ಕ್ಯ ಸ್ಮೃತಿ)

ನ ಸಂಶಯಂ ಪ್ರಪದ್ಯೇತ ನಾಕಸ್ಮಾದಪ್ರಿಯಂ ವದೇತ್ ।
ನಾಹಿತಂ ನಾನೃತಂ ಚೈವ ನ ಸ್ತೇನಃ ಸ್ಯಾನ್ನ ವಾಧರ್ಷೀ ॥

ಪ್ರಾಣಕ್ಕೇ ಕಂಟಕಬರುವಂತಹ ಕೆಲಸಗಳನ್ನು – ಕಾರಣವಿಲ್ಲದೇ ಉದ್ವೇಗವನ್ನುಂಟುಮಾಡುವ ಕೆಲಸಗಳನ್ನು – ಹಿತವಲ್ಲದ, ಸುಳ್ಳಾದ ಮಾತಾಡುವ ಕೆಲಸಗಳನ್ನು – ಕಳ್ಳತನವನ್ನು – ಬಡ್ಡಿವ್ಯವಹಾರದಿಂದ ಜೀವನವನ್ನು – ಇವುಗಳನ್ನು ಯಾವುದೇ ಕಾರಣಕ್ಕೂ ಮಾಡಬಾರದು ॥

99. ಮನುಷ್ಯನಿಗೆ ಯಾವುದು ಅತೀ ಅವಶ್ಯಕವಾದದ್ದು ? (ಗರುಡಪುರಾಣ–16)

ಸತ್ಸಂಗಶ್ಚ ವಿವೇಕಶ್ಚ ನಿರ್ಮಲಂ ನಯನದ್ವಯಮ್ ।
ಯಸ್ಯ ನಾಸ್ತಿ ನರಃ ಸೋಽಂಧಃ ಕಥಂ ನ ಸ್ಯಾದಮಾರ್ಗತಃ ॥

ಸತ್ಸಂಗತಿ ಮತ್ತು ವಿವೇಕ, ಇವೇ ಮಾನವನ ನಿಜವಾದ ಎರಡು ಕಣ್ಣುಗಳು । ಅವಿಲ್ಲದಿದ್ದರೆ ಮಾನವನು ಕುರುಡನಾಗುತ್ತಾನೆ । ಹೀಗಾಗಿ ಅವನು ಕೆಟ್ಟಮಾರ್ಗದಲ್ಲಿ ನಡೆಯುತ್ತಾನೆ । ಹಾಗಾಗಿ ಇವೆರಡೂ ಮನುಷ್ಯನಿಗೆ ಅವಶ್ಯಕವಾಗಿ ಬೇಕು, ಮತ್ತೂ ಇದಕ್ಕೇ ಪ್ರಯತ್ನ ಮಾಡಬೇಕು ॥

100. ವ್ರತ ಉಪವಾಸ – ಪೂಜೆ – ಹೋಮ ವೇದಪಠನ ಭಜನೆ – ದೇಹದಂಡನೆ, ಇವುಗಳಿಂದ ಮೋಕ್ಷವು ಸಿಗುತ್ತದೆಯೇ ? (ಗರುಡಪುರಾಣ–16)

ನಾಮಮಾತ್ರೇಣ ಸಂತುಷ್ಟಾಃ ಕರ್ಮಕಾಂಡರತಾ ನರಾಃ ।
ಮಂತ್ರೋಚ್ಚಾರಣ ಹೋಮಾದ್ಯೈಃ ಭ್ರಾಮಿತಾಃ ಕೃತುವಿಸ್ತರೈಃ ॥

ಬಹಳ ಜನರು ಕರ್ಮಕಾಂಡದಲ್ಲಿ ಆಸಕ್ತರಾಗಿ, ಮಂತ್ರೋಚ್ಚಾರಣೆ, ಹೋಮ, ಯಜ್ಞ ಮುಂತಾದವುಗಳನ್ನು ಮಾಡುವುದರಲ್ಲಿ ಮಗ್ನರಾಗಿ ಅದರಿಂದಲೇ ಮೋಕ್ಷ ಸಿಗುತ್ತದೆಂದು ತಿಳಿದು ಮೂರ್ಖರಾಗುತ್ತಾರೆ ! । ಆದರೆ **ಜ್ಞಾನಪ್ರಾಪ್ತಿಯಿಲ್ಲದೆ** ಮೋಕ್ಷವು ಖಂಡಿತಾ ಸಿಗುವುದಿಲ್ಲ ॥

ಏಕಭುಕ್ತೋಪವಾಸಾದ್ಯೈಃ ನಿಯಮೈಃ ಕಾಯಶೋಷಣೈಃ ।
ಮೂಢಾಃ ಪರೋಕ್ಷಮಿಚ್ಛಂತಿ ಮಮ ಮಾಯಾವಿಮೋಹಿತಾಃ ॥

ಮತ್ತು ಎಷ್ಟೋ ಜನರು ತಮ್ಮ ದೇಹವನ್ನು ಒಣಗಿಸುವಂತಹ(ದುರ್ಬಲ) ಉಪವಾಸಾದಿ ನಿಯಮಗಳಿಂದ ಮೋಕ್ಷವನ್ನು ಅಪೇಕ್ಷಿಪಟ್ಟು, ಮೂರ್ಖರಾಗುತ್ತಾರೆ। ಅವರು ದೇವಮಾಯೆಯಿಂದ ಮೋಹಿತರಾಗಿರುತ್ತಾರಷ್ಟೇ । **ಜ್ಞಾನವಿಲ್ಲದೇ** ಮೋಕ್ಷವು ಸಿಗುವುದೇ ಇಲ್ಲ ! ॥

ದೇಹದಂಡನ ಮಾತ್ರೇಣ ಕಾ ಮುಕ್ತಿರವಿವೇಕಿನಾಮ್ ।
ವಲ್ಮೀಕತಾಡನಾದೇವ ಮೃತಃ ಕುತ್ರ ಮಹೋರಗಃ ॥

ಮನಸ್ಸಿನಲ್ಲಿ ಅವಿವೇಕತನವನ್ನು ತುಂಬಿಕೊಂಡು, ದೇಹಕ್ಕೆ ದಂಡನೆಯನ್ನು ಕೊಟ್ಟರೆ ಮುಕ್ತಿ ಎಂದಾದರೂ ಆಗುವುದೇ ?। ಹುತ್ತವನ್ನು ಬಡಿದರೆ ಹಾವು ಸಾಯುವುದೇ ??, ಹಾಗಾಗಿ **ಮನಶ್ಶುದ್ಧಿಯಾಗದೇ** ಮುಕ್ತಿಯಾಗಲಾರದು ॥

ಮೃದ್ಭಸ್ಮೋದ್ಧೂಲನಾದೇವ ಮುಕ್ತಾಸ್ಸ್ಯುರ್ಯದಿ ಮಾನವಾಃ ।
ಮೃದ್ಭಸ್ಮವಾಸೀ ನಿತ್ಯಂ ಶ್ವಾನ ಕಿಂ ಮುಕ್ತೋ ಭವಿಷ್ಯತಿ ॥

ಮತ್ತೆ ಕೆಲವುಜನ, ಮೃತ್ತಿಕೆ–ಭಸ್ಮ–ತಿಲಕಗಳನ್ನು ದೇಹದಲ್ಲಿ ಹಚ್ಚಿಕೊಂಡು ಅದರಿಂದಲೇ ಮೋಕ್ಷಸಾಧನೆಯಾಗುತ್ತದೆಂದು ಭ್ರಮಿಸಿರುತ್ತಾರೆ । ಹಾಗಾದರೆ, ದಿನವೂ ಬೂದಿಯಲ್ಲಿ ಹೊರಳಾಡುವ ನಾಯಿ–ಕತ್ತೆಗಳಿಗೂ ಮೋಕ್ಷವು ಸಿಗಬೇಕಲ್ಲವೇ ?? !! ॥

ತೃಣ ಪರ್ಣೋದಕಾಹಾರಾಃ ಸತತಂ ವನವಾಸಿನಃ ।

ಜಂಬೂಕಾಖು ಮೃಗಾದ್ಯಾಶ್ಚ ತಾಪಸಾಸ್ತೇ ಭವಂತಿ ಕಿಮ್ ? ॥

ಮತ್ತೂ ಕೆಲವುಜನ, ಹುಲ್ಲು–ಗೆಡ್ಡೆ–ಗೆಣಸು–ನೀರು, ಇವುಗಳನ್ನು ಮಾತ್ರವೇ ತಿನ್ನತ್ತಾ ತಪಸ್ವಿಗಳಾಗಿದ್ದೇವೆ ಎಂಬ ಭ್ರಮೆಯಲ್ಲಿರುತ್ತಾರೆ । ಕೇವಲ ಇವುಗಳಿಂದ ಮಾತ್ರವೇ ತಪಸ್ವಿಗಳಾಗಬಹುದಾದರೆ, ನರಿ–ಇಲಿ ಮುಂತಾದ ಪ್ರಾಣಿಗಳೂ ಸಹ ತಪಸ್ವಿಗಳೇ ?, ಇವೆಲ್ಲ ಹೇಗೆ ತಪಸ್ವಿಗಳಾಗಲಾರವೋ ಹಾಗೆಯೇ **ಅಧ್ಯಾತ್ಮದ ತತ್ವಜ್ಞಾನ ರಹಿತನಾಗಿ** ಆಚರಿಸುವ ಇಂತಹ ಎಲ್ಲಾ ಕರ್ಮಗಳೂ ವ್ಯರ್ಥವೇ ॥

ಆಜನ್ಮ ಮರಣಾಂತಂ ಚ ಗಂಗಾದಿ ತಟನೀಸ್ಥಿತಾಃ ।

ಮಂಡೂಕ ಮತ್ಸ್ಯ ಪ್ರಮುಖಾ ಯೋಗಿನಸ್ತೇ ಭವಂತಿ ಕಿಮ್ ? ॥

ಭಾವನಾರಹಿತನಾಗಿ ಹಾಗೂ ಕೆಟ್ಟಭಾವನೆಗಳಿಂದ ಆಜನ್ಮ ಮರಣ ಪರ್ಯಂತವೂ ಗಂಗಾದಿ ಪುಣ್ಯನದಿಗಳ ತೀರದಲ್ಲಿ ವಾಸಿಸುವುದರಿಂದ ಯೋಗಿತ್ವವು ಬರುತ್ತದೆ ಎನ್ನುವುದಾದರೆ । ಆ ನೀರಿನಲ್ಲಿಯೇ ವಾಸಿಸುವ ಕಪ್ಪೆ–ಮೀನು–ಮೊಸಳೆಗಳೇಕೆ ಯೋಗಿಗಳಾಗಲಾರವು ? ॥

ತಸ್ಮಾದಿತ್ಯಾದಿಕಂ ಕರ್ಮ ಲೋಕರಂಜನ ಕಾರಕಮ್ ।

ಮೋಕ್ಷಸ್ಯ ಕಾರಣಂ ಸಾಕ್ಷಾತ್ ತತ್ವಜ್ಞಾನಂ ಖಗೇಶ್ವರ ॥

ಮೇಲೆ ಹೇಳಿದವುಗಳೆಲ್ಲವೂ ಕೇವಲ ಲೋಕರಂಜನೆಗಾಗಿ ಇರುತ್ತವೆ । ಎಲೈ ಗರುಡನೇ, ಮೋಕ್ಷಕ್ಕೆ ಕಾರಣವೆಂದರೆ – ಕೇವಲ **ತತ್ವಜ್ಞಾನವು** ಮಾತ್ರವೇ ॥

ಷಡ್ದರ್ಶನ ಮಹಾಕೂಪೇ ಪತಿತಾಃ ಪಶವಃ ಖಗ ।

ಪರಮಾರ್ಥಂ ನ ಜಾನಂತಿ ಪಶುಪಾಶ ನಿಯಂತ್ರಿತಾಃ ॥

ಎಷ್ಟೋಜನರು, ಷಡ್ದರ್ಶನಗಳೆಂಬ ಅಂಧಕೂಪದಲ್ಲಿ ಅಜ್ಞಾನದಿಂದ ಪಶುಗಳಂತೆ ಬೀಳುತ್ತಾರೆ । ಹೀಗೆ ಬ್ರಹ್ಮನನ್ನು ಪ್ರತಿಪಾದಿಸುತ್ತಾರೆ, ಆದರೂ **ಪಾರಮಾರ್ಥವನ್ನು**

ತಿಳಿಯುವುದಿಲ್ಲ, ಕಠಿಣವಾದ ಅರ್ಥಪ್ರತಿಪಾದನಾರೂಪವೆಂಬ ಪಾಶದಿಂದ ಅವರುಗಳು ಬಂಧಿತರಾಗಿರುತ್ತಾರೆ ॥

ವೇದಶಾಸ್ತ್ರಾರ್ಣವೇ ಘೋರೇ ಊಹ್ಯಮಾನಾ ಇತಸ್ತತಃ ।
ಷಡೂರ್ಮಿ ನಿಗ್ರಹಸ್ತಾಸ್ತಿಷ್ಠಂತಿ ಹಿ ಕುತಾರ್ಕಿಕಾಃ ॥

ಎಷ್ಟೋಜನರು ವೇದಶಾಸ್ತ್ರಗಳೆಂಬ ದೊಡ್ಡಸಮುದ್ರದಲ್ಲಿ, ಅನೇಕ ಗ್ರಂಥಾಂತರಗಳನ್ನು ಅಧ್ಯಯನ ಮಾಡಿ, ವ್ಯಾಕುಲರಾಗಿ, ದಣಿದು, ಷಡೂರ್ಮಿಗಳ(ವಾದ) ಎಳೆತದಲ್ಲಿ ಸಿಕ್ಕಿಕೊಂಡು, ಕುತರ್ಕದ ಮಾತುಗಳನ್ನು ಆಡುತ್ತಾರೆ। ಆದರೆ ಅವುಗಳ **ಒಳತತ್ವಗಳ ಕಲ್ಪನೆಯೂ** ಅವರಿಗೆ ಇರುವುದಿಲ್ಲ ॥

ವೇದಾಗಮ ಪುರಾಣಜ್ಞಃ ಪರಮಾರ್ಥಂ ನ ವೇತ್ತಿ ಯಃ ।
ವಿಡಂಬಕಸ್ಯ ತಸ್ಯೈವ ತತ್ಸರ್ವಂ ಕಾಕಭಾಷಿತಮ್ ॥

ಮತ್ತೆ ಕೆಲವರು, ವೇದಾದಿಗಳನ್ನು ಪಠಿಸಿ, ಅದರ **ಪಾರಮಾರ್ಥವನ್ನು ತಿಳಿಯದೇ** ವಿದ್ಯೆಯ ಉಪಹಾಸ್ಯವನ್ನು ಮಾಡುವವರಾಗುತ್ತಾರೆ। ಅಂತಹವರು ವೇದಗಳನ್ನು ಹೇಳುವುದೆಂದರೆ – ಅದು ಕಾಗೆಗಳ ಕಿರುಚುವಿಕೆಯಂತಾಗುತ್ತದೆಯಷ್ಟೇ, ಇದು ನಿರರ್ಥಕವೇ ಸರಿ ॥

101. ಹಾಗಾದರೆ, ಮೋಕ್ಷವು ಹೇಗೆ ದೊರೆಯುತ್ತದೆ (ಗರುಡಪುರಾಣ–16)

ಸಂಸಾರಮೋಹ ನಾಶಾಯ ಶಬ್ದಬೋಧೋ ನ ಹಿ ಕ್ಷಮಃ ।
ನ ನಿವರ್ತೇತ ತಿಮಿರಂ ಕದಾಚಿದ್ದೀಪ ವಾರ್ತಯಾ ॥

ಕೇವಲ ಪರತತ್ವವನ್ನು ಉಪದೇಶಿಸುವುದರಿಂದ ತನ್ನ ಅಜ್ಞಾನ ನಿವೃತ್ತಿಯಾಗುವುದಿಲ್ಲ। ನಾವುಗಳು ದೀಪಗಳ ಬಗ್ಗೆ ಕೇವಲ ಮಾತನಾಡುತ್ತಾ ಕುಳಿತರೆ ಕತ್ತಲೆಯು

ಹೋಗುವುದಿಲ್ಲ, ಹಾಗೆಯೇ ತತ್ವಗಳನ್ನು ಅನುಷ್ಠಾನಗೊಳಿಸಿದಾಗ ಮಾತ್ರ ಅಜ್ಞಾನ ನಿವೃತ್ತಿಯಾಗುತ್ತದೆ ॥

ಪ್ರಜ್ಞಾಹೀನಸ್ಯ ಪಠನಂ ಯಥಾಂಧಸ್ಯ ಚ ದರ್ಪಣಮ್ ।
ಅತಃ ಪ್ರಜ್ಞಾವತಾಂ ಶಾಸ್ತ್ರಂ ತತ್ವಜ್ಞಾನಸ್ಯ ಲಕ್ಷಣಮ್ ॥

ಕುರುಡನಿಗೆ ಕನ್ನಡಿಯು ಹೇಗೆ ಉಪಯೋಗವಾಗಲಾರದೋ, ಅದರಂತೆ ಬುದ್ಧಿಹೀನನ ಓದುವಿಕೆಯೂ ವ್ಯರ್ಥವೇ । ಅದಕ್ಕೆ ಒಳ್ಳೆಯಬುದ್ಧಿವಂತರು, ಶಾಸ್ತ್ರಗಳನ್ನು ಯಥಾರ್ಥವಾಗಿ ಓದಿ, ಅನುಷ್ಠಾನ ಮಾಡುವುದರಿಂದ ತತ್ವಜ್ಞಾನವು ಪ್ರಾಪ್ತಿಯಾಗುತ್ತದೆ ॥

ಅನೇಕಾನಿ ಚ ಶಾಸ್ತ್ರಾಣಿ ಅಲ್ಪಾಯುರ್ವಿಘ್ನ ಕೋಟಯಃ ।
ತಸ್ಮಾತ್ಸಾರಂ ವಿಜಾನೀಯಾತ್ ಕ್ಷೀರಂ ಹಂಸ ಇವಾಂಭಸಿ ॥

ಆದರೆ ಶಾಸ್ತ್ರಗಳು ಅನೇಕವಿದ್ದು, ಆಯುಷ್ಯವು ಮಾತ್ರ ಸ್ವಲ್ಪವಿರುತ್ತದೆ, ಅದರಲ್ಲಿಯೂ ವಿಘ್ನಗಳು ಬಂದುಹೋಗುತ್ತವೆ । ಹಾಗಾಗಿ ಹಂಸಪಕ್ಷಿಯು, ಹಾಲುನೀರಿನಲ್ಲಿ ಹಾಲನ್ನು ಮಾತ್ರ ಸ್ವೀಕರಿಸುವಂತೆ ಶಾಸ್ತ್ರಗಳಲ್ಲಿ ಸಾರವನ್ನು ಮಾತ್ರ ಗ್ರಹಣೆ ಮಾಡಬೇಕು ॥

ಅಭ್ಯಸ್ಯ ವೇದಶಾಸ್ತ್ರಾಣಿ ತತ್ವಂ ಜ್ಞಾತತ್ವಾಥ ಬುದ್ಧಿಮಾನ್ ।
ಪಲಾಲಮಿವ ಧಾನ್ಯಾರ್ಥೀ ಸರ್ವಶಾಸ್ತ್ರಾಣಿ ಸಂತ್ಯಜೇತ್ ॥

ಹಾಗಾಗಿಯೇ ಬುದ್ಧಿವಂತರಾದವರು, ವೇದಶಾಸ್ತ್ರಾದಿಗಳನ್ನು ಓದಿ ಅದರ ತತ್ವಗಳನ್ನು ತಿಳಿದುಕೊಂಡು–ತತ್ವಗಳನ್ನು ಅನುಸರಿಸುತ್ತಾ ಶಾಸ್ತ್ರಗಳನ್ನು ಬಿಡಬೇಕು । ಹೇಗೆ ಧಾನ್ಯಾರ್ಥಿಯು, ಧಾನ್ಯವನ್ನು ತೆಗೆದುಕೊಂಡು ಹೊಟ್ಟನ್ನು ಬಿಡುತ್ತಾನೋ ಹಾಗೇ ತತ್ವಗ್ರಹಣವನ್ನು ಮಾತ್ರ ಮಾಡಬೇಕು ॥

ಯಥಾऽಮೃತೇನ ತೃಪ್ತಸ್ಯ ನಾಹಾರೇಣ ಪ್ರಯೋಜನಮ್ ।
ತತ್ವಜ್ಞಸ್ಯ ತಥಾ ತಾರ್ಕ್ಷ್ಯ ನ ಶಾಸ್ತ್ರೇಣ ಪ್ರಯೋಜನಮ್ ॥

ಅಮೃತದಿಂದ ತೃಪ್ತನಾದವನಿಗೆ ಆಹಾರಾದಿಗಳ ಪ್ರಯೋಜನವು ಹೇಗೆ ಇರುವುದಿಲ್ಲವೋ । ಹಾಗೆ ತತ್ವಜ್ಞಾನಿಗೆ ಎಲೈ ಗರುಡನೇ, ಶಾಸ್ತ್ರಗಳ ಪ್ರಯೋಜನವಿರುವುದಿಲ್ಲ ॥

ನ ವೇದಾಧ್ಯಯನಾನ್ಮುಕ್ತಿಃ ನ ಶಾಸ್ತ್ರಪಠನಾದಪಿ ।
ಜ್ಞಾನಾದೇವ ಹಿ ಕೈವಲ್ಯಂ ನಾನ್ಯಥಾ ವಿನತಾತ್ಮಜ ॥

ಎಲೈ ಗರುಡನೇ, ವೇದಾಧ್ಯಯನದಿಂದಾಗಲೀ, ಶಾಸ್ತ್ರಾಧ್ಯಯನದಿಂದಾಗಲೀ ಮುಕ್ತಿ ಸಿಗುವುದಿಲ್ಲ । ಅವುಗಳ ಒಳತತ್ವಗಳ ಅನುಸಂಧಾನದಿಂದ ಮಾತ್ರ ಮುಕ್ತಿಯಾಗುತ್ತದೆ ॥

ನಾಶ್ರಮಃ ಕಾರಣಂ ಮುಕ್ತೇ ದರ್ಶನಾನಿ ನ ಕಾರಣಮ್ ।
ತಥೈವ ಸರ್ವಕರ್ಮಾಣಿ ಜ್ಞಾನಮೇವ ಹಿ ಕಾರಣಮ್ ॥

ನಾಲ್ಕು ಆಶ್ರಮಗಳು, ಆರು ದರ್ಶನಗಳು ಮತ್ತು ಎಲ್ಲಾ ಕರ್ಮಗಳೂ ಮುಕ್ತಿಗೆ ಕಾರಣವಾಗುವುದಿಲ್ಲ । ಕೇವಲ ಜ್ಞಾನವೊಂದೇ ಮುಕ್ತಿಗೆ ಕಾರಣವು ॥

102. ಹಾಗಾದರೆ, ಅಂತಹ ಜ್ಞಾನವು ಯಾರಿಂದ–ಹೇಗೆ ಸಿಗುತ್ತದೆ ? (ಗರುಡಪುರಾಣ–16)

ಮುಕ್ತಿದಾ ಗುರುವಾಗೇಕಾ ವಿದ್ಯಾ ಸರ್ವಾ ವಿಡಂಬಕಾ ।
ಕಾಷ್ಠಭಾರ ಸಹಸ್ರೇಷು ಹ್ಯೇಕಂ ಸಂಜೀವನಂ ಪರಮ್ ॥

ಮುಕ್ತಿಯನ್ನು ಕೊಡುವುದೆಂದರೆ – ಗುರುವು ಕಲಿಸಿದ ವಿದ್ಯೆಯೊಂದೇ ಆಗಿರುತ್ತದೆ, ಉಳಿದೆಲ್ಲ ವಚನ–ವಾಕ್ಯಗಳೂ ವಿಡಂಬನೆಯಷ್ಟೆ । ಹೇಗೆ ಕಟ್ಟಿಗೆಯ ಹೊರೆಯಲ್ಲಿ ಸಂಜೀವನೀ ಕಟ್ಟಿಗೆಯು ಉಪಯುಕ್ತವೋ ಹಾಗೆ ॥

ಅದ್ವೈತಂ ಹಿ ಶಿವಂ ಪ್ರೋಕ್ತಂ ಕ್ರಿಯಾಯಾಸ ವಿವರ್ಜಿತಮ್ ।
ಗುರುವಕ್ತ್ರೇಣ ಲಭ್ಯೇತ ನಾಧೀತಾಗಮ ಕೋಟಿಭಿಃ ॥

ಈ ಪರಬ್ರಹ್ಮ ತತ್ವವು ಅಧ್ಯಯನಾದಿಗಳಿಂದ ದೊರಕುವುದಲ್ಲ, ಅದು ಕೇವಲ **ಗುರೂಪದೇಶದಿಂದ ಮಾತ್ರವೇ** ದೊರಕುವುದು । ಅನಂತಶಾಸ್ತ್ರಗಳ ಅಧ್ಯಯನ ದಿಂದಲೂ ಇದು ಸಿಗುವುದಿಲ್ಲ ॥

ದ್ವೇ ಪದೇ ಬಂಧಮೋಕ್ಷಾಯ ನ ಮಮೇತಿ ಮಮೇತಿ ಚ ।
ಮಮೇತಿ ಬಧ್ಯತೇ ಜಂತುರ್ನಮಮೇತಿ ಪ್ರಮುಚ್ಯತೇ ॥

ಜಗತ್ತಿನಲ್ಲಿ ಕೇವಲ ಎರಡೇ ಪದಗಳು ಬಂಧ–ಮೋಕ್ಷಗಳಿಗೆ ಕಾರಣವಾಗಿವೆ, ಅವೇ **ಮಮ – ನ ಮಮ** । **ಮಮ(ನನ್ನದು)** ಎನ್ನುವುದರಿಂದ ಬಂಧನವಾದರೆ, **ನ ಮಮ(ನನ್ನದಲ್ಲ)** ಎನ್ನುವುದರಿಂದ ಮೋಕ್ಷವಾಗುತ್ತದೆ ॥

ಯಾವತ್ಕರ್ಮಾಣಿ ದೀಯಂತೇ ಯಾವತ್ಸಂಸಾರ ವಾಸನಾ ।
ಯಾವದಿಂದ್ರಿಯ ಚಾಪಲ್ಯಂ ತಾವತ್ತತ್ವ ಕಥಾ ಕುತಃ ॥

ಎಲ್ಲಿಯವರೆಗೆ ಕರ್ಮಗಳ ಉದಯವಾಗುತ್ತಿರುತ್ತದೋ ಅಲ್ಲಿಯವರೆಗೂ ಸಂಸಾರವಾಸನೆ ಇರುತ್ತದೆ । ಎಲ್ಲಿಯವರೆಗೆ ಇಂದ್ರಿಯಚಾಪಲ್ಯವು ಇರುತ್ತದೋ ಅಲ್ಲಿಯವರೆಗೆ ತತ್ವಜ್ಞಾನವು ಉತ್ಪನ್ನವಾಗುವುದಿಲ್ಲ ॥

ಯಾವನ್ನೋ ಸಮನಸ್ಸ್ಥಲ್ಯಂ ನ ಯಾವಚ್ಛಾಸ್ತ್ರಚಿಂತನಮ್ ।
ಯಾವನ್ನ ಗುರುಕಾರುಣ್ಯೇ ತಾವತ್ತತ್ವಕಥಾ ಕುತಃ ॥

ಎಲ್ಲಿಯವರೆಗೆ ಮನಸ್ಸು ನಿಲ್ಲುವುದಿಲ್ಲವೋ, ಎಲ್ಲಿಯವರೆಗೆ ಶಾಸ್ತ್ರಗಳ ಅನುಸಂಧಾನವು ಆಗುವುದಿಲ್ಲವೋ । ಎಲ್ಲಿಯವರೆಗೆ ಗುರುಕೃಪೆ ಆಗುವುದಿಲ್ಲವೋ ಅಲ್ಲಿಯವರೆಗೆ ತತ್ವಜ್ಞಾನವು ಹುಟ್ಟುವುದಿಲ್ಲ ॥

ತಾವತ್ತಪೋ ವ್ರತಂ ತೀರ್ಥಂ ಜಪ ಹೋಮರ್ಚನಾದಿಕಮ್ ।

ವೇದಶಾಸ್ತ್ರಾಗಮ ಕಥಾ ಯಾವತ್ತತ್ತ್ವಂ ನ ವಿಂದತಿ ॥

ಎಲ್ಲಿಯವರೆಗೆ ತತ್ವಜ್ಞಾನ ಪ್ರಾಪ್ತಿಯಾಗಿರುವುದಿಲ್ಲವೋ, ಅಲ್ಲಿಯವರೆಗೆ ವ್ರತ–ತೀರ್ಥಯಾತ್ರೆ–ಜಪ–ಹೋಮ–ಅರ್ಚನೆ । ವೇದಶಾಸ್ತ್ರ–ಪುರಾಣಾದಿ ಕಥೆಗಳು, ಇವೆಲ್ಲವೂ ಬೇಕಾಗುತ್ತವೆ, ತತ್ವಜ್ಞಾನ ಪ್ರಾಪ್ತವಾಯಿತೆಂದರೆ ಇವುಗಳು ಯಾವುವೂ ಬೇಕಾಗಿಲ್ಲ ॥

ತಸ್ಮಾತ್ ಜ್ಞಾನೇನಾತ್ಮತತ್ವಂ ವಿಜ್ಞೇಯಂ ಶ್ರೀಗುರೋರ್ಮುಖಾತ್ ।

ಸುಖೇನ ಮುಚ್ಯತೇ ಜಂತುರ್ಘೋರ ಸಂಸಾರಬಂಧನಾತ್ ॥

ಹಾಗಾಗಿ ಜ್ಞಾನಗಮ್ಯವಾದ ಆತ್ಮತತ್ವವನ್ನು ತಿಳಿದಿರುವಂತಹ ಗುರುವರ್ಯರಿಂದ ಇದನ್ನು ಪ್ರಾಪ್ತಮಾಡಿಕೊಂಡಂತಹ । ಜೀವಿಯು ಘೋರಸಂಸಾರ ಬಂಧನದಿಂದ ಸುಖರೂಪವಾಗಿ ಮುಕ್ತನಾಗುತ್ತಾನೆ ॥

103. ಜೀವನದಲ್ಲಿ ಬರುವ ಹಿಂಸೆ, ದು:ಖಗಳನ್ನು ಸಂಪೂರ್ಣವಾಗಿ ಪರಿಹರಿಸುವ ಅತ್ಯುತ್ತಮ ಮಾರ್ಗ !, ಪರಿಹಾರಕ್ಕಾಗಿ ಹಣವನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲವೇ ಇಲ್ಲ!!, ಕಷ್ಟ ರಹಿತ ಅತ್ಯುತ್ತಮ ಯಶಸ್ವೀ ಜೀವನವನ್ನು ನಡೆಸಲು ಈ ಕೆಳಕ್ಕೆ ಒಮ್ಮೆ ಭೇಟಿ ಕೊಡಿ!!!

ರಾತ್ರಿಯಲ್ಲಿ ಬೇಗ ಮಲಗುವುದು ಮತ್ತು ಬೆಳಿಗ್ಗೆ ಬೇಗ ಏಳುವುದು ಆರೋಗ್ಯ, ಬಲ, ಬುದ್ಧಿ, ಹಾಗೂ ಧನವನ್ನು ನೀಡುತ್ತದೆ ॥

ಸುಮ್ಮನೆ ಕುಳಿತು ಕಾಲ ಕಳೆಯಬೇಡ, ದೇವರನ್ನು ಭಜಿಸು ಅಥವಾ ಕೆಲಸಮಾಡು ॥

ಬೆಲೆ ಬಾಳುವುದರಲ್ಲಿ ಅತಿ ಬೆಲೆ ಬಾಳುವುದು ಯಾವುದು ? ರಾಮನಾಮ । ಸುಲಭದರಲ್ಲಿ ಅತಿ ಸುಲಭವಾದುದು ರಾಮನಾಮ ॥

ನಿಜ ಹೇಳುವುದಕ್ಕೆ ಸಮನಾಗಿ ಬೇರೆ ಯಾವ ತಪಸ್ಸೂ ಇಲ್ಲಾ ॥

ನಾಲಿಗೆಯನ್ನು ಯಾರು ವಶದಲ್ಲಿ ಇಟ್ಟುಕೊಳ್ಳುತ್ತಾರೋ ಅವನಿಗೆ ಸ್ವರ್ಗವು ಪ್ರಾಪ್ತವಾಗುತ್ತದೆ ॥

ಎಲ್ಲಕ್ಕಿಂತಲೂ ದೊಡ್ಡ ಶಸ್ತ್ರ ಯಾವುದು ? ತಾಳ್ಮೆ ಮತ್ತು ದಯೆ ॥

ಹೊಡೆಯುವುದಾದರೆ ಯಾರನ್ನು ಹೊಡೆಯಬೇಕು ? ಸಿಟ್ಟನ್ನು ಹೊಡೆಯಬೇಕು ॥

ಯಾವನ ಹತ್ತಿರ ಕ್ರೋಧವಿದೆಯೋ ಅವನಿಗೆ ಬೇರೆ ಶತ್ರುವಿನ ಅವಶ್ಯಕತೆ ಏನಿದೆ ? ॥

ಪ್ರಯತ್ನ ಮಾಡುವುದರಿಂದ ಬಡತನವಿಲ್ಲ, ಭಜನೆ ಮಾಡುವುದರಿಂದ ಪಾಪವಿಲ್ಲ ॥

ಮನುಷ್ಯರ ಮನಸ್ಸು, ಆಪತ್ತಿನಲ್ಲಿ ಹರಕೆ – ಸಂಪತ್ತಿನಲ್ಲಿ ಗೊರಕೆ ! ॥

ಈ ದೇಹದಲ್ಲಿ ಅಡಗಿರುವ ಶತ್ರು ಯಾರು ? ಸೋಮಾರಿತನ ॥

ಯಾವನು ಭಗವದ್ಗೀತೆ, ಶ್ರೀಮದ್ಭಾಗವತ ಮತ್ತು ರಾಮಾಯಣವನ್ನು ಅನುಸರಿಸಿ ವ್ಯವಹಾರವನ್ನು ಮಾಡುವುದಿಲ್ಲವೋ ಅವನು ತುಂಬಾ ದು:ಖವನ್ನು ಅನುಭವಿಸಬೇಕಾಗುತ್ತದೆ ॥

ಯಾವ ಮನುಷ್ಯನಲ್ಲಿ ವಿದ್ಯೆ, ತಪಸ್ಸು, ದಾನ, ಜ್ಞಾನ, ಶೀಲ ಗುಣಗಳು ಇರುವುದಿಲ್ಲವೋ ಅವನ ಇರುವಿಕೆಯು ಭೂಮಿಗೆ ಭಾರವಾಗುತ್ತದೆ ॥

ಕೊಟ್ಟ ಮಾತಿನಂತೆ ನಡೆಯದೇ ಅದನ್ನು ಬದಲಾಯಿಸುವವನು ಜೀವಂತ ಶವ ॥

ಸಂಸಾರ (ಪ್ರಾಪಂಚಿಕ) ಸಂಬಂಧವಾದ ಮಾತುಗಳನ್ನು ಬಹಳ ಕಡಿಮೆ ಮಾಡಬೇಕು ॥

'ರುಚಿ' ಕೆಟ್ಟರೆ ಪರವಾಗಿಲ್ಲ, ಆದರೆ 'ಅಭಿರುಚಿ' ಕೆಡಬಾರದು ॥

ಕಾಡಿನಲ್ಲಿವೆ 'ಕಾಡು' ಪ್ರಾಣಿಗಳು, ಆದರೆ ನಾಡಿನಲ್ಲಿವೆ 'ಕಾಡುವ ಪ್ರಾಣಿಗಳು' ಜೋಕೆ ! ॥

~~~~~~~~
~~~~~~~~

ಅನುವಾದಕ ಲೇಖಕರು ಮತ್ತು ಪ್ರಕಾಶಕರು :

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ

ಚೈತನ್ಯ ಗುರುನಾಥ ಪ್ರಕಾಶನ

C/o. ಶ್ರೀಮಾನ್ ಸುಬ್ರಹ್ಮಣ್ಯ ಪ್ರಸಾದ್‌ರವರು

ನಿಸರ್ಗ ಬಡಾವಣೆ, ಭಾರತ್ ಪೆಟ್ರೋಲ್‌ಬಂಕ್ ಎದುರು

ಎಂ.ಆರ್.ಎಸ್. ಬೈಪಾಸ್‌ರಸ್ತೆ, ಶಿವಮೊಗ್ಗ–577202, ಕರ್ನಾಟಕ

ಮೊ : 9686497982